ನವೆಂಬರ್ 10, 2024

40ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1958

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## 28ರ ಹೋಟೆಲ್ ಉದ್ಯಮಿಯ ಅಕ್ರಮ ಸಂಬಂಧಕ್ಕೆ

# ಗಂಡನನ್ನೇ ಮುಗಿಸಿದ 36ರ ಬ್ಯೂಟಿ ಆಂಟಿ!

ಕರಿಮಣಿ ಮಾಲೀಕ ನೀನಲ್ಲ ಎಂದ ರೀಲ್ಸ್ ರಾಣಿ!





## ಗಂಡನಿಗೆ ಮುಹೂರ್ತವಿಟ್ಟ ಹೆಂಡತಿ!

## ಅಪ್ರಾಪ್ತೆಯ ರೇಪ್ ಮಾಡಿದ ಕಾಮುಕನಿಗೆ 20 ವರ್ಷ ಜೈಲು ಶಿಕ್ಷೆ





## ಕ್ಷುಲ್ಲಕ ಕಾರಣಕ್ಕೆ ಮಡದಿಯನ್ನು ಕೊಂದ!

## ಮನೆ ಭಾಗದ ವಿಚಾರಕ್ಕೆ ತಮ್ಮನನ್ನೇ ಕೆಡವಿದ!



# ಕೋಲಾರ : ವನ್ಯ ಜೀವಿಗಳ ಅಂಗಾಂಗಗಳನ್ನು ಅಕ್ರಮವಾಗಿ ಸಂಗ್ರಹಿಸಿದ್ದ ಆರೋಪಿ ಬಂಧನ!

**ವನ್ಯ ಜೀವಿಗಳ ಚರ್ಮ ಮತ್ತು ಇತರೆ ಅಂಗಾಂಗಗಳನ್ನು ಮಾರಾಟ ಮಾಡಲು ಅಕ್ರಮವಾಗಿ ಮನೆಯಲ್ಲಿ ಸಂಗ್ರಹಿಸಿಟ್ಟಿದ್ದ ಆರೋಪಿಯನ್ನು ಬಂಧಿಸಿ ವನ್ಯಜೀವಿ ಅಂಗಾಂಗಗಳನ್ನು ವಶಕ್ಕೆ ಪಡೆಯುವಲ್ಲಿ ಕೋಲಾರ ಜಿಲ್ಲೆಯ ಪೊಲೀಸರು ಯಶಸ್ವಿಯಾಗಿದ್ದಾರೆ.**


**ಕೋಲಾರ**

✍ ಕೋಲಾರ ಮಂಜು

**ಕೋ**ಲಾರ ತಾಲ್ಲೂಕು ಬಂಗಾರಪೇಟೆ ರಸ್ತೆಯಲ್ಲಿರುವ ದಿಂಬಚಾಮನಹಳ್ಳಿಯ ಗೇಟ್ ಬಳಿ ನಿಷೇಧಿತ ವನ್ಯಜೀವಿಗಳ ಅಂಗಾಂಗಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಕಳ್ಳ ಸಾಗಾಟ ನಡೆಸುತ್ತಿರುವ ಬಗ್ಗೆ ಪೊಲೀಸ್


ಎಸ್ಪಿ ನಿಖಿಲ್


ಎಎಸ್ಪಿ ರವಿಶಂಕರ್


ಡಿವೈಎಸ್ಪಿ ನಾಗ್ತೆ

ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್, ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷರಾದ ಸಿ.ಆರ್. ರವಿಶಂಕರ್ ಮತ್ತು ಹೆಚ್‌ಸಿ ಜಗದೀಶ್ ಹಾಗೂ ಉಪ ಪೊಲೀಸ್ ಅಧೀಕ್ಷರಾದ ನಾಗ್ತೆರವರ ಮಾರ್ಗದರ್ಶನದಲ್ಲಿ ಸೈಬರ್ ಪೊಲೀಸ್ ಠಾಣೆಯ ಪಿಐ ಎಸ್.ಆರ್. ಜಗದೀಶ್, ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯ ಪಿಐ ಕೆ. ಕಾಂತರಾಜ್ ರವರ ನೇತೃತ್ವದಲ್ಲಿ ಪಿಎಸ್‌ಐಗಳಾದ ಸುನಿತಾದೇವಿ ಮತ್ತು ವಿ. ಭಾರತಿ, ಸಿಬ್ಬಂದಿಯವರಾದ ಮುರುಳಿ, ಆನಂದ್ ಕುಮಾರ್, ರವಿಕುಮಾರ್, ಶಂಕರ್, ಅಂಬರೀಶ್, ಸಂತೋಷ್, ರಾಜೇಶ್, ಚಂದ್ರಶೇಖರ್ ನಾಯ್ಕ ಮತ್ತು ನಫೀಜ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಅಕ್ಟೋಬರ್ 15ರಂದು ಬೆಳಿಗ್ಗೆ ಕೋಲಾರ-ಬಂಗಾರಪೇಟೆ ರಸ್ತೆಯ ದಿಂಬ ಗೇಟ್‌ನ ಬಸ್ ನಿಲ್ದಾಣದ ಬಳಿ ಅನುಮಾನಸ್ಪದವಾಗಿ ವ್ಯಕ್ತಿಯೊಬ್ಬ ಬಟ್ಟೆಯ ಗಂಟೊಂದನ್ನು ಇಟ್ಟುಕೊಂಡು ಓಡಾಡುತ್ತಿದ್ದವನನ್ನು ವಿಚಾರಣೆ ಮಾಡಲಾಗಿ, ಪೊಲೀಸರನ್ನು ಕಂಡ ತಕ್ಷಣ ವ್ಯಕ್ತಿಯು ಅಲ್ಲಿಂದ ಪರಾರಿಯಾಗಲು ಪ್ರಯತ್ನಿಸಿದ್ದು, ಆಗ ವ್ಯಕ್ತಿಯನ್ನು ಸುತ್ತುವರಿದ ಕ್ರೈಂ ತಂಡವು ಆತನನ್ನು ವಶಕ್ಕೆ ಪಡೆದು, ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಅಪರಿಚಿತ ವ್ಯಕ್ತಿಯ ಬಳಿ ಇದ್ದ ಮೂಟೆಯ ಗಂಟನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಜಿಂಕೆಯ ಎರಡು ಕೊಂಬುಗಳು ಹಾಗೂ ಚುಕ್ಕೆ ಜಿಂಕೆಯ ಒಂದು ಚರ್ಮ ಇದ್ದು, ಆತನನ್ನು ಯಾರು ನೀನು, ಯಾವ ಊರು, ನಿಷೇಧಿತ ವನ್ಯಜೀವಿಗಳ ಅಂಗಾಂಗಗಳನ್ನು ಎಲ್ಲಿಂದ ತಂದಿದ್ದೀರಿ, ಯಾರಿಗೆ ಮಾರಾಟ ಮಾಡಲು ಕಳ್ಳಸಾಗಾಣೆ ಮಾಡುತ್ತಿದ್ದೀರಿ ಎಂದು ಕೇಳಲಾಗಿ, ನನ್ನ ಹೆಸರು ಕಿಶೋರ್‌ಕುಮಾರ್. ಬಂಗಾರಪೇಟೆ ಪಟ್ಟಣದಲ್ಲಿ ವಾಸವಾಗಿದ್ದೇನೆ. ವನ್ಯಜೀವಿಗಳ


ಪಿಐ ಎಸ್.ಆರ್. ಜಗದೀಶ್


ಪಿಐ ಕೆ. ಕಾಂತರಾಜ್


ಪಿಎಸ್‌ಐ ವಿ. ಭಾರತಿ

ಅಂಗಾಂಗಗಳನ್ನು ಬೇರೆ ಬೇರೆ ಕಡೆಗಳಿಂದ ಸಂಗ್ರಹಿಸಿ ಹೆಚ್ಚಿನ ಲಾಭಕ್ಕಾಗಿ ಮಾರಾಟ ಮಾಡುತ್ತೇನೆ. ನನ್ನ ಮೇಲೆ ಇರುವವರು ಹೇಳಿದಂತೆ ಕೇಳಿಕೊಂಡು ಕಮೀಷನ್‌ಗಾಗಿ ಕೆಲಸ ಮಾಡುತ್ತಿದ್ದೇನೆ. ಈಗಾಗಲೇ ಸಾಕಷ್ಟು ವನ್ಯಜೀವಿಗಳ ಅಂಗಾಂಗಗಳನ್ನು ನಮ್ಮ ಮನೆಯಲ್ಲಿ ಸಂಗ್ರಹಿಸಿ ಇಟ್ಟಿದ್ದೇನೆ. ಅವುಗಳನ್ನು ಹೇಳಇದವರಿಗೆ ಹಾಗೂ ನನಗೆ ಬೇಕಾದವರಿಗೆ ನಾನೇ ಹೋಗಿ ತಲುಪಿಸಿ ಹಣವನ್ನು ಪಡೆದುಕೊಳ್ಳುತ್ತೇನೆಂದು ಹೇಳಿದನು.

### ವನ್ಯಜೀವಿಗಳ ಅಂಗಾಂಗಗಳನ್ನು ವಶಕ್ಕೆ ಪಡೆದ ಪೊಲೀಸರು

ವನ್ಯಜೀವಿಗಳ ಅಂಗಾಂಗಗಳನ್ನು ಸಂಗ್ರಹಿಸಿ ಕಳ್ಳ ಸಾಗಾಣಿಕೆ ಮಾಡುತ್ತಿದ್ದ ಬಂಗಾರಪೇಟೆಯ ಕಿಶೋರ್ ಕುಮಾರ್ ನೀಡಿದ ಹೇಳಿಕೆ ಆಧಾರದ ಮೇಲೆ ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ WLOR-01/2024, 8 Wild Life Protection Act 1972 ರಂತೆ ಪ್ರಕರಣವನ್ನು ದಾಖಲಿಸಿಕೊಂಡ ನಂತರ ಆರೋಪಿ ಕಿಶೋರ್‌ಕುಮಾರ್ ತನ್ನ ಮನೆಗೆ ಕರೆದುಕೊಂಡು ಹೋಗಿ ವನ್ಯಜೀವಿಗಳಿಗೆ ಸಂಬಂಧಿಸಿದಂತೆ ಚುಕ್ಕೆ ಜಿಂಕೆಯ 3 ಚರ್ಮಗಳು, 4 ಕಡಲು ಶಂಕಗಳು, ಹುಲಿಯ ಚರ್ಮದಂತೆ ಪಟ್ಟೆ ಪಟ್ಟೆಯಾಗಿ ಬಣ್ಣ ಬಳಿದಿರುವ ಕಾಡುಬೆಕ್ಕಿನ 1 ಚರ್ಮ, ನರಿಯ 2 ಚರ್ಮಗಳು, ಚಿರತೆಯ 2 ಹಲ್ಲುಗಳು ಹಾಗೂ ಕಾಡುಹಂದಿಯ 7 ಹಲ್ಲುಗಳನ್ನು ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ನಂತರ ವನ್ಯಜೀವಿಗಳ ಅಂಗಾಂಗಗಳನ್ನು ವಶಕ್ಕೆ ಪಡೆದ ಮೇಲೆ ಆರೋಪಿ ಕಿಶೋರ್ ಕುಮಾರ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ವನ್ಯಜೀವಿಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗಿರುವ ಇನ್ನುಳಿದ ಆರೋಪಿಗಳ ಬಗ್ಗೆ ಸುಳಿವು ನೀಡಿದ್ದು, ಅದರಂತೆ ಪೊಲೀಸರು ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ಕೋಲಾರ ಜಿಲ್ಲೆಯ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ವನ್ಯಜೀವಿಗಳ ಹಲ್ಲು, ಚರ್ಮ, ಕೊಂಬು ಸೇರಿದಂತೆ ಇತರೆ ಅಂಗಾಂಗಗಳನ್ನು ಸಾಗಾಟ ದಂಧೆಯನ್ನು ಭೇದಿಸುವಲ್ಲಿ ಕೋಲಾರ ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದು, ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್ ಅವರು ಶ್ಲಾಘಿಸಿ ಅಭಿನಂದಿಸಿದ್ದಾರೆ.

### ವನ್ಯಜೀವಿ ಅಂಗಾಂಗಗಳ ವಾಪಸ್ಸಿಗೆ ಆದೇಶ

2023ರ ಬಿಗ್‌ಬಾಸ್ ಸೀಸನ್ 10ರ ಸ್ಪರ್ಧಿ ವರ್ತೂರ್ ಸಂತೋಷ್‌ರವರು ಬಿಗ್‌ಬಾಸ್ ಮನೆಯಲ್ಲಿ ಹುಲಿ ಉಗುರು ಒಲುವ ಲಾಕೇಟ್‌ನ್ನು ತೊಟ್ಟಿರುವುದು ಮತ್ತು ಸಂಗ್ರಹಿಸಿರುವುದು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿಯಲ್ಲಿ ಕಾನೂನು ವಿರುದ್ಧವಾಗಿದ್ದರಿಂದ ಇವರನ್ನು ಬಿಗ್‌ಬಾಸ್ ಮನೆಯಲ್ಲಿಯೇ ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆ ನಂತರ ಮತ್ತೆ ಬಿಗ್‌ಬಾಸ್ ಮನೆಗೆ ವಾಪಸ್ಸು ಕಳುಹಿಸಿ ಕೊಡಲಾಯಿತು. ಆ ಸಂದರ್ಭದಲ್ಲಿ ಕೆಲವು ಜನ ಸಿನಿಮಾ ನಟರು, ರಾಜಕೀಯ ವ್ಯಕ್ತಿಗಳ ಹಾಗೂ ಬಿಸಿನೆಸ್‌ಮ್ಯಾನ್‌ಗಳು ತಮ್ಮ ಕತ್ತಿನಲ್ಲಿ ಹುಲಿ


ಆರೋಪಿ ಕಿಶೋರ್‌ಕುಮಾರ್

ಉಗುರು ಒಲುವ ಲಾಕೇಟ್‌ಗಳನ್ನು ಹಾಕಿಕೊಂಡಿರುವ ಫೋಟೋಗಳು ಸೋಷಿಯಲ್ ಮೀಡಿಯಾಗಳಲ್ಲಿ ಹರಿದಾಡಿತು. ಆ ಸಮಯದಲ್ಲಿ ಇವರು ತೊಟ್ಟಿರುವ ಲಾಕೇಟ್‌ನಲ್ಲಿ ಇರುವುದು ನಿಜವಾದ ಹುಲಿ ಉಗುರೇ ಅಥವಾ ನಕಲಿ ಇರಬಹುದೇ ಎನ್ನುವುದರ ಬಗ್ಗೆ ಕ್ರಮ ಕೈಗೊಂಡ ಇಲಾಖೆಯು ಅನಧಿಕೃತವಾಗಿ ಸಂಗ್ರಹಿಸಿಡಲಾದ ವನ್ಯಜೀವಿಗಳ ಅಂಗಾಂಗಗಳು, ಯಾರ ಬಳಿಯಾದರು ಇದ್ದರೆ ಅಂಥವರು ತಂದು ಒಪ್ಪಿಸುವಂತೆ ಸರ್ಕಾರವು ವನ್ಯಜೀವಿ (ಅಘೋಷಿತ ವನ್ಯಜೀವಿಗಳ ರಕ್ಷಣೆ ಮತ್ತು ಶರಣಾಗತಿ ಅಥವಾ ಪ್ರಾಣಿಗಳ ಟ್ರೋಫಿ ಕರ್ನಾಟಕ) ನಿಯಮ 2024ರ ಅಡಿಯಲ್ಲಿ ವನ್ಯಜೀವಿಗಳ ಅಂಗಾಂಗಗಳನ್ನು ಅರಣ್ಯ ಇಲಾಖೆಯ ಆಯಾ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ ಅಥವಾ ಸ್ಥಳೀಯ ಪೊಲೀಸ್ ಠಾಣೆಯ ಮೂಲಕ ಸಲ್ಲಿಸಬೇಕಾಗಿ ಆದೇಶವನ್ನು ಹೊರಡಿಸಿರುವುದಲ್ಲದೆ ನಿಗಧಿತ ಅವಧಿಯ ನಂತರವೂ ವನ್ಯಜೀವಿ ಅಂಗಾಂಗಗಳನ್ನು ಸಂಗ್ರಹಿಸಿಡುವವರ ಹಾಗೂ ಸಾಗಾಣೆ ಮಾಡುವವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದೆ. ☯


ಚಿರತೆ ಹಲ್ಲು ಹಾಗೂ ನರಿಯ ಚರ್ಮಗಳನ್ನು ಪರಿಶೀಲಿಸುತ್ತಿರುವ ಪಿಐ ಕಾಂತರಾಜ್


ಚುಕ್ಕೆ ಜಿಂಕೆ ಚರ್ಮ ಹಾಗೂ ಹುಲಿ ಚರ್ಮವನ್ನು ಪರಿಶೀಲಿಸುತ್ತಿರುವ ಪಿಎಸ್‌ಐ ಭಾರತಿ ಹಾಗೂ ಪಿಐ ಎಸ್.ಆರ್. ಜಗದೀಶ್


ಕಾಡು ಬೆಕ್ಕಿನ ಚರ್ಮವನ್ನು ಪರಶೀಲಿಸುತ್ತಿರುವ ಪೊಲೀಸರು

# ಕೊಳ್ಳೇಗಾಲ: ಮನೆ ಭಾಗದ ವಿಚಾರಕ್ಕೆ ಒಡಹುಟ್ಟಿದವನ ಹೆಣ ಕೆಡವಿದ ಅಣ್ಣ!


ಕೊಲೆಯಾದ ನಾಗೇಂದ್ರ

**ಜಗತ್ತಿನಲ್ಲಿ ಹೆಣ್ಣು, ಹೊನ್ನು, ಮಣ್ಣು ಈ ಮೂರರ ಮುಂದೆ ಸಂಬಂಧಗಳು ಎಲ್ಲಿ ನಿಲುಕುತ್ತವೆ. ಮಣ್ಣಿಗಾಗಿ ಮನುಷ್ಯ ಯಾರ ಮೇಲಾದರೂ ದೌರ್ಜನ್ಯ ವ್ಯಸಗುತ್ತಾನೆ, ಯಾರನ್ನೂ ಬೇಕಾದರೂ ನಿರ್ಭೀತಿಯಿಂದ ಕೊಲೆ ಮಾಡುತ್ತಾನೆ. ಹಾಗೆಯೇ ಇಲ್ಲೊಬ್ಬ ಕಿರಾತಕ ಅಣ್ಣ ವಾಸದ ಮನೆಗಾಗಿ ದುರಾಸೆ ಬಿದ್ದು ಒಡಹುಟ್ಟಿದ ತಮ್ಮನನ್ನೇ ಅಮಾನುಷವಾಗಿ ಕೊಂದು ಜೈಲು ಸೇರಿದ್ದಾನೆ. ಅಲ್ಲಿಗೆ ಹುಟ್ಟುವಾಗ ಅಣ್ಣ ತಮ್ಮ ಬೆಳೆಯುತ್ತಾ... ಬೆಳೆಯುತ್ತಾ... ದಾಯಾದಿ... ಎಂಬ ನಾಣ್ಣುಡಿಯನ್ನು ಅಕ್ಷರಸಹ ನಿರೂಪಿಸಿದ್ದಾನೆ. ಘಟನೆಯಿಂದ ಇನ್ನು ಬಾಳಿ ಬದುಕಬೇಕಾದ ಅವಿವಾಹಿತ ಅಮಾಯಕ ಯುವಕನೋರ್ವ ಉಸಿರು ಚೆಲ್ಲಿದ್ದಾನೆ. ಒಡಹುಟ್ಟಿದ ಅವಿವೇಕಿ ಅಣ್ಣನ ದುರಾಸೆಯಿಂದ ತಮ್ಮನ ಪ್ರಾಣ ಹಾರಿಹೋಗಿದೆ. ಹಂತಕ ಅಣ್ಣನನ್ನು ಚಾಮರಾಜನಗರ ಪೂರ್ವ ಠಾಣೆ ಪೊಲೀಸರು ಎಡೆಮುರಿ ಕಟ್ಟಿ ಜೈಲಿಗೆ ಬಿಟ್ಟು ಬಂದಿದ್ದಾರೆ.**


ಆರೋಪಿ ಸ್ವಾಮಿ


ತಲೆಗೆ ಪೆಟ್ಟು ಬಿದ್ದಿರುವುದು

**ಕೊಳ್ಳೇಗಾಲ**

✍ ಎಸ್. ಸ್ವಾಮಿ

ಗಡಿ ಜಿಲ್ಲೆ ಚಾಮರಾಜ ನಗರದಿಂದ ದಕ್ಷಿಣಕ್ಕೆ ಮೂರು ಕಿ.ಮೀ. ದೂರದಲ್ಲಿರುವ ಹರದನಹಳ್ಳಿ ಗ್ರಾಮದ ನಾಯಕ ಜನಾಂಗದ ಬೀದಿಯಲ್ಲಿ ಈ ದೃಷ್ಕೃತ್ಯ ನಡೆದಿದೆ. ಇಲ್ಲಿನ ವೆಂಕಟರಂಗ ನಾಯಕರ ಕಿರಿಯ ಮಗ 38 ವರ್ಷದ ನಾಗೇಂದ್ರ ಅಣ್ಣನಿಂದ ಹತನಾಗಿದ್ದಾನೆ.

ಗ್ರಾಮದ ಲೇಟ್ ವೆಂಕಟ ರಂಗ ನಾಯ್ಕ ಹಾಗೂ ನಿಂಗಮ್ಮ ದಂಪತಿಗಳಿಗೆ ಇಬ್ಬರು ಮಕ್ಕಳು. ಮೊದಲನೇಯವನು ತನ್ನ ಒಡಹುಟ್ಟಿದ ತಮ್ಮನನ್ನು ಅಮಾನುಷವಾಗಿ ಕೊಲೆಗೈಯ್ದ ಪಾಪಿ ಅಣ್ಣ ಸುಮಾರು 42 ವರ್ಷದ ಸ್ವಾಮಿ, ಕಿರಿಯ ಮಗ ಕೊಲೆಯಾದ ನಾಗೇಂದ್ರ. ತಮ್ಮನ ಹಂತಕ ಸ್ವಾಮಿ ಚಿಕ್ಕ ವಯಸ್ಸಿನಲ್ಲಿ ಎಲೆಕ್ಟ್ರಿಕಲ್ ವೃತ್ತಿ ಕಲಿತಿದ್ದ. ಆದರೆ ಅದಾಗಲೇ ತನ್ನ ವಯಸ್ಸಿಗೆ ಮೀರಿದ ದುಶ್ಚಟಗಳನ್ನು ಮೈಗೂಡಿಸಿಕೊಂಡಿದ್ದ. ತನ್ನ ಎಲೆಕ್ಟ್ರಿಕಲ್ ಕೆಲಸದಿಂದ ಬರುತ್ತಿದ್ದ ಹಣವನ್ನೆಲ್ಲ ಮೋಜು, ಮಜಾ, ಮಸ್ತಿಗಳಿಗೆ ಬಳಸಿ ಕೊಳ್ಳುತ್ತಿದ್ದ ಸ್ವಾಮಿ ತನ್ನನ್ನು ನಂಬಿದ ತಂದೆ ತಾಯಿ ಗಳಿಗೆ ನಿರಾಸೆ ಉಂಟು ಮಾಡುತ್ತಿದ್ದ. ಆದರೂ ತಂದೆ ವೆಂಕಟರಂಗ ನಾಯ್ಕ ಹಾಗೂ ತಾಯಿ ನಿಂಗಮ್ಮ ಅದಾಗಲೇ ಬೆಳೆದು ನಿಂತ ಮಗನಿಗೆ ಮದುವೆ ಮಾಡಿದರೆ ಸರಿದಾರಿಗೆ ಬರಬಹುದು ಎಂದು ಅದೇ ಗ್ರಾಮದ ಭೀಮ ನಾಯ್ಕ ಎಂಬವರ ಎರಡನೇ ಮಗಳು ಲಕ್ಷ್ಮಿಯನ್ನು ತಂದು ಮದುವೆ ಮಾಡಿದ್ದರು.

ಈಗಲಾದರೂ ಮಗ ಸರಿದಾರಿಗೆ ಬರುತ್ತಾನೆ ಎಂದುಕೊಂಡಿದ್ದ ತಂದೆ ತಾಯಿಗಳಿಗೆ ನಿರಂತರವಾಗಿ ನಿರಾಸೆಯೇ ಕಾದಿತ್ತು ಹುಟ್ಟು ಸುಳಿ ಬೋಳಿಸಿದರೆ ಹೋದಿತೇ. ಮದುವೆಯಾದ ಮೇಲೆ ಸ್ವಾಮಿ ತನ್ನ ಹಳೆ ಚಾಳಿಯನ್ನೇ ಮುಂದುವರಿಸಿದ. ಹೆಂಡತಿ ಲಕ್ಷ್ಮಿಯೊಡನೆ ನೆಟ್ಟಗೆ ಸಂಸಾರ ಮಾಡದ ಈತ ಮತ್ತೊಬ್ಬಳ ಜೊತೆ ಅಕ್ರಮ ಸಂಬಂಧ ಇರಿಸಿಕೊಂಡಿದ್ದ ಈ ನಡುವೆ ಹೆಂಡತಿ ಲಕ್ಷ್ಮಿ ಗಂಡು ಮಗು ಒಂದಕ್ಕೆ ಜನ್ಮ ನೀಡಿದಳು. ಮಗುವಿನ ಮುಖವನ್ನು ನೋಡಿ ಸ್ವಾಮಿ ಇನ್ನು ಮುಂದಾದರು ತನ್ನ ದುಶ್ಚಟಗಳನ್ನು ಬಿಟ್ಟು ನೆಟ್ಟಗೆ ಬದುಕುತ್ತಾನೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದ ಹೆಂಡತಿ ಲಕ್ಷ್ಮಿ ಹಾಗೂ ತಂದೆ ತಾಯಿಗಳಿಗೆ ಅಘಾತ ಕಾದಿತ್ತು. ಇತ್ತ ಹೆಂಡತಿ ಲಕ್ಷ್ಮಿ ಮಡಿಲಿನಲ್ಲಿ ವಂಶದ ಕುಡಿ ಕಿಲಕಿಲನೆ ನಗುತ್ತಿದ್ದರೆ ಅತ್ತ ಸ್ವಾಮಿ ಎಲ್ಲರನ್ನೂ ತೊರೆದು ಅಕ್ರಮ ಸಂಬಂಧವಿರಿಸಿಕೊಂಡಿದ್ದವಳೊಡನೆ ಓಡಿ ಹೋಗಿ ಬೆಂಗಳೂರು ಸೇರಿ ಆಕೆಯೊಡನೆ ಸಂಸಾರ ಹೂಡಿದ.


ಇತ್ತ ಕೈಹಿಡಿದ ಗಂಡ ಬೇರೆಯವಳೊಡನೆ ಓಡಿ ಹೋದ ನಂತರ ಲಕ್ಷ್ಮಿ ತನ್ನ ಎಳೆಯ ಕಂದಮ್ಮನೊಡನೆ ತವರು ಮನೆ ಸೇರಿಕೊಂಡಳು. ಹೇಗೂ.... ತಂದೆ, ತಾಯಿ ಹಾಗೂ ಅಣ್ಣ, ತಮ್ಮನ ಆಶ್ರಯದಲ್ಲಿ ಮಗನ ಭವಿಷ್ಯ ರೂಪಿಸಲು ಮುಂದಾದಳು. ಇತ್ತ ಕಟ್ಟಿಕೊಂಡವಳನ್ನು ಬಿಟ್ಟು ಇಟ್ಟುಕೊಂಡವಳ ಹಿಂದೆ ಹೋದ ಸ್ವಾಮಿಗೆ ಇಟ್ಟುಕೊಂಡವಳು ಇರುವತನಕ, ಕಟ್ಟಿಕೊಂಡವಳು ಕೊನೆಯ ತನಕ ಎಂಬುದರ ಬಗ್ಗೆ ಅದ್ಯಾವಾಗ ಜ್ಞಾನೋದಯವಾಯಿತೋ.... ಅಥವಾ ಆಕೆ ಅದ್ಯಾವ ಗಳಿಗೆಯಲ್ಲಿ ಕೈ ಕೊಟ್ಟಳೋ.... ಬೆಂಗಳೂರು ಬಿಟ್ಟು ನೇರವಾಗಿ ಸ್ವಗ್ರಾಮ ಹರದನಹಳ್ಳಿಗೆ ಬಂದು ತನ್ನ ಭಾಗಕ್ಕೆ ಬಂದಿದ್ದ ಹಳೆಯ ಮನೆಯಲ್ಲಿ ಉಳಿದುಕೊಂಡಿದ್ದ. ಈ ನಡುವೆ ತಂದೆ ವೆಂಕಟ ರಂಗ ನಾಯಕ ಇಹಲೋಕ ತ್ಯಜಿಸಿದ್ದರು.


ಮೃತದೇಹವನ್ನು ಪರಿಶೀಲಿಸುತ್ತಿರುವ ಪೊಲೀಸ್ ಅಧಿಕಾರಿಗಳು

ಇಟ್ಟುಕೊಂಡವಳು ಕೈಕೊಟ್ಟ ಮೇಲೆ ವಾಪಸ್ ಹರದನಹಳ್ಳಿಗೆ ಬಂದ ಸ್ವಾಮಿ ಈಗಲಾದರೂ ನೆಟ್ಟಗೆ ಹೆಂಡತಿ, ಮಗ ತಾಯಿ, ತಮ್ಮನವರನ್ನು ಸೇರಿ ಬದುಕುವ ಪ್ರಯತ್ನ ಮಾಡಲಿಲ್ಲ. ಒಂದು ದಿನವಾದರೂ ಹೆಂಡತಿ, ಮಗು, ತಾಯಿ, ತಮ್ಮ ಯಾರ ಯೋಗಕ್ಷೇಮವನ್ನು ವಿಚಾರಿಸಿಲಿಲ್ಲ ಬದಲಿಗೆ ತಾನು ಕಲಿತಿರುವ ಎಲೆಕ್ಟ್ರಿಕಲ್ ಕೆಲಸದಿಂದ ಬರುವ ಸಂಪಾದನೆಯನ್ನೆಲ್ಲಾ ತನ್ನ ಕುಡಿತದ ಚಟಕ್ಕೆ ಸುರಿಯುತ್ತಿದ್ದ. ದಿನಾಲೂ ಕುಡಿದು ಬಂದು ಗಲಾಟೆ ಮಾಡುತ್ತಿದ್ದ ಸ್ವಾಮಿ ಹೆಂಡತಿ, ಮಕ್ಕಳಿದ್ದರೂ ಬೇವರ್ಸಿಯ ಬದುಕು ಬದುಕುತ್ತಿದ್ದ.


ಎಸ್ಪಿ ಡಾ. ಕವಿತಾ


ಡಿವೈಎಸ್ಪಿ ಲಕ್ಷ್ಮಯ್ಯ



ಸಿಪಿಐ ದಿವಾಕರ್

ಜೀವನೋಪಾಯಕ್ಕಾಗಿ ಚಾಲಕ ವೃತ್ತಿ ಮಾಡಿಕೊಂಡಿದ್ದ ಮೃತ ನಾಗೇಂದ್ರನಿಗೆ 38 ವರ್ಷವಾದರೂ ಇನ್ನೂ ಮದುವೆಯಾಗಿರಲಿಲ್ಲ. ಏಕೆಂದರೆ ತಂದೆ ಬದುಕಿದ್ದಾಗ ಹಿರಿಯ ಮಗ ಸ್ವಾಮಿಗೆ ಹೆಣ್ಣು ನೋಡಿ ಮದುವೆ ಮಾಡಿದ್ದರು. ಈಗ ತಂದೆ ವೆಂಕಟರಂಗ ನಾಯಕ ಬದುಕಿಲ್ಲ. ತಂದೆ ಕಾಲ ನಂತರ ಆಸ್ಥಾನವನ್ನು ಅಣ್ಣ ಸ್ವಾಮಿ ತುಂಬಬೇಕಿತ್ತು. ಸ್ವಾಮಿ ತಂದೆ ಸ್ಥಾನದಲ್ಲಿ ನಿಂತು ತಮ್ಮನಿಗೆ ಕನ್ಯೆ ನೋಡಿ ಮದುವೆ ಮಾಡಬೇಕಿತ್ತು, ಆದರೆ ಬೇಜವಾಬ್ದಾರಿಯ ಸ್ವಾಮಿಗೆ ತಮ್ಮನ ಜೀವನದ ಬಗ್ಗೆ ಕಿಂಚಿತ್ತು ಕಾಳಜಿ ಇರಲಿಲ್ಲ. ತಾಯಿ ನಿಂಗಮ್ಮ ತಾನು ಬದುಕಿರುವಾಗಲೇ ನಾಗೇಂದ್ರನಿಗೆ ಒಂದು ಹೆಣ್ಣು ನೋಡಿ ಮದುವೆ ಮಾಡಬೇಕೆಂದು ತನ್ನ ಬಂಧು ಬಳಗದವರೊಡನೆ ನಾಗೇಂದ್ರನಿಗೆ ಕನ್ಯೆ ಹುಡುಕುತಿದ್ದಳು. ಇತ್ತ ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಚಾಲಕನಾಗಿ ದುಡಿಯುತ್ತಿದ್ದ ನಾಗೇಂದ್ರ, ಆಗಾಗ ಸಗ್ರಾಮ ಹರದನಹಳ್ಳಿಗೆ ಬಂದು ತನ್ನ ತಾಯಿ ನಿಂಗಮ್ಮನನ್ನು ನೋಡಿಕೊಂಡು ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಿದ್ದನು.

ಸ್ವಾಮಿ ಭಾಗಕ್ಕೆ ಬಂದಿದ್ದ ಹಳೆಯ ಮನೆ ಮಳೆ ಬಂದಾಗ ಸೋರುತ್ತಿತ್ತು. ಈ ವೇಳೆ ಸ್ವಾಮಿ ತಮ್ಮ ನಾಗೇಂದ್ರ ಇಲ್ಲದ ವೇಳೆ ತನ್ನ ತಾಯಿಯೊಡನೆ ಹೊಸ ಮನೆಗೆ ಬಂದು ಉಳಿದುಕೊಳ್ಳುತ್ತಿದ್ದ ಎನ್ನಲಾಗಿದೆ. ಅಂದು ಅಕ್ಟೋಬರ್ 28 ಮಂಗಳವಾರ ನಾಗೇಂದ್ರ, ಬೆಂಗಳೂರಿನಿಂದ ಹರದನಹಳ್ಳಿಗೆ ಬಂದಿದ್ದ ಈ ವೇಳೆ ಅಣ್ಣ ಸ್ವಾಮಿ ತನ್ನ ಮನೆಯಲ್ಲಿ ಇರುವುದನ್ನು ಕಂಡು ಕೋಪ ನೆತ್ತಿಗೇರಿದೆ. ಸ್ವಾಮಿಯನ್ನು ಮನೆಯಿಂದ ಹೊರ ಹೋಗುವಂತೆ ನಾಗೇಂದ್ರ ತಾಕೀತು ಮಾಡಿದ್ದಾನೆ. ಮೊದಲೇ ಕುಡಿದು ಬಂದಿದ್ದ ಸ್ವಾಮಿ ನನಗೂ ಹೊಸ ಮನೆಯಲ್ಲಿ ಭಾಗ ಬೇಕೆಂದು ಕ್ಯಾತೆ ತೆಗೆದಿದ್ದಾನೆ. ಈ ವೇಳೆ ಮನೆಯಲ್ಲಿ ಇಬ್ಬರಿಗೂ ಗಲಾಟೆಯಾಗಿದೆ. ನಿನ್ನ ಜೀವಮಾನವಿಡಿ ದುಡಿದ ನಿನ್ನ ಸಂಪಾದನೆಯನ್ನೆಲ್ಲಾ ಮೋಜು, ಮಜಾ, ಮಸ್ತಿಗೆ ಸುರಿದಿದ್ದೀಯಾ... ಕಷ್ಟಪಟ್ಟು ನಾವು ದುಡಿದು ಸಂಪಾದನೆ ಮಾಡಿ ಕಟ್ಟಿಕೊಂಡಿರುವ ಮನೆಯಲ್ಲಿ ನಿನಗೇಕೆ ಭಾಗ ಕೊಡಬೇಕು ಎಂದು ನಾಗೇಂದ್ರ ಅಣ್ಣನ ವಿರುದ್ಧ ತಿರುಗಿ ಬಿದ್ದಿದ್ದಾನೆ. ಇದಕ್ಕೆ ದಕ್ಕದ ಸ್ವಾಮಿ ನನಗೆ

☞ 5


ವಿಚಾರಣೆ ನಡೆಸುತ್ತಿರುವುದು

# 28ರ ಹೋಟೆಲ್ ಉದ್ಯಮಿಯ ಅಕ್ರಮ ಸಂಬಂಧಕ್ಕೆ ಗಂಡನನ್ನೇ ಮುಗಿಸಿದ 36ರ ಬ್ಯೂಟಿ ಆಂಟಿ!



ಆರೋಪಿ ಪ್ರತಿಮಾ

**ಪ್ರಿಯಕರನ ಜೊತೆ ಸೇರಿ ಪತಿಯನ್ನು ಹತ್ಯೆ ಮಾಡಿರುವ ಘಟನೆ ಉಡುಪಿ ಜಿಲ್ಲೆಯನ್ನು ತಲ್ಲಣಿಸಿದೆ. ಪ್ರಿಯಕರ ದಿಲೀಪ್ ಹೆಗ್ಡೆ ಮತ್ತು ಪ್ರತಿಮಾ, ಗಂಡ ಬಾಲಕೃಷ್ಣನಿಗೆ ಸ್ಲೋ ಪಾಯಿಸನ್ ನೀಡಿ ಉಸಿರುಗಟ್ಟಿಸಿ ಸಾಯಿಸಿದ್ದಾರೆ. ಇನ್ನು ಸಾಯಿಸುವ ಮೊದಲು ಪ್ರತಿಮಾ, ಪತಿಯ ಜೊತೆ ಹಲವಾರು ರೀಲ್ಸ್ ಮಾಡಿದ್ದಾಳೆ. ಅದರಲ್ಲೂ ಕರಿಮಣಿ ಮಾಲೀಕ ನೀನಲ್ಲ ಎಂಬ ರೀಲ್ಸ್ ಸಹ ಮಾಡಿದ್ದು, ವೀಡಿಯೋ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಗಂಡನನ್ನು ಪತ್ನಿ ಮತ್ತು ಆಕೆಯ ಪ್ರಿಯಕರ ಸೇರಿ ಸಾಯಿಸಿದ್ದು ಮಾತ್ರ ಭಯಾನಕ.**



ಕೊಲೆಯಾದ ಬಾಲಕೃಷ್ಣ ಪೂಜಾರಿ

ಉಡುಪಿ ಜಿಲ್ಲೆ ಕಾರ್ಕಳ ತಾಲೂಕು ಅಜೆಕಾರಿನಲ್ಲಿ ನಡೆದ ಘಟನೆ ಎಲ್ಲರನ್ನ ತಲ್ಲಣಿಸಿಬಿಟ್ಟಿದೆ. ಇನ್‌ಸ್ಟಾಗ್ರಾಮ್ ಮೂಲಕ ಪರಿಚಯವಾದ ಯುವಕ ದಿಲೀಪ್ ಹೆಗ್ಡೆ ಲವ್‌ನಲ್ಲಿ ಬಿದ್ದಿದ್ದ ಪ್ರತಿಮಾ, ಗಂಡ ಬಾಲಕೃಷ್ಣನಿಗೆ ಸ್ಲೋ ಪಾಯಿಸನ್ ನೀಡಿ ಉಸಿರುಗಟ್ಟಿಸಿ ಸಾಯಿಸಿದ್ದಾರೆ. ನರಳಿ ನರಳಿ ಸಾಯಲಿ ಎಂದು ಗೊತ್ತಾಗದ ಹಾಗೇ ಊಟದಲ್ಲಿ ವಿಷ ಹಾಕಿ ಕೊನೆಗೆ ಇಬ್ಬರು ಸೇರಿ ಉಸಿರುಗಟ್ಟಿಸಿ ಕೊಂದಿದ್ದಾರೆ. ಅಕ್ಟೋಬರ್ 20ರಂದು ಬೆಂಗಳೂರಿನಲ್ಲಿ ಚಿಕಿತ್ಸೆ ಮುಗಿಸಿ ಮನೆಗೆ ಕರೆದುಕೊಂಡು ಬರಲಾಗಿತ್ತು. ಅದೇ ರಾತ್ರಿ, ಬಾಲಕೃಷ್ಣ ಪೂಜಾರಿ ಸಾವನ್ನಪ್ಪಿದ್ದಾನೆ. ಕುಟುಂಬಸ್ಥರೆಲ್ಲ ಅಂತ್ಯಸಂಸ್ಕಾರವನ್ನು ಮುಗಿಸಿದ್ದಾರೆ. ಇದಾಗಿ ಮರಣೋತ್ತರ ಧಾರ್ಮಿಕ ವಿಧಿ ವಿಧಾನಗಳು ನಡೆಯುತ್ತಿದ್ದ ದಿನ ತನ್ನ ಸಹೋದರನ ಬಳಿ ಪ್ರತಿಮಾ ನಡೆದ ಘಟನೆಯನ್ನು ಬಿಚ್ಚಿಟ್ಟಿದ್ದಾಳೆ. ಪ್ರಿಯಕರ ದಿಲೀಪ್ ಜೊತೆ ಸೇರಿ ಸ್ಲೋ ಪಾಯಿಸನ್ ನೀಡಿದ್ದು, ಉಸಿರುಗಟ್ಟಿಸಿ ಸಾಯಿಸಿದ್ದನ್ನು ಒಪ್ಪಿಕೊಂಡಿದ್ದಾಳೆ.

ಅನ್ಯೋನ್ಯ ಸಂಸಾರ ಮಾಡಿದ್ದ ಪತ್ನಿ ಗಂಡನನ್ನು ಮುಗಿಸಿದ ಕಥೆಯಿದು. ಬಾಲಕೃಷ್ಣ ಪೂಜಾರಿ ಮತ್ತು ಪತ್ನಿ ಪ್ರತಿಮಾ 17 ವರ್ಷದ ಹಿಂದೆ ಮದುವೆಯಾಗಿದ್ದು, ಎರಡು ಮಕ್ಕಳು ಸಹ ಇವೆ. ಆದರೆ, 2020ರಲ್ಲಿ ಕರೋನ ಮಹಾಮಾರಿ ಆವರಿಸಿಕೊಂಡ ನಂತರ ಕುಟುಂಬ ಮುಂಬೈನಿಂದ ಅಜೆಕಾರಿಗೆ ಶಿಫ್ಟ್ ಆಗಿತ್ತು. ಹೊಸ ಮನೆ ಒಂದನ್ನು ಕಟ್ಟಿಸಿದ್ರು. ಅಜೆಕಾರು ಜಂಕ್ಷನ್‌ನಲ್ಲಿ ಬ್ಯೂಟಿ ಪಾರ್ಲರ್ ಮಾಡಿಕೊಂಡಿದ್ದ ಪ್ರತಿಮಾ ಮತ್ತು ಕಾರ್ಕಳದಲ್ಲಿ ಬಿಸಿನೆಸ್ ಮ್ಯಾನ್ ಆಗಿರುವ ದಿಲೀಪ್ ಹೆಗ್ಡೆ ಪರಿಚಯ ಆಗಿದೆ. ಪರಿಚಯ ಪ್ರೀತಿಗೆ ತಿರುಗಿ ಬಹಳ ಸಮಯದಿಂದ ಇಬ್ಬರು ಜೊತೆಗೆ ಓಡಾಡಿಕೊಂಡಿದ್ದರು. ಕಾಲೇಜು ಕ್ಯಾಂಟೀನ್ ಮಾಡಿಕೊಂಡಿದ್ದ ಗಂಡನಿಗೆ, ಪ್ರತಿಮಾ ಮನೆಗೂ ಆಕೆಯ ಸಂಬಂಧದ ಬಗ್ಗೆ ತಿಳಿದು ಜಗಳ ಆಗಿದೆ. ಪೊಲೀಸ್ ಠಾಣೆಯವರೆಗೂ ತಲುಪಿ, ಎರಡು ಕುಟುಂಬದ ಪಂಚಾಯಿತಿ ನಡೆಸಿ ಸುಸೂತ್ರವಾಗಿ ಸಂಸಾರವನ್ನು ನಡೆಸಿಕೊಂಡು ಹೋಗುವುದಾಗಿ ಮುಚ್ಚಳಿಕೆ



ಆರೋಪಿ ದಿಲೀಪ್ ಹೆಗ್ಡೆ

ಬರೆದಿದ್ದರು. ಇಷ್ಟಾಗಿ, ಕಳೆದ ಒಂದು ತಿಂಗಳಿಂದ ಬಾಲಕೃಷ್ಣ ಪೂಜಾರಿಗೆ ಅನಾರೋಗ್ಯ ಕಾಣಿಸಿಕೊಂಡಿದೆ. ನಿರಂತರ ಜ್ವರ, ವಾಂತಿ ಆಗುತ್ತಿತ್ತು. ಕಾಮಾಲೆ ರೋಗ ಇದೆ ಎಂದು ಕಾರ್ಕಳ, ಮಣಿಪಾಲ ಕೆಎಂಸಿ, ಬೆಂಗಳೂರಿನ ನಿಮ್ಹಾನ್ಸ್, ವಿಕ್ಟೋರಿಯಾ ಮಂಗಳೂರಿನ ವೆಲ್ಲಾಕ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪತ್ನಿ ಕುಟುಂಬಸ್ಥರು ಕೊಡಿಸಿದ್ದಾರೆ. ಬಳಿಕ ಮನೆಗೆ ಕರೆದುಕೊಂಡು ಬಂದು ಒಂದು ದಿನ ರಾತ್ರಿ ಪ್ರಿಯಕರನ ಜೊತೆ ಸೇರಿಸಿ ಉಸಿರುಗಟ್ಟಿಸಿ ಕೊಂದಿದ್ದಾಳೆ.

**ಬ್ಯೂಟಿಷಿಯನ್ ಪ್ರತಿಮಾಗೆ ರೀಲ್ಸ್ ಮಾಡುವ ಹುಚ್ಚು**

ಪ್ರತಿಮಾ ಬ್ಯೂಟಿಷಿಯನ್ ಆಗಿ ದುಡಿಯುತ್ತಿದ್ದಳು. ಮದುವೆ ಮನೆಗಳಿಗೆ ಹೋಗಿ ನವಜೋಡಿಗಳ ಅಲಂಕಾರ ಮಾಡುತ್ತಿದ್ದಳು. ನೋಡುವುದಕ್ಕೂ ಸ್ಪುರದ್ರೂಪಿಯಾದ ಕಾರಣ ರೀಲ್ಸ್ ಮಾಡುವ ಚಾಳಿ ಬೆಳೆಸಿಕೊಂಡಿದ್ದಳು. ಲೈಕ್‌ಗಳ ಆಸೆಗೆ ಬಿದ್ದು ಡ್ರಿಂಕ್ಸ್ ಮಾಡುವುದನ್ನು ಹೆಚ್ಚಾಗಿ ಬಳಸಿಕೊಂಡಿದಳು. ಗಂಡ ಬಾಲಕೃಷ್ಣ ಪೂಜಾರಿಯನ್ನೇ ಪಕ್ಕದಲ್ಲಿ ಇರಿಸಿಕೊಂಡು ಕರಿಮಣಿ ಮಾಲೀಕ ನಿನ್ನಲ್ಲ ಎಂದು ರೀಲ್ಸ್ ಮಾಡಿಬಿಟ್ಟಿದ್ದಳು. ಮಡದಿಯ ಒತ್ತಾಯಕ್ಕೆ ಬಿದ್ದು ಬಾಲಕೃಷ್ಣ ಕೂಡ ನೀಡುತ್ತಿದ್ದನು. ಇದೀಗ ಕರಿಮಣಿ ಮಾಲಿಕ ನೀನಲ್ಲ ಎಂದು ಗಂಡನ ಜೊತೆ ರೀಲ್ಸ್ ಮಾಡಿದ್ದ ಪ್ರತಿಮಾ ತನ್ನ ಗಂಡನಿಗೆ ಸ್ಲೋ ಪಾಯಿಸನ್ ನೀಡಿ ಸಾಯಿಸಿದ್ದಾಳೆ

☞ 5

# ಬಾಲಕೃಷ್ಣ ಹತ್ಯೆ: ಆರೋಪಿಗಳ ಐದು ತಿಂಗಳ ಕೊಲೆ ಸಂಚು ಬಯಲು

ಉಡುಪಿಯಲ್ಲಿ ನಡೆದ ರೋಚಕ ಕೊಲೆ ಪ್ರಕರಣದಲ್ಲಿ ಪತ್ನಿ ಪ್ರತಿಮಾ ಮತ್ತು ಆಕೆಯ ಪ್ರಿಯಕರ ದಿಲೀಪ್ ಹೆಗ್ಡೆ ಅವರ ಸಂಚು ಬಯಲಾಗಿದೆ. ಸ್ಲೋ ಪಾಯ್ಸನ್ ಬಳಸಿ ಬಾಲಕೃಷ್ಣನನ್ನು ಕೊಲ್ಲಲು ಐದು ತಿಂಗಳುಗಳ ಹಿಂದೆ ಯೋಜನೆ ರೂಪಿಸಲಾಗಿತ್ತು. ಆರೋಪಿಗಳು ಕೊಲೆ ಯೋಜನೆ ರೂಪಿಸಿದ್ದು ಹೇಗೆ? ಎಂಬ ಸತ್ಯ ಬಯಲಾಗಿದೆ.

ಪತಿ ಬಾಲಕೃಷ್ಣನನ್ನು (44) ಕೊಲೆ ಮಾಡಲು ಪತ್ನಿ ಪ್ರತಿಮಾ ಮತ್ತು ಆಕೆಯ ಪ್ರಿಯಕರ ಹೇಗೆ ಪ್ಲಾನ್ ಮಾಡಿದ್ದರು ಎಂಬ ರೋಚಕ ಅಂಶ ಬಯಲಾಗಿದೆ. ಬಾಲಕೃಷ್ಣ ಅವರನ್ನು ಕೊಲೆ ಮಾಡಲು ಆರೋಪಿಗಳು ಐದು ತಿಂಗಳ ಹಿಂದೆಯೇ ಸಂಚು ರೂಪಿಸಿದ್ದರು. ಬಾಲಕೃಷ್ಣ ಅವರಿಗೆ ಸ್ಲೋ ಪಾಯ್ಸನ್ ನೀಡಿ ಕೊಲೆ ಮಾಡಬೇಕೆಂದು ಆರೋಪಿಗಳು ಮೊದಲೆ ನಿರ್ಧರಿಸಿದ್ದರು. ಅದರಂತೆ, ಬಾಲಕೃಷ್ಣ ಅವರನ್ನು ಕೊಲೆ ಮಾಡಲು ಪ್ರತಿಮಾ ಪ್ರಿಯಕರ ದಿಲೀಪ್ ಹೆಗ್ಡೆ ಸ್ಲೋ ಪಾಯ್ಸನ್‌ಗಾಗಿ ಹುಡುಕಾಟ ನಡೆಸಿದ್ದನು. ಸ್ಲೋ ಪಾಯ್ಸನ್ ಹೇಗೆ ಕಾರ್ಯ ನಿರ್ವಹಿಸುತ್ತದೆ? ಯಾವ ಸ್ಲೋ ಪಾಯ್ಸನ್ ನೀಡಿದರೆ ವ್ಯಕ್ತಿ ಸಾಯುತ್ತಾನೆ ಎಂದು ಆರೋಪಿ ದಿಲೀಪ್ ಹೆಗ್ಡೆ ಗೂಗಲ್‌ನಲ್ಲಿ ಹುಡುಕಾಡಿದ್ದನು. ಆಗ, ಆರ್ಸೆನಿಕ್ ಟ್ರೈಆಕ್ಸೈಡ್ ಎಂಬ ರಾಸಾಯನಿಕ ವಸ್ತು ಬಗ್ಗೆ ತಿಳಿದಿದೆ.

ನಂತರ, ಆರ್ಸೆನಿಕ್ ಟ್ರೈಆಕ್ಸೈಡ್ ಹೇಗೆ ಕಾರ್ಯ ನಿರ್ವಹಿಸುತ್ತದೆ? ಆರ್ಸೆನಿಕ್ ಟ್ರೈಆಕ್ಸೈಡ್ ಸೇವಿಸಿದ ಮೇಲೆ ಎಷ್ಟು ದಿನದ ಬಳಿಕ ಮನುಷ್ಯ ಸಾಯುತ್ತಾನೆ ಎಂಬೆಲ್ಲ ವಿಚಾರದ ಬಗ್ಗೆ ತಿಳಿದುಕೊಂಡಿದ್ದಾನೆ. ಇನ್ನು, ಆರ್ಸೆನಿಕ್ ಟ್ರೈಆಕ್ಸೈಡ್ ರಾಸಾಯನಿಕ ವಸ್ತು ಹೆಚ್ಚು ವಿಷಕಾರಿ ಮತ್ತು ಬಹುಮುಖ ಸಂಯುಕ್ತ ವಸ್ತು. ಇದನ್ನು ಶಾಲಾ-ಕಾಲೇಜುಗಳ ಲ್ಯಾಬ್‌ಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಬಿಳಿ, ಹಳದಿ ಬಣ್ಣದ ಪುಡಿ. ವಾಸನೆ ಇರುವುದಿಲ್ಲ.

ಆರೋಪಿ ದಿಲೀಪ್ ಹೆಗ್ಡೆ ಜೂನ್ ತಿಂಗಳಲ್ಲಿ ಉಡುಪಿಯ ರಮನ್ಸ್ ಲ್ಯಾಬ್‌ನಲ್ಲಿ ಆರ್ಸೆನಿಕ್ ಟ್ರೈಆಕ್ಸೈಡ್ ಬಗ್ಗೆ ವಿಚಾರಿಸಿದ್ದಾನೆ. ಆಗ, ಆರ್ಸೆನಿಕ್ ಟ್ರೈಆಕ್ಸೈಡ್ ಅನ್ನು ಶಾಲಾ-ಕಾಲೇಜುಗಳ ಲ್ಯಾಬ್‌ಗಳಲ್ಲಿ ಬಳಸಲಾಗುತ್ತದೆ ಎಂದು ತಿಳಿದುಕೊಂಡಿದ್ದಾನೆ. ಅಲ್ಲದೇ, ಈ ಆರ್ಸೆನಿಕ್ ಟ್ರೈಆಕ್ಸೈಡ್ ಪೌಡರ್ ಅನ್ನು ಶಾಲಾ-ಕಾಲೇಜುಗಳಿಗೆ ಹೊರತುಪಡಿಸಿ ಹೊರಗಿನವರಿಗೆ ಸಿಗುವುದಿಲ್ಲ ಎಂಬುವುದನ್ನೂ ತಿಳಿದಿದ್ದಾನೆ.

ಬಳಿಕ, ದಿಲೀಪ್ ಹೆಗ್ಡೆ ತಾನು ವೈದಕೀಯ ವಿದ್ಯಾರ್ಥಿ, ಲ್ಯಾಬ್ ಬಳಕೆಗಾಗಿ ಆರ್ಸೆನಿಕ್ ಟ್ರೈಆಕ್ಸೈಡ್ ಬೇಕಾಗಿದೆ ಅಂತ ಉಡುಪಿಯ ರಮನ್ಸ್ ಲ್ಯಾಬ್‌ಗೆ ಕರೆ ಮಾಡಿ, ಆರ್ಡರ್ ಮಾಡಿದ್ದಾನೆ. ಬಳಿಕ, ರಮನ್ಸ್ ಲ್ಯಾಬ್‌ಗೆ ತೆರಳಿ ಹಣ ಪಾವತಿ ಮಾಡಿದ್ದಾನೆ. ಒಂದು ವಾರದ ಬಳಿಕ ರಮನ್ಸ್ ಲ್ಯಾಬ್ ಸಿಬ್ಬಂದಿ ಆರೋಪಿ ದಿಲೀಪ್ ಹೆಗ್ಡೆಗೆ ಕರೆ ಮಾಡಿ ವಿಳಾಸ ಕೇಳಿದ್ದಾರೆ. ನಂತರ, ಲ್ಯಾಬ್ ಸಿಬ್ಬಂದಿ ದಿಲೀಪ್ ವಿಳಾಸಕ್ಕೆ ಆರ್ಸೆನಿಕ್ ಟ್ರೈಆಕ್ಸೈಡ್ ಪಾರ್ಸೆಲ್ ಕಳಿಸಿದ್ದಾರೆ.

ಖರೀದಿ ಮಾಡಿದ್ದ ಆರ್ಸೆನಿಕ್ ಟ್ರೈಆಕ್ಸೈಡ್ ಅನ್ನು ಆರೋಪಿ ದಿಲೀಪ್ ಎರಡು ಪ್ರತ್ಯೇಕ ಬಾಟಲಿಗಳಲ್ಲಿ ತುಂಬಿದ್ದಾನೆ. ಬೇರೆ ಬಾಟಲಿಗೆ ತುಂಬಿದ್ದ ಆರ್ಸೆನಿಕ್ ಟ್ರೈಆಕ್ಸೈಡ್ ಪೌಡರ್ ಅನ್ನು ಪಾರ್ಲರ್‌ನಲ್ಲಿದ್ದ ಪ್ರೇಯಸಿ ಪ್ರತಿಮಾಳಿಗೆ ನೀಡಿದ್ದಾನೆ. ಆಗಸ್ಟ್‌ವರೆಗೆ ಕಾದು, ನಂತರ ಸ್ಲೋ ಪಾಯ್ಸನ್ ನೀಡುವಂತೆ ಪ್ರೇಯಸಿ ಪ್ರತಿಮಾಗೆ ಹೇಳಿದ್ದಾನೆ. ಅದರಂತೆ, ಪತ್ನಿ ಪ್ರತಿಮಾ ಗಣೇಶೋತ್ಸವ ಸಮಯದಲ್ಲಿ ಊಟದಲ್ಲಿ ಸ್ಲೋ ಪಾಯ್ಸನ್ ಬೆರೆಸಿ ಪತಿ ಬಾಲಕೃಷ್ಣ ಅವರಿಗೆ ನೀಡಲು ಆರಂಭಿಸಿದ್ದಾಳೆ. ಹೀಗೆ ಪ್ರತಿನಿತ್ಯ ಸ್ವಲ್ಪ ಸ್ವಲ್ಪ ಊಟದಲ್ಲಿ ಬೆರೆಸಿ ನೀಡಿದ್ದಾಳೆ. ದಿನಗಳು ಕಳದಂತೆ ಮೃತ ಬಾಲಕೃಷ್ಣ ಮಾನಸಿಕ ಹಾಗೂ ದೈಹಿಕ ಕ್ಷಮತೆ ಕಳೆದುಕೊಳ್ಳುತ್ತಾ ಹೋದನು.

ಆಗಸ್ಟ್ ತಿಂಗಳಲ್ಲಿ ಇವರಿಬ್ಬರ ಅಕ್ರಮ ಸಂಬಂಧ ಬಾಲಕೃಷ್ಣನಿಗೆ ತಿಳಿದಿದೆ. ಗಲಾಟೆಯಾಗಿ ವಿಚಾರ ಪೊಲೀಸ್ ಠಾಣೆ ಮೆಟ್ಟಿಲು ಏರಿದೆ. ಇದೇ ಸಿಟ್ಟಿನಲ್ಲಿ ಪ್ರತಿಮಾ ಆರ್ಸೆನಿಕ್ ಟ್ರೈಆಕ್ಸೈಡ್ ಪೌಡರ್ ಅನ್ನು ಊಟದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆರೆಸಲು ಆರಂಭಿಸಿದ್ದಾಳೆ. ಇದರಿಂದ ಇನ್ನಷ್ಟು ಆರೋಗ್ಯ ಹದಗೆಟ್ಟು ಬಾಲಕೃಷ್ಣ ಆಸ್ಪತ್ರೆಗೆ ದಾಖಲಾಗಿದ್ದಾನೆ. ಬಾಲಕೃಷ್ಣ ಸಾವಿನಿಂದ ಪಾರಾಗಿದ್ದಾನೆ. ಇದರಿಂದ ಸಿಟ್ಟಿಗೆದ್ದ ಆರೋಪಿಗಳು ಬಾಲಕೃಷ್ಣನನ್ನು ಉಸಿರುಗಟ್ಟಿಸಿ ಕೊಂದಿದ್ದಾರೆ.

4 ☞

### ಇನ್‌ಸ್ಟಾಗ್ರಾಮ್ ಮೂಲಕ ಪರಿಚಯವಾದ ದಿಲೀಪ್

ದಿಲೀಪ್ ಕಾರ್ಕಳದ ಪ್ರತಿಷ್ಠಿತ ಉದ್ಯಮಿ. ಕಾರ್ಕಳ ಪೇಟೆಯಲ್ಲಿರುವ ಬಾಲಾಜಿ ಎಂಬ ಲಾಡ್ಜ್ ಕಮ್ ರೆಸ್ಟೋರೆಂಟ್ ಮಾಲೀಕರ ಮಗ. ವಯಸ್ಸು ಇನ್ನು 28. ಇನ್‌ಸ್ಟಾಗ್ರಾಮ್ ಮೂಲಕ ಈತನಿಗೂ ಪ್ರತಿಮಾಗೂ ಪರಿಚಯವಾಗಿದ್ದು, ಪರಿಚಯ ಸ್ನೇಹವಾಗಿದೆ. ಸ್ನೇಹ ಒಂದು ಹೆಜ್ಜೆ ಮುಂದೆ ಹೋಗಿ ಇಬ್ಬರಿಗೂ ಅನ್ಯೋನ್ಯತೆ ಬೆಳೆಯುತ್ತೆ. ಇಬ್ಬರು ಒಟ್ಟಿಗೆ ಓಡಾಡುವುದನ್ನು ಊರ ಜನ ಎಲ್ಲ ಗಮನಿಸಿದ್ದಾರೆ. ಪತಿಗೂ ವಿಚಾರ ತಿಳಿಸಿದ್ದಾರೆ. ಸಾಕಷ್ಟು ಬುದ್ಧಿವಾದ ಹೇಳಿದರೂ ಇವರ ವರ್ತನೆಯಲ್ಲಿ ಬದಲಾವಣೆಯಾಗಿಲ್ಲ. ಒಂದೆರಡು ಬಾರಿ ಪೊಲೀಸ್ ಠಾಣೆಗೂ ಈ ವಿಚಾರ ಹೋಗಿತ್ತು. ಆದರೆ ತನ್ನ ಪತ್ನಿಯ ಮೇಲೆ ವಿಪರೀತ ವ್ಯಾಮೋಹ ಹೊಂದಿದ್ದ ಬಾಲಕೃಷ್ಣ, ಎಲ್ಲೂ ಕೂಡ ಪ್ರತಿಮಾಳನ್ನು ಬಿಟ್ಟುಕೊಟ್ಟಿಲ್ಲ. ಚೆನ್ನಾಗಿಯೇ ಸಂಸಾರ ಮಾಡುವ ಭರವಸೆ ಹೊತ್ತು ಮಡದಿಯನ್ನು ವಹಿಸಿಕೊಂಡು ಮಾತನಾಡಿದ್ದನು. ಇವರ ಸಂಸಾರದಲ್ಲಿ ಎಲ್ಲವೂ ಸರಿಯಾಗಿದೆ ಎಂದು ಮನೆಯವರು ಭಾವಿಸಿದ್ದರು.


### ಪ್ರಿಯತಮೆಗಾಗಿ ಸಂಚು ಮಾಡಿದ ದಿಲೀಪ್ ಹೆಗ್ಡೆ

ಪ್ರತಿಮಾಳ ಸೋಶಿಯಲ್ ಲೈಫ್ ಕಂಡು, ದಿಲೀಪ್‌ಗೆ ಆಕೆಯ ಬಗ್ಗೆ ವಿಪರೀತ ವ್ಯಾಮೋಹ ಹುಟ್ಟಿತ್ತು. ಆಕೆ ಏನು ಹೇಳಿದರೂ ಈತ ಮಾಡಲು ತಯಾರಿದ್ದ. ಇಬ್ಬರು ಸೇರಿ ಬಾಲಕೃಷ್ಣನಿಗೆ ಮುಹೂರ್ತ ಇಡಲು ನಿರ್ಧಾರ ಮಾಡುತ್ತಾರೆ. ಹಾಗೂ ಹೇಗೆ ವಿಚಾರ ತಿಳಿದುಕೊಂಡು ಹಂತ ಹಂತವಾಗಿ ಸ್ಲೋ ಪಾಯಿಸನ್ ನೀಡಲು ನಿರ್ಧಾರ ಮಾಡುತ್ತಾರೆ. ಆಹಾರದಲ್ಲಿ ಸ್ವಲ್ಪ ಸ್ವಲ್ಪವೇ ವಿಷವುಣಿಸಿ, ಆರೋಗ್ಯ ಕೆಡುವಂತೆ ನೋಡಿಕೊಳ್ಳುತ್ತಾರೆ. ಇದ್ಯಾವುದರ ಅರಿವು ಇಲ್ಲದ ಬಾಲಕೃಷ್ಣ ತಾನಾಯ್ತು ತನ್ನ ದುಡಿಮೆ ಆಯ್ತು ಎಂದು ಹೆಂಡತಿ ಕೊಟ್ಟದ್ದನೆಲ್ಲ ತಿಂದಿದ್ದಾನೆ. ಪದೇ ಪದೇ ವಿಷಪ್ರಾಶನವಾದದ್ದರಿಂದ, ಬಾಲಕೃಷ್ಣರ ಕಿಡ್ನಿ, ಲಿವರ್ ಹಾಳಾಗಿವೆ. ನರಗಳಲ್ಲಿ ಪದೇ ಪದೇ ಸಮಸ್ಯೆ ಕಂಡು ಬಂದಿದೆ.

ಕೊನೆಗೆ ಸಂಪೂರ್ಣ ಆರೋಗ್ಯ ಹದಗೆಟ್ಟು ಆಸ್ಪತ್ರೆ ಸೇರಿದ್ದಾನೆ. ಮೊದಲು ಕಾರ್ಕಳದ ಕೆಎಂಸಿ ಕ್ಯಾಂಪ್‌ನಲ್ಲಿ ಚಿಕಿತ್ಸೆ ಪಡೆಯುತ್ತಾನೆ, ಹೆಚ್ಚಿನ ಚಿಕಿತ್ಸೆ ಬೇಕು ಎಂಬುದು ಅರಿವಿಗೆ ಬಂದು ಉಡುಪಿ ಜಿಲ್ಲೆಯ ಅಜರಕಾಡು ಆಸ್ಪತ್ರೆಗೆ ದಾಖಲಾಗುತ್ತಾನೆ. ಅಲ್ಲೂ ಚಿಕಿತ್ಸೆ ಫಲಕಾರಿಯಾಗದೆ ಮಂಗಳೂರಿನ ವೆಲ್ಲಾಕ್ ಆಸ್ಪತ್ರೆಗೆ ಸೇರಿಸಲಾಗುತ್ತದೆ. ಇದರಿಂದಲೂ ಏನು ಪ್ರಯೋಜನವಾಗುವುದಿಲ್ಲ, ಮುಂದೆ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ತಕ್ಕಮಟ್ಟಿಗೆ ಆರೋಗ್ಯ ಸುಧಾರಿಸಿಕೊಂಡು ವಾಪಸು ಅಜೆಕಾರಿಗೆ ಅವನನ್ನು ಐದಾರು ದಿನಗಳ ಹಿಂದೆ ಕರೆತರಲಾಗಿತ್ತು.



ಪೊಲೀಸ್ ಕಸ್ಟಡಿಯಲ್ಲಿ ಆರೋಪಿಗಳು



ಪತಿ ಬಾಲಕೃಷ್ಣ ಪೂಜಾರಿಯೊಂದಿಗೆ ಪ್ರತಿಮಾ

### ಕೊಲೆ ನಡೆದ ದಿನ ಏನಾಯ್ತು?

ಬೆಂಗಳೂರಿನಿಂದ ಚಿಕಿತ್ಸೆ ಮುಗಿಸಿಕೊಂಡು ಬಂದ ಬಾಲಕೃಷ್ಣ, ಸ್ವಲ್ಪಮಟ್ಟಿಗೆ ಸುಧಾರಿಸಿಕೊಂಡಂತೆ ಕಂಡು ಬಂದಿದ್ದನು. ಚಿಕ್ಕಮ್ಮನ ಜೊತೆ ಇವನು ಬೆಂಗಳೂರಿನವರೆಗೆ ಹೋಗಿ ಚಿಕಿತ್ಸೆ ಪಡೆದು ಬಂದಿದ್ದನು. ವಾಪಸಾದ ಬಳಿಕ, ತಾನು ಸುಧಾರಿಸಿಕೊಳ್ಳುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದನು. ಆ ದಿನ ರಾತ್ರಿ ಅಮ್ಮನ ಕೈಯಿಂದ ಊಟ ಕಷಾಯ ಪಡೆದುಕೊಂಡು, ಅಮ್ಮನಿಗೆ ಪಕ್ಕದಲ್ಲಿರುವ ಮನೆಗೆ ಹೋಗುವಂತೆ ಹೇಳಿದ್ದನು. ಪ್ರತಿಮಾ ಕೂಡ ಗಂಡನನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು ಬಂಧುಗಳಿಗೆಲ್ಲ ಹೇಳಿ ರಾತ್ರಿ ಪತಿಯ ಜೊತೆ ಏಕಾಂಗಿಯಾಗಿದ್ದಳು.

### ನಡುರಾತ್ರಿ ಪ್ರಿಯಕರನಿಗೆ ಬುಲಾವ್

ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದು ಬಂದ ನಂತರ ಪತಿ ಸುಧಾರಿಸಿಕೊಳ್ಳಬಹುದು ಎಂಬ ಆತಂಕ ಪ್ರತಿಮಾಗೆ ಕಾದಿತ್ತು. ಹಾಗಾಗಿ ಪತಿಯನ್ನು ಕೊಂದೇ ಬಿಡಬೇಕು ಎಂಬ ನಿರ್ಧಾರ ಮಾಡಿ ನಡುರಾತ್ರಿ ಪ್ರಿಯಕರ ದಿಲೀಪ್ ಹೆಗಡೆಯನ್ನು ಫೋನ್ ಮಾಡಿ ಕರೆಸಿಕೊಂಡಿದ್ದಾಳೆ. ಇಬ್ಬರು ಸರಿ ರಾತ್ರಿ ಮೂರು ಗಂಟೆ ಸುಮಾರಿಗೆ ದಿಂಬಿನ ಮೂಲಕ ಕುತ್ತಿಗೆ ಒತ್ತಿ ಹಿಡಿದು, ಬಾಲಕೃಷ್ಣ ಪೂಜಾರಿಯನ್ನು ಬಲಿ ಪಡೆದಿದ್ದಾರೆ. ನಂತರ ದಿಲೀಪ್ ಹೆಗಡೆ ಏನು ಆಗಿಲ್ಲ ಎಂಬಂತೆ ಕಾರ್ಕಳಕ್ಕೆ ವಾಪಸ್ ಆಗಿದ್ದಾನೆ. ಪಕ್ಕದಲ್ಲಿ ಇರುವ ಸಂಬಂಧಿಕರ ಮನೆಗೆ ಕರೆ ಮಾಡಿ ಪ್ರತಿಮಾ, ತನ್ನ ಪತಿ ಸತ್ತಿರುವುದಾಗಿ ಮಾಹಿತಿ ರವಾನಿಸಿದ್ದಾಳೆ.

### ಸಂಶಯಪಟ್ಟು ದೂರು ಕೊಟ್ಟ ಸಹೋದರ

ಈ ಅಮಾನವೀಯ ಘಟನೆಯನ್ನು ಎರಡು ಮಾನವೀಯ ಸಂಗತಿಗಳು ಗಮನ ಸೆಳೆದಿದೆ. ತನ್ನ ಪುತ್ರ ಬಾಲಕೃಷ್ಣ ಸತ್ತಿರುವುದನ್ನು ಕಂಡು ತಾಯಿಗೆ ಸಂಶಯ ಬಂದಿರುತ್ತೆ. ಮೈಮೇಲೆ ಗಾಯಗಳನ್ನು ನೋಡಿ ಇದು ಕೊಲೆಯಾಗಿರಬಹುದು ಎಂದು ಆತಂಕ ಕಾಡುತ್ತೆ ಎಂದು ಸಂಶಯಗೊಂಡ ಸಂದೀಪ್, ದೂರು ನೀಡುವಂತೆ ಭಾವನ ಮನೆಯವರಿಗೆ ಹೇಳಿದ್ದ. ಸ್ವತಹ ತಾನೆ ಭಾವನ ಬಂಧುಗಳ ಜೊತೆ ಅಧಿಕಾರ ಠಾಣೆಗೆ ಹೋಗಿ ದೂರು ನೀಡಿದ. ಪೋಸ್ಟ್‌ಮಾರ್ಟಮ್ ನಡೆಸುವಂತೆ ಒತ್ತಾಯಿಸಿದ್ದ. ಕೊನೆಗೆ ತಂಗಿಯ ತಪ್ಪೊಪ್ಪಿಗೆಗೂ ಈತ ಪ್ಲಾನ್ ಮಾಡಿದ್ದ!

### ಸತ್ತು ಐದನೇ ದಿನ ಬೆಳಕಿಗೆ ಬಂತು ಸತ್ಯ!

ಗುರುವಾರ ಬಾಲಕೃಷ್ಣ ಪೂಜಾರಿ ಸತ್ತು ಐದು ದಿನ ಕಳೆದಿತ್ತು. ಐದನೇ ದಿನಕ್ಕೆ, ಶವ ಸಂಸ್ಕಾರ ನಡೆದ ಸ್ಥಳದಲ್ಲಿ ಧೂಳಪ್ಪ ಶಾಸ್ತ್ರ ನಡೆಸುವ ಪರಿಪಾಠ ಇದೆ. ಹಾಗಾಗಿ ಬಂಧುಗಳೆಲ್ಲ ದಿನ ಮನೆಯಲ್ಲಿ ಸೇರಿದ್ದರು. ಅದೇನು ಆತ್ಮಸಾಕ್ಷಿ ಕಾಡಿತೋ ಗೊತ್ತಿಲ್ಲ, ಪ್ರತಿಮಾ ತನ್ನ ಸಹೋದರಿ ಮಮತಾಳನ್ನು ಕರೆದು ಎಲ್ಲಾ ಸತ್ಯ ಬಾಯಿಬಿಟ್ಟಿದ್ದಾಳೆ. ಗಾಬರಿಯಾದ ಮಮತಾ ಎಲ್ಲರಿಗೂ ಕೇಳುವಂತೆ ಬೊಬ್ಬೆ ಇಟ್ಟಿದ್ದಾಳೆ. ಅಣ್ಣ ಸಂದೀಪ್‌ನನ್ನು ಕರೆದು ವಿಚಾರ ತಿಳಿಸಿದ್ದಾಳೆ. ಮೊದಲೇ ಸಂಶಯವಿದ್ದ ಸಂದೀಪ್ ಕೋಣೆಗೆ ಬಾಗಿಲು ಹಾಕಿ ಬೆದರಿಸಿ ಸಹೋದರ ಜೊತೆ ಮಾತನಾಡಿದ್ದಾನೆ. ಆಘಾತದಲ್ಲಿದ್ದ ಪ್ರತಿಮಾ ಎಲ್ಲ ವಿಚಾರವನ್ನು ಅಣ್ಣನ ಮುಂದೆ ಬಾಯಿ ಬಿಟ್ಟಿದ್ದಾಳೆ. ಎಲ್ಲವನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡ ಸಂದೀಪ್ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ. ತಕ್ಷಣವೇ ಕಾರ್ಯಾಚರಣೆ ನಡೆಸಿದ ಅಧಿಕಾರಿ ಪೊಲೀಸರು ಪ್ರತಿಮಾ ಹಾಗೂ ಆಕೆಯ ಪ್ರಿಯಕರನನ್ನು ಬಂಧಿಸಿದ್ದಾರೆ.

☯

# ಒಡಹುಟ್ಟಿದವನ ಹೆಣ ಕೆಡವಿದ ಅಣ್ಣ!

3 ☞

ಭಾಗ ಬರಲೇಬೇಕೆಂದು, ಅದೇಗೆ ನೀನು ಭಾಗ ಕೊಡುವುದಿಲ್ಲ ನಾನು ನೋಡುತ್ತೇನೆ ಎಂದು ಹಠಕ್ಕೆ ಬಿದ್ದಿದ್ದಾನೆ. ಈತನ ಮುಂಡಾಟವನ್ನು ನೋಡಿದ ನಾಗೇಂದ್ರ, ನೀನು ಪದೇ ಪದೇ ಹೀಗೆ ಆಡಿದರೆ ಪೊಲೀಸರಿಗೆ ಹೇಳುತ್ತೇನೆ ಎಂದು ಧಮಕಿ ಹಾಕಿದ್ದಾನೆ. ಈ ಮಾತಿನಿಂದ ಕುಪಿತಗೊಂಡ ಅಣ್ಣ ಸ್ವಾಮಿ ಮನೆಯಲ್ಲಿದ್ದ ಹಿಟ್ಟು ಬೆರೆಸುವ ದೊಣ್ಣೆಯಿಂದ ನಾಗೇಂದ್ರನ ತಲೆಗೆ ಬಲವಾಗಿ ಬಡಿದಿದ್ದಾನೆ. ಸ್ವಾಮಿ ಬಡಿದ ಬಲವಾದ ಒಡೆತಕ್ಕೆ ನಾಗೇಂದ್ರನ ತಲೆ ಒಡೆದು ರಕ್ತ ಚಿಮ್ಮಲು ಶುರುವಾಗಿದೆ. ಇದರಿಂದ ನಾಗೇಂದ್ರ ಕುಸಿದು ರಕ್ತದ ಮಡುವಿನಲ್ಲಿ ಬಿದ್ದಿದ್ದಾನೆ.

ಘಟನೆಯಿಂದ ಕಿರಿಯ ಮಗ ನಾಗೇಂದ್ರ ಕುಸಿದು ರಕ್ತದ ಮಡುವಿನಲ್ಲಿ ಬೀಳುತ್ತಿದ್ದಂತೆ ದಿಗ್ಭ್ರಾಂತಳಾದ ತಾಯಿ ನಿಂಗಮ್ಮ ಅದೇ ಗ್ರಾಮದಲ್ಲಿದ್ದ ಸೊಸೆ ಲಕ್ಷ್ಮಿಯ ಮನೆಗೆ ಓಡಿ ಬಂದು ವಿಷಯ ಮುಟ್ಟಿಸಿದ್ದಾಳೆ. ಸೊಸೆ ಲಕ್ಷ್ಮಿ ತನ್ನ ಸಹೋದರ ಶಿವರಾಜುನೊಡನೆ ಸ್ಥಳಕ್ಕೆ ಬಂದು ನೋಡುವವರೆಗೆ ನಾಗೇಂದ್ರ ಪ್ರಾಣ ಬಿಟ್ಟಿದ್ದಾನೆ. ಇತ್ತ ತಮ್ಮನ ಹೆಣ ಕೆಡವಿದ ಸ್ವಾಮಿ ಹೆದರಿ ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ. ವಿಷಯ ತಿಳಿದು ಕೂಡಲೇ ತಮ್ಮ ಸಿಬ್ಬಂದಿಗಳೊಡನೆ ಸ್ಥಳಕ್ಕೆ ಆಗಮಿಸಿದ ಚಾಮರಾಜನಗರ ಪೂರ್ವ ಠಾಣೆ ಆರಕ್ಷಕ ನಿರೀಕ್ಷಕರಾದ ದಿವಾಕರ್‌ರವರು ಪರಿಶೀಲನೆ ನಡೆಸಿ ಶವವನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಯ ಶವಗಾರಕ್ಕೆ ಸಾಗಿಸಿ ತಮ್ಮ ಹಿರಿಯ ಅಧಿಕಾರಿಗಳಿಗೆ ವಿಚಾರ ಮುಟ್ಟಿಸಿದ್ದಾರೆ.



ಆರೋಪಿಯ ಬಾಮೈದ ಶಿವಕುಮಾರ ನೀಡಿದ ದೂರಿನ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆ 189 / 2024 ಭಾರತೀಯ ನ್ಯಾಯ ಸಂಹಿತೆ (BNS) 2023 (u/s103 (1)) ರಡಿ ಪ್ರಕರಣ ದಾಖಲಿಸಿ ಕೊಂಡಿರುವ ಚಾಮರಾಜನಗರ ಪೂರ್ವ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಶವವನ್ನು ವೈದ್ಯರಿಂದ ಪಂಚನಾಮೆ ನಡೆಸಿ ವಾರಸುದಾರರಿಗೆ ನೀಡಿದ್ದಾರೆ

ನಾಗೇಂದ್ರನನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿ ಪತ್ತೆಗೆ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕವಿತಾರವರ ಮಾರ್ಗದರ್ಶನದಲ್ಲಿ ಚಾಮರಾಜನಗರ ಡಿವೈಎಸ್ಪಿ ಲಕ್ಷ್ಮಯ್ಯರವರ ಸಹಕಾರದೊಡನೆ ಆರಕ್ಷಕ ನಿರೀಕ್ಷಕ ದಿವಾಕರ್‌ರವರ ನೇತೃತ್ವದಲ್ಲಿ ಎಎಸ್‌ಐ ಮಹದೇವ, ಮುಖ್ಯಪೇದೆ ಜಯರಾಮ್, ಪೇದೆಗಳಾದ ಸಂತೋಷ್‌ಕುಮಾರ್, ಚಂದ್ರಶೇಖರ್‌ರವರನ್ನು ಒಳಗೊಂಡ ತಂಡವನ್ನು ರಚಿಸಲಾಗಿತ್ತು.

ಘಟನೆಯ ನಂತರ ತಲೆಮರೆಸಿಕೊಳ್ಳಲು ಬೇರೆ ಕಡೆಗೆ ಪರಾರಿಯಾಗಲು ಚಾಮರಾಜನಗರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದ ತಮ್ಮನ ಹಂತಕ ಸ್ವಾಮಿಯನ್ನು ಆರಕ್ಷಕ ನಿರೀಕ್ಷಕ ದಿವಾಕರ್‌ರವರು ರಚಿಸಿದ ಪೊಲೀಸರ ತಂಡ ಬಂಧಿಸಿ ಠಾಣೆಗೆ ಕರೆತಂದಿದ್ದಾರೆ. ಠಾಣೆಗೆ ಕರೆತಂದ ಆರೋಪಿ ಸ್ವಾಮಿಯನ್ನು ವಿಚಾರಣೆ ನಡೆಸಿದ ದಿವಾಕರ್‌ರವರು ಆರೋಪಿಯ ಹೇಳಿಕೆ ದಾಖಲಿಸಿಕೊಂಡು ಬಂಧಿಸಿ ಜೈಲಿಗೆ ಬಿಟ್ಟು ಬಂದಿದ್ದು ಪ್ರಕರಣದ ಸತ್ಯಾಸತ್ಯತೆ ಕುರಿತು ತನಿಖೆ ಕೈಗೊಂಡಿದ್ದಾರೆ

☯

ಪ್ರೀತಿ ಪ್ರೇಮ ಅಂತ ಮನೆಯವರನ್ನ ಕಡೆಗಣಿಸಿ ಮದುವೆಯಾದ ಜೋಡಿಗಳು ಸುಖವಾಗಿ ಜೀವನ ಸಾಗಿಸಿದ ಉದಾಹರಣೆಗಳುಂಟು. ಇನ್ನೊಂದೆಡೆ ಪ್ರೀತಿಸಿದ ನವ ಜೋಡಿಗಳು ತಮ್ಮ ತಮ್ಮ ಮಧ್ಯೆ ಅರ್ಥ ಮಾಡಿಕೊಳ್ಳದೆ ತಮ್ಮ ಜೀವನವನ್ನು ನರಕ ಮಾಡಿಕೊಂಡಿದ್ದು ಉಂಟು. ಅದೇ ರೀತಿಯಲ್ಲಿ ಇಲ್ಲೊಂದು ಜೋಡಿ ಸುಮಾರು 7 ವರ್ಷಗಳ ಹಿಂದೆ ಪರಸ್ಪರ ಪ್ರೀತಿ ಮಾಡಿ ಮನೆಯವರ ವಿರೋಧದ ನಡುವೆ ಹಾಗೋ ಹೀಗೋ ಮಾಡಿ ಒಪ್ಪಿಸಿ ಮದುವೆಯಾಗಿ ಸುಮಾರು ವರ್ಷಗಳವರೆಗೆ ಚೆನ್ನಾಗಿ ಸಂಸಾರ ಮಾಡಿದ್ದರು, ಒಂದು ಮಗುವು ಆಗಿತ್ತು. ಆದರೆ ಆಕೆಯನ್ನ ಗಂಡನಾದವನು ತನ್ನ ಪತ್ನಿ ಎರಡನೇ ಹೆರಿಗೆಗೆ ಅಂತ ತವರಿಗೆ ಬಿಟ್ಟು ತಾನು ಬೇರೆ ಬೇರೆ ಸ್ಥಳಗಳಿಗೆ ಹೋಗಿ ದುಡಿಯುತ್ತಿದ್ದ. ಹೆಂಡತಿಯನ್ನು ಬಿಟ್ಟಿರಲಾರದೇ ಈಗ ಸರಿಸುಮಾರು ಒಂದು ತಿಂಗಳ ಹಿಂದೆ ತನ್ನ ಮಡದಿಯ ತವರಿಗೆ ಬಂದು ಇನ್ನು ಮುಂದೆ ನಾನು ಹೆಂಡತಿ, ಮಕ್ಕಳೊಂದಿಗೆ ಸಂಸಾರ ಮಾಡಿಕೊಂಡಿರುತ್ತೇನೆ ಅಂತಾ ಅಲ್ಲಿಯೇ ಬಾಡಿಗೆ ಮನೆ ಪಡೆದು ಹೆಂಡತಿ ತವರಲ್ಲಿ ಠಿಕಾಣಿ ಹೂಡಿ ನಂತರ ಆತನ ತಲೆಯಲ್ಲಿ ಎನು ತೊಚಿತ್ತೋ ದೇವರೆ ಬಲ್ಲ, ತನ್ನ ಹೆಂಡತಿಗೆ ನಾವು ಇಲ್ಲಿ ಇರೋದು ಬೇಡ, ಬೇರೆ ಕಡೆ ಹೋಗಿ ಸಂಸಾರ ಮಾಡಿ ಜೀವನ ಮಾಡೋಣ ಅಂತಾ ಕ್ಯಾತೆ ತೆಗೆದು ಹೆಂಡತಿಯೊಂದಿಗೆ ಜಗಳ ಮಾಡಿಕೊಂಡಿದ್ದ. ಇದಕ್ಕೆ ನಿರಾಕರಿಸಿದ ತನ್ನ ಪತ್ನಿಗೆ ಒಂದು ದಿನ ಸಿಟ್ಟಿಗೆದ್ದು ನೀನು ನನ್ನೊಂದಿಗೆ ಬರದೇ ಇದ್ದರೆ ನಿನಗೊಂದು ಗತಿ ಕಾಣಿಸುತ್ತೇನೆ ಅಂತಾ ಆಕೆಯೊಂದಿಗೆ ಜಗಳ ಮಾಡಿಕೊಂಡು ಯಾವುದೋ ಒಂದು ಬಲವಾದ ಆಯುಧದಿಂದ ಆಕೆಯನ್ನು ಬಡಿದು ಬಡಿದು ಕೊಲೆ ಮಾಡಿ ಪರರಿಯಾದ ಘಟನೆ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಮಖಂಡಿ ನಗರದ ಚೌಡಯ್ಯ ಬಡಾವಣೆಯಲ್ಲಿ ನಡೆದ ಘಟನೆ ಜಮಖಂಡಿ ನಗರ ಪೊಲೀಸ್ ಠಾಣೆಯಿಂದ ವರಯಾಗಿದೆ


ಆರೋಪಿ ಪುನೀತ ಗಿರಣಿ

# ಕ್ಷುಲಕ ಕಾರಣಕ್ಕೆ ಪ್ರೀತಿಸಿ ಮದುವೆಯಾದ ಮಡದಿಯನ್ನು ಬಡಿದು ಕೊಂದ ಕಿರಾತಕ!

**ಬಾಗಲಕೋಟೆ**
✍ ಮಂಜುನಾಥ ಈಶ್ವರ ಕರೋಳಿ


ಕೊಲೆಯಾದ ಕಾವೇರಿ

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಮಖಂಡಿ ನಗರದ ಚೌಡಯ್ಯ ನಗರದ ನಿವಾಸಿ ಪರಶುರಾಮ ತಿಮ್ಮಣ್ಣ ಗಾಡಿವಡ್ಡರ (46) ಹೆಂಡತಿಯೊಂದಿಗೆ ಕೂಲಿ ಕೆಲಸ ಮಾಡಿಕೊಂಡು ಜೀವನ ಕಟ್ಟಿಕೊಂಡಿದ್ದರು. ಇವರಿಗೆ ಮೂರು ಜನ ಮಕ್ಕಳು. ಅಶ್ವಿನಿ, ಕಾವೇರಿ, ರಾಧಿಕಾ ಎಂಬ ಮೂರು ಮಕ್ಕಳು.ತಂದೆ ಪರಶುರಾಮ ತನ್ನ ಮಕ್ಕಳಿಗೆ ಉತ್ತಮ ಮಟ್ಟಿಗೆ ಶಿಕ್ಷಣ ಕೊಡಿಸಿದ್ದ. ಮಕ್ಕಳು ಬೆಳೆದು ತಾವು ಕೂಡಾ ಸಮಾಜದಲ್ಲಿ ಒಳ್ಳೆಯ ಕೀರ್ತಿ ಬೆಳೆಗಬೇಕು ಎಂಬ ಹತ್ತಾರು ಕನಸಿನ ಗೋಪುರವನ್ನು ಹೊತ್ತಿದ್ದ. ಹೆಣ್ಣು ಮಕ್ಕಳು ಹೆತ್ತ ಮನೆಗೂ ಕೊಟ್ಟ ಮನೆಗೂ ಹೆಸರು ತರಬೇಕು ಅಂತಾ ದಂಪತಿಗಳಿಬ್ಬರ ಮಹಾದಾಸೆಯಾಗಿತ್ತು. ಮಕ್ಕಳು ಬೆಳೆದು ದೊಡ್ಡವರಾಗುತ್ತಿದ್ದಂತೆ ಅವರ ಮದುವೆ ವಿಚಾರವಾಗಿ ಮನೆಯ ಯಜಮಾನ ಪರಶುರಾಮ ತನ್ನ ಹೆಂಡತಿಯೊದಿಗೆ ಚರ್ಚಿಸಿ ಹಿರಿಯರ ಮುಂದೆ ಪ್ರಸ್ತಾಪಿಸಿ ತಮ್ಮ ಹೆಣ್ಣು ಮಕ್ಕಳಿಗೆ ವರರ ಹುಡುಕಾಟದಲ್ಲಿದ್ದರು.

**ಮಕ್ಕಳಿಗೆ ಮದುವೆ**

ತಂದೆ ಪರಶುರಾಮ ಗಾಡಿವಡ್ಡರ ತಮ್ಮ ಹೆಣ್ಣುಳ ಮದುವೆ ವಿಚಾರವಾಗಿ ಮೊದಲಿಗರ ಅಶ್ವನಿಯನ್ನು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಅಂಕಲಗಿ ಗ್ರಾಮದ ಒಬ್ಬ ಯುವಕನೊಂದಿಗೆ ಮದುವೆ ಮಾಡಿಕೊಟ್ಟರು. ಅದೇ ರೀತಿಯಲ್ಲಿ ಇನ್ನೊಬ್ಬಳು ಮಗಳಾದ ರಾಧಿಕಾಳನ್ನು ವಿಜಯಪುರ ಜಿಲ್ಲೆ ಮುಳವಾಡ ಗ್ರಾಮದ ಒಬ್ಬ ಯುವಕನೊಂದಿಗೆ ಮಾಡಿಕೊಟ್ಟು ತಮ್ಮ ಇಬ್ಬರು ಹೆಣ್ಣು ಮಕ್ಕಳು ಕನ್ಯಾಸೆರೆ ಬಿಡಿಸಿಕೊಂಡರು. ಅವರು ತಮ್ಮ ತಮ್ಮ ಗಂಡನ ಮನೆಯಲ್ಲಿ ಸುಖಸಂಸಾರ ಸಾಗಿಸಿದ್ದಾರೆ


ಕೃತ್ಯ ನಡೆದ ಸ್ಥಳ

**ಪ್ರೀತಿ ಬಲೆಗೆ ಬಿದ್ದ ಕಾವೇರಿ!**

ಪರಶುರಾಮ ತನ್ನ ಇಬ್ಬರೂ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟರೆ, ಇತ್ತ ಇನ್ನೊಬ್ಬಳು ಮಗಳಾದ ಕಾವೇರಿ (24) ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಪಡಗಾನೂರ ಗ್ರಾಮದ ಪುನೀತ ಬಾಳಪ್ಪ ಗಿರಣಿ ಎಂಬ ಯುವಕನೊಂದಿಗೆ ಪರಸ್ಪರ ಸುಮಾರು ಏಳು ವರ್ಷಗಳ ಹಿಂದೆ ಪ್ರಿತಿಸುತ್ತಿದ್ದು, ಇದು ಮೊದಲಿಗೆ ಮನೆಯಲ್ಲಿ ಗೊತ್ತಿರಲಿಲ್ಲ. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಲೋಕಕ್ಕೆ ತಿಳಿಯದೇ ಎಂಬಂತೆ ಇವರಿಬ್ಬರ ಪ್ರತಿ ವಿಷಯ ಅದು ಹೇಗೋ ಕಾವೇರಿ ಮನೆಯಲ್ಲಿ ಗೊತ್ತಾಗಿತ್ತು. ಕಾವೇರಿ ತಂದೆಯಾದ ಪರಶುರಾಮ ತನ್ನ ಮಗಳಿಗೆ ಪ್ರೀತಿ-ಪ್ರೇಮ ಅಂತಾ ತಲೆಕೆಡಿಸಿಕೊಂಡು ಅದೆಷ್ಟೋ ನಿನ್ನಂತ ಹುಡಗಿಯರು ಮೋಸ ಹೋಗುತ್ತಿದ್ದಾರೆ. ಈಗಿನ ಕಾಲದ ಕೆಲವು ಹುಡುಗರು ಸರಿ ಇರುವುದಿಲ್ಲ, ನಿನ್ನಂತ ಮುಗ್ಧ ಯುವತಿಯರೇ ಅವರ ಟಾರ್ಗೆಟ್. ನೀನೂ ಸಹ ಅದೇ ರೀತಿ ಮೋಸ ಹೋಗಬೇಡ ಅಂತ ಮಗಳಿಗೆ ಬುದ್ಧಿ ಹೇಳಿದ. ಕಾವೇರಿಯೂ ಸಹ ತನ್ನ ಅಪ್ಪನಿಗೆ ನಾನು ಆ ಹುಡುಗನನ್ನು ತುಂಬಾ ಪ್ರೀತಿಸುತ್ತೇನೆ, ಅವನೂ ಸಹ ನನ್ನನು ತುಂಬಾ ಪ್ರೀತಿತಿಸುತ್ತಿದ್ದಾನೆ, ನಾವು ಮದುವೆಯಾಗಿ ಚೆನ್ನಾಗಿರುತ್ತೇವೆ ಅಂತಾ ಹೇಳಿದಳು.

**ಕಾವೇರಿ ಲವ್ ಮ್ಯಾರೇಜ್!**

ಕಾವೇರಿ ತನ್ನ ತಂದೆಯ ಮಾತನ್ನ ಕೇಳದೆ ವಿರೋಧದ ಮಧ್ಯೆ ಹಾಗೂ ಹೀಗೂ ಮಾಡಿ ಒಪ್ಪಿಸಿ ತಾನು ಪ್ರೀತಿಸಿದ ಹುಡುಗನ ಮನೆಯರೊಂದಿಗೂ ಚರ್ಚಿಸಿ ಒಂದು ಶುಭ ಮುಹೂರ್ತದಲ್ಲಿ ಎರಡೂ ಕುಟುಂಬಸ್ಥರ ಮಧ್ಯಸ್ಥಿಕೆಯಲ್ಲಿ ಕಾವೇರಿ ವೆಡ್ಸ್ ಪುನಿತ್ ವಿವಾಹ ಕಾರ್ಯ ಮುಗಿಯಿತು. ತಮಾಶೆಯಂತೆ ಪ್ರೀತಿಸಿ ಮದುವೆಯಾಗಿದ್ದ ಜೋಡಿಗಳು ಉತ್ತಮ ಸಂಸಾರ ಸಾಗಿಸಿದರು. ಕಾವೇರಿ ಗಂಡನಾದ ಪುನಿತ್ ಕಾರ್ ಚಾಲಕನಾಗಿದ್ದು, ಆರಂಭದಲ್ಲಿ ತನ್ನ ಮಡದಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು, ಮುಂದೆ ತಮ್ಮ ಬದುಕು ಹಸನಾಗಬೇಕು ಎಂಬ ಕನಸುಗಳನ್ನು ಇಟ್ಟುಕೊಂಡು ಜೀವನ ಸಾಗಿಸಿದರು. ಪುನಿತ್ ಕಾರ್ ಓಡಿಸಿ ದುಡಿಯುತ್ತಿದ್ದು, ಕಾವೇರಿ ಮನೆಗೆಲಸ ಮಾಡಿಕೊಂಡಿದ್ದಳು, ಸಂಸಾರ ಚೆನ್ನಾಗಿ ಸಾಗಿಸಿದರು.


ಎಸ್ಪಿ ಅಮರನಾಥ ರೆಡ್ಡಿ


ಡಿವೈಎಸ್ಪಿ ಈ. ಶಾಂತುಮಾರ್


ಸಿಪಿಐ ಮಲ್ಲಪ್ಪ ಮಡ್ಡಿ


ಪಿಎಸ್ಐ ಅನಿಲ್ ಕುಂಬಾರ

**ವಿಜಯಪುರದಲ್ಲಿ ವಾಸ!**

ಪುನಿತ ಹಾಗೂ ಕಾವೇರಿ ಸುಮಾರು ವರ್ಷಗಳ ಕಾಲ ಸಂಸಾರ ಮಾಡಿಕೊಂಡಿದ್ದ ಜೋಡಿ ತಮ್ಮ ಗ್ರಾಮದಲ್ಲಿ ಸರಿ ಹೊಂದದ ಕಾರಣ ಪುನಿತ್ ವಿಜಯಪುರ ನಗರಕ್ಕೆ ಬಂದು ಒಂದು ಬಾಡಿಗೆ ಮನೆ ಮಾಡಿಕೊಂಡು ಗಂಡ-ಹೆಂಡತಿ ವಾಸ ಹೂಡಿದರು. ಇದರ ಮಧ್ಯೆ ಒಂದು ಹೆಣ್ಣು ಮಗು ಕೂಡಾ ಜನಿಸಿತು. ಮನೆಯಲ್ಲಿ ಸಂತೋಷಭರಿತ ವಾತಾವರಣ ಸೃಷ್ಟಿಯಾಗಿ ಉತ್ತಮ ಜೀವನ ಸಾಗಿಸಿದರು. ಪುನಿತ ಕಾರು ಚಲಾಯಿಸುವ ಕೆಲಸ ಇಲ್ಲದಿದ್ದಾಗ ಗಾರೆಕೆಲಸಕ್ಕೆ ಹೋಗುತ್ತಿದ್ದ. ಕಾವೇರಿ ಸಹ ಮನೆಯಲ್ಲಿ ಕೆಲಸ ಮಾಡಿಕೊಂಡು ಮಗುವನ್ನು ನೋಡಿಕೊಂಡು ಸಂಸಾರ ಸಾಗಿಸಿದಳು. ಇದು ಸುಮಾರು ವರ್ಷಗಳವರೆಗೆ ಜೀವನ ಸಾಗುತ್ತಲೇ ಬಂದಿತ್ತು.

ಇದು ಸಾಗುತ್ತಿರುವಾಗಲೇ ಪುನೀತನು ಊರುರು ತಿರಾಗಾಡಿ ಕೆಲಸಕ್ಕೆ ಅಂತಾ ಕೆಲವು ದಿನಗಳ ನಂತರ ಮನೆಗೆ ಬರುವುದು ಹೋಗುವುದು ಅಂತ ಮಾಡಲು ಶುರುವಿಟ್ಟುಕೊಂಡಿದ್ದ. ಅಲ್ಲಿಯೇ ಇಬ್ಬರ ಮಧ್ಯೆ ವೈಮಸ್ಸು ಮಾಡಿಕೊಂಡು ಜಗಳಗಳು ಪ್ರಾರಂಭವಾದವು.

**ಎರಡನೇ ಬಾರಿ ಗರ್ಭವತಿಯಾದ ಕಾವೇರಿ**

ಇಬ್ಬರು ವಿಜಯಪುರದಲ್ಲಿಯೇ ಇರುವಾಗ ಒಂದು ಹೆಣ್ಣು ಮಗು ಜನಿಸಿದರೆ, ಅಲ್ಲಿಯೇ ಎರಡನೇ ಬಾರಿ ಗರ್ಭವತಿಯಾದಳು ಕಾವೇರಿ. ಇದರಿಂದ ಪುನಿತ ತಾನು ಕೆಲಸಕ್ಕೆ ಅಂತ ಹೋದರೇ ಬಸುರಿ ಹೆಂಡತಿ, ಮಗುವನ್ನು ನೋಡಿಕೊಳ್ಳುವವರು ಯಾರು ಎಂಬ ಚಿಂತೆಯಲ್ಲಿ ಪುನಿತ್ ತಲೆಯಲ್ಲಿ ಒಂದು ಯೋಚನೆ ಹೊಳೆಯಿತು ಅದೇನಂತಿರಾ...

**ಹೆಂಡತಿಯನ್ನು ತವರಿಗೆ ಬಿಟ್ಟು ಹೋದ ಪುನೀತ್**

ಪುನೀತನ ಹೆಂಡತಿ ಕಾವೇರಿ ಎರಡನೇ ಬಾರಿ ಗರ್ಭವತಿಯಾದ ನಂತರ ದಿಕ್ಕುತೊಚದೇ ಕಾವೇರಿ ತವರೂರಾದ ಜಮಖಂಡಿಗಡ ಹೆಂಡತಿಯನ್ನು ತನ್ನ

☞ 14

# ಅಪ್ರಾಪ್ತೆಯನ್ನು ರೇಪ್ ಮಾಡಿ ಆಕೆಗೊಂದು ಮಗು ಕರುಣಿಸಿದ್ದ ಕಾಮುಕ ವೈಭವ ಕಾಂಬಳೆಗೆ 20 ವರ್ಷ ಜೈಲು ಶಿಕ್ಷೆ

**ಹೈಸ್ಕೂಲ್ ಓದುತ್ತಿದ್ದ ತರುಣಿಯ ಬೆನ್ನು ಬಿದ್ದು 22 ವರ್ಷದ ಕಾಮುಕನೊಬ್ಬ 'ಮದುವೆಯಾದರೆ ನಿನ್ನನ್ನೇ' ಎಂದು ನಂಬಿಸತೊಡಗಿದ್ದನು. ಅದೊಂದು ದಿನ ಮಟ... ಮಟ ಮಧ್ಯಾಹ್ನ ಅಪ್ರಾಪ್ತೆಯನ್ನು ಉಪಾಯವಾಗಿ ತನ್ನ ಮನೆಗೆ ಕರೆದೊಯ್ದು ಬಲವಂತವಾಗಿ ರೇಪ್ ಮಾಡಿದ್ದನು. 'ನಡೆದಿದ್ದ ವಿಷಯ ಯಾರಿಗಾದರೂ ಹೇಳಿದರೆ ಸುಮ್ಮನೆ ಬಿಡುವುದಿಲ್ಲ' ಎಂದು ಹೆದರಿಸಿದ್ದನು. ಕಾಮುಕನಿಂದ ಗರ್ಭಿಣಿಯಾಗಿ ಅಪ್ರಾಪ್ತೆ ಹೆಣ್ಣು ಮಗುವಿಗೆ ಜನ್ಮವಿತ್ತಳು. ಅದಾಗಲೇ ಹರಾಮಿ ಮತ್ತೊಂದು ಮದುವೆಯಾಗಿ ಸಂಸಾರ ನಡೆಸುತ್ತಿದ್ದನು. ಈ ಕುರಿತು ಪ್ರಕರಣ ದಾಖಲಿಸಿಕೊಂಡು ಸಂಕೇಶ್ವರದ ಪೊಲೀಸ್ ಇನ್ಸ್‌ಪೆಕ್ಟರ್ ಶಿವಶರಣ ಅವಜಿ ಮತ್ತು ಸಿಬ್ಬಂದಿಗಳು ಕಾಮುಕನನ್ನು ಬಂಧಿಸಿ ಆತನ ಮೇಲೆ ಪ್ರಬಲವಾದ ದೋಷಾರೋಪಣವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಇತ್ತೀಚಿಗೆ ಬೆಳಗಾವಿಯ ವಿಶೇಷ ಶೀಘ್ರಗತಿ ಪೋಕ್ಸೋ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಂದಿತ್ತು. ವಿಶೇಷ ಸರಕಾರಿ ಅಭಿಯೋಜಕರಾದ ಎಲ್.ವ್ಹಿ. ಪಾಟೀಲ ಸಮರ್ಥ ರೀತಿಯಲ್ಲಿ ವಾದ ಮಂಡಿಸಿದ್ದರು. ಮೂರು ಮುದ್ದೆಮಾಲುಗಳ ಪರಿಶೀಲನೆ ಮತ್ತು 25 ಸಾಕ್ಷಿಗಳ ಹೇಳಿಕೆಗಳನ್ನು ಪರಿಗಣಿಸಿದ್ದ ನ್ಯಾಯಾಧೀಶರಾದ ಶ್ರೀಮತಿ ಎಂ. ಪುಷ್ಪಲತಾ ಅವರು ಕಾಮುಕನಿಗೆ 20 ವರ್ಷ ಜೈಲುಶಿಕ್ಷೆ 10 ಸಾವಿರ ರೂ.ಗಳ ದಂಡ ವಿಧಿಸಿ ತೀರ್ಪು ನೀಡಿದ ಪ್ರಕರಣ ವರದಿಯಾಗಿದೆ.**


ಶಿಕ್ಷೆಗೊಳಗಾದ ರೇಪಿಸ್ಟ್ - ವೈಭವ ಮಧುಕರ ಕಾಂಬಳೆ

**ಬೆಳಗಾವಿ**
✍ ಮನ್ನಾಪೂರ

ಕೈ, ಬಾಯಿ, ಕಚ್ಚೆಯನ್ನು ಗಟ್ಟಿಯಾಗಿರಿಸಿಕೊಳ್ಳದೇ ಕಾಲು ಬಿಟ್ಟ ಕತ್ತೆಯಂತೆ ಕುಣಿಯುತ್ತಿದ್ದ ಯುವಕನಿಗೆ ಇಂದು ತಕ್ಕ ಶಿಕ್ಷೆ ಆಗಿದೆ. ಕಾಮದ ಪಿತ್ತ ನೆತ್ತಿಗೇರಿಸಿಕೊಂಡು ತಮ್ಮ ಊರಿನ ಅಷ್ಟೇ ಏಕೆ ತಮ್ಮ ಓಣಿಯ ಸ್ವಜಾತಿಯ ಹೈಸ್ಕೂಲ್ ಓದುತ್ತಿದ್ದ ಅಪ್ರಾಪ್ತೆಯನ್ನು ಬಲವಂತವಾಗಿ ರೇಪ್ ಮಾಡಿ ಆಕೆಗೊಂದು ಕೂಸು ಕರುಣಿಸಿದ್ದ ಐನಾತಿ ಕಾಮುಕ ವೈಭವ ಮಧುಕರ ಕಾಂಬಳೆ ಎಂಬಾತನಿಗೆ ಬೆಳಗಾವಿಯ ವಿಶೇಷ ಶೀಘ್ರಗತಿ ಪೋಕ್ಸೋ ನ್ಯಾಯಾಲಯದಲ್ಲಿ ನ್ಯಾಯಾಧೀಶರಾದ ಶ್ರೀಮತಿ ಎಂ. ಪುಷ್ಪಲತಾ ಅವರು 20 ವರ್ಷಗಳ ಜೈಲುಶಿಕ್ಷೆ ಮತ್ತು 10 ಸಾವಿರ ರೂ.ಗಳ ದಂಡ ವಿಧಿಸಿ ಮಹತ್ವದ ತೀರ್ಪು ನೀಡಿದ್ದಾರೆ. ಸರಕಾರದ ಪಕ್ಷದಿಂದ ವಿಶೇಷ ಸರಕಾರಿ ಅಭಿಯೋಜಕರಾದ ಶ್ರೀ ಎಲ್.ವ್ಹಿ. ಪಾಟೀಲ ಸಮರ್ಥವಾಗಿ ವಾದ ಮಂಡಿಸಿ ನ್ಯಾಯಾಲಯದ ಗಮನ ಸೆಳೆದಿದ್ದರು. ಸಂಕೇಶ್ವರದ ಪೊಲೀಸ್ ಠಾಣೆಯ ಚತುರ ತನಿಖಾಧಿಕಾರಿ ಶಿವಶರಣ ಅವಜಿ ಮತ್ತು ಸಿಬ್ಬಂದಿಗಳು ಕಾಮುಕನ ವಿರುದ್ಧ ಪ್ರಬಲವಾದ ದೋಷಾರೋಪಣೆ ಪತ್ರ ಸಲ್ಲಿಸಿ ಶಿಕ್ಷೆಯಾಗುವಂತೆ ನೋಡಿಕೊಂಡದ್ದು ನಿಜಕ್ಕೂ ಪ್ರಶಂಶನೀಯ ಕಾರ್ಯವಾಗಿದೆ. ಈ ಕುರಿತು 'ಪೊಲೀಸ್ ನ್ಯೂಸ್' ವಿವರಣೆಯನ್ನು ಓದುಗರಿಗಾಗಿ ನೀಡಿದೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಅಂದಿನ ಹೆಚ್ಚುವರಿ ಎಸ್ಪಿ ವೇಣುಗೋಪಾಲ


ಡಿವೈಎಸ್ಪಿ ಡಿ.ಹೆಚ್. ಮುಲ್ಲಾ


ಇನ್ಸ್‌ಪೆಕ್ಟರ್ ಶಿವಶರಣ ಅವಜಿ

### ಯಾರೀತ...? ಕಾಮುಕ ವೈಭವ ಕಾಂಬಳೆ...


ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನಾಗನೂರ (ಕೆಎಸ್) ಗ್ರಾಮದ ವೈಭವ ಮಧುಕರ ಕಾಂಬಳೆ ಎಂಬ ಉಂಡಾಡಿಗುಂಡ ತನ್ನ ಕಾಮದ ತೆವಲನ್ನು ಹರಿಬಿಟ್ಟಾಗ 20 ವರ್ಷಗಳ ಕಾಲ ಜೈಲಿನಲ್ಲಿ ಕೊಳೆಯಬೇಕಾಗಿದೆ. ಈತನ ತಂದೆ ಮಧುಕರ ಬದುಕಿಲ್ಲ. ಇದ್ದೊಬ್ಬ ತಾಯಿ ಕೂಲಿನಾಲಿ ಮಾಡುತ್ತಿದ್ದು, ಆಕೆ ದುಡಿದು ತಂದದ್ದರಲ್ಲಿ ದಂಡ-ಪಿಂಡನಾಗಿ ಕೂಳು ಕತ್ತರಿಸುತ್ತಿದ್ದ ಐನಾತಿ ವೈಭವ ಕಾಂಬಳೆ. ಶಾಲೆಗೆ ಹೋಗದೇ ಅರ್ಧಕ್ಕೆ ಬಿಟ್ಟು ದುಶ್ಚಟಗಳನ್ನು ಬೆಳೆಸಿಕೊಂಡು ಊರಿನಲ್ಲಿ ಗಂಡರಗೂಳಿಯಂತೆ ತಿರುಗುತ್ತಿದ್ದನು. ಹರೆಯದ ಹೆಂಗಸರನ್ನು ಕಂಡರೆ ಬೆದೆಗೆ ಬಂದ ತುಡುಗು ದನದಂತೆ ಕಾಲು ಕೆದರುತ್ತಿದ್ದನು.

### ಅಪ್ರಾಪ್ತೆಯ ಬೆನ್ನು ಹಿಂದೆ ಬಿದ್ದನು...

ತಮ್ಮ ಊರಿನ, ತಮ್ಮ ಓಣಿಯ ದಷ್ಟ-ಪುಷ್ಟವಾಗಿ ಬೆಳೆದು ನಿಂತು ಹೈಸ್ಕೂಲ್ ಓದುತ್ತಿದ್ದ 17 ವರ್ಷದ ಅಪ್ರಾಪ್ತೆ ತರುಣಿ ಹರಾಮಿ ವೈಭವನ ಕಣ್ಣು ಕುಕ್ಕಿದಳು. ಹೇಗಾದರೂ ಸರಿ ಈಕೆಯನ್ನು ಅನುಭವಿಸಬೇಕೆಂದು ಆಕೆಯ ಬೆನ್ನ ಹಿಂದೆ ಬಿದ್ದು ''ಪ್ರೀತ್ಸೆ... ಪ್ರೀತ್ಸೆ'' ಎನ್ನತೊಡಗಿದನು. ಒಬ್ಬಂಟಿಯಾಗಿ ಏಕಾಂತದಲ್ಲಿ ಸಿಕ್ಕಾಗ ಅಪ್ರಾಪ್ತೆಯನ್ನು ತಬ್ಬಿಕೊಳ್ಳುವುದು, ವಿಕೃತ ಚೇಷ್ಟೆಗಳನ್ನು ಮಾಡುವುದನ್ನು ಮುಂದುವರೆಸಿದನು. ಅಪ್ರಾಪ್ತೆ ತುಂಬಾ ಮುಗ್ಧೆಯಿದ್ದಳು. ಆಕೆಗೆ ಅಂಗೈಲಿ ಆಕಾಶ ತೋರಿಸಿದ ಐನಾತಿ ವೈಭವ ಕಾಂಬಳೆ 'ನಾನು ಮದುವೆಯಾದರೆ ನಿನ್ನನ್ನೇ' ಎಂದು ಅವಳ ಜತೆ ಸಲುಗೆ ಬೆಳೆಸಿದನು. ಓಣಿಯ ಪರಿಚಯದ ವ್ಯಕ್ತಿ ಎಂದು ತಿಳಿದು ಅಪ್ರಾಪ್ತೆ ಕೂಡಾ ಅಲ್ಪಸ್ವಲ್ಪ ಪ್ರತಿಕ್ರಿಯಿಸಿದಳು. ಹೇಗಾದರೂ ಸರಿ ಅಪ್ರಾಪ್ತೆಯನ್ನು ಅನುಭವಿಸಬೇಕೆಂದು ಸಂಚು ರೂಪಿಸಿ ಸಮಯಕ್ಕಾಗಿ ಕಾಯ್ದು ಕುಳಿತಿದ್ದನು.

### ಮನೆಯಲ್ಲಿ ಬಲವಂತವಾಗಿ ರೇಪ್ ಮಾಡಿದನು...

ಅಂದು ದಿನಾಂಕ 01-11-2022ರಂದು ಮಧ್ಯಾಹ್ನ 1 ಗಂಟೆ ಸಮಯವಾಗಿತ್ತು. ಊರಿನಲ್ಲಿ ಎಲ್ಲರೂ ದುಡಿಯಲು ಹೋಗಿದ್ದರು. ತಮ್ಮ ಓಣಿಯಲ್ಲೂ ಒಂದು ನರಪಿಳ್ಳೆಯೂ ಇರಲಿಲ್ಲ. ಇದೇ ಸಂದರ್ಭ ಉಪಯೋಗಪಡಿಸಿಕೊಂಡ ಕಾಮುಕ ವೈಭವ ಅಪ್ರಾಪ್ತೆ ತರುಣಿಯನ್ನು ಉಪಾಯವಾಗಿ, ನಯವಾಗಿ ನಂಬಿಸಿ ತನ್ನ ಮನೆಗೆ ಕರೆತಂದು ಪಡಸಾಲೆಯಲ್ಲಿ ಬಲವಂತವಾಗಿ ಆಕೆಯ ಮೇಲೆ ರೇಪ್ ಮಾಡಿಬಿಟ್ಟನು. ಅಪ್ರಾಪ್ತೆ ಇದರಿಂದ ಮಾನಸಿಕವಾಗಿ ನೊಂದುಕೊಂಡು ಅಳಲು ಪ್ರಾರಂಭಿಸಿದಾಗ 'ಎಷ್ಟೇ... ಆದರೂ ನಿನ್ನನ್ನು ಮದುವೆಯಾಗುತ್ತೇನೆ' ಎಂದು ನಂಬಿಸಿದನು. ಮತ್ತೇ ಮುಂದುವರೆದು ಇಂದು ನಡೆದಿರುವ ವಿಷಯವನ್ನು ಯಾರಿಗಾದರೂ ತಿಳಿಸಿದರೆ ನಿನ್ನನ್ನು ಸುಮ್ಮನೇ ಬಿಡುವುದಿಲ್ಲ' ಎಂದು ಹೆದರಿಕೆ ಒಡ್ಡಿದನು.


ವಿಶೇಷ ಸರಕಾರಿ ಅಭಿಯೋಜಕ ಶ್ರೀ ಎಲ್.ವಿ. ಪಾಟೀಲ

### ಅಪ್ರಾಪ್ತೆಗೆ ಹೆಣ್ಣು ಮಗುವಿನ ಜನನ...

ಎಷ್ಟಾದರೂ ವೈಭವ ಕಾಂಬಳೆ ತನ್ನನ್ನು ಮದುವೆಯಾಗಲಿದ್ದಾನೆ ಎಂದು ಬಲವಾಗಿ ನಂಬಿದ್ದಳು ಅಪ್ರಾಪ್ತೆ. ಆಕೆಗೆ ತಿಂಗಳು... ಎರಡು ತಿಂಗಳು... ಮೂರು ತಿಂಗಳು ಕಳೆದರೂ ಕೂಡಾ ಮುಟ್ಟಾಗಲಿಲ್ಲ. ಈ ವಿಷಯವನ್ನು ಕಾಮುಕ ವೈಭವನಿಗೆ ತಿಳಿಸಿದ್ದರೂ ಕೂಡಾ ಆತ ತಲೆಗೆ ಹಾಕಿಕೊಳ್ಳಲಿಲ್ಲ. ಅಪ್ರಾಪ್ತೆ ತನ್ನ ಗರ್ಭದ ಗುಟ್ಟನ್ನು ಎಷ್ಟು ದಿನಾ ಅಂತ ಮುಚ್ಚಿ ಇಡಬಲ್ಲಳು. ಏಳು ತಿಂಗಳವರೆಗೆ ಹೇಗೋ ತಡೆದುಕೊಂಡ ಅಪ್ರಾಪ್ತೆ... ಮುಂದೆ ತಾನಾಗಿ ಅವಳು ಬಚ್ಚಿಟ್ಟುಕೊಂಡ ಗುಟ್ಟು ಹೊರಬಿತ್ತು. ಇದಕ್ಕೆಲ್ಲಾ ಕಾರಣ ತಮ್ಮ ಓಣಿಯಲ್ಲಿರುವ ವೈಭವ ಕಾಂಬಳೆ ಕಾರಣ ಎಂದು ಅವನತ್ತ ಬೆಟ್ಟು ಮಾಡಿದಳು.

ಅದಾಗಲೇ ವಂಚಕ ವೈಭವ ಕಾಂಬಳೆ ಅಪ್ರಾಪ್ತೆಯನ್ನು ಸಂಪೂರ್ಣವಾಗಿ ವಂಚಿಸಿದ್ದನು. ಆತ ಆಕೆ ಮತ್ತು ಆಕೆಯ ಮನೆಯವರಿಗೆ ಗೊತ್ತಾಗದಂತೆ ಬೇರೊಂದು ಮದುವೆ ಮಾಡಿಕೊಂಡು ಸಂಸಾರ ಆರಂಭಿಸಿದ್ದನು. ಇದರಿಂದ ಅಪ್ರಾಪ್ತೆಗೆ ಆಕಾಶವೇ ಕಳಚಿ ಬಿದ್ದಂತಾಗಿತ್ತು. ಊರಿನಲ್ಲಿ ಹಿರಿಯರ ಸಮಕ್ಷಮ ರಾಜಿ ಪಂಚಾಯತಿ ಕೂಡಾ ನಡೆದಿತ್ತು. ಈ ನಡುವೆ ಅಪ್ರಾಪ್ತೆಗೆ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಆಕೆಯನ್ನು ಬೆಳಗಾವಿಯ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿ ಅಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದಳು.

### ದೂರು ದಾಖಲಿಸಿದ ಸಿಡಿಪಿಓ...

ಆಸ್ಪತ್ರೆಯಲ್ಲಿ ಮದುವೆಯಾಗದೇ ಅಪ್ರಾಪ್ತೆ ತರುಣಿಯೊಬ್ಬಳು ಹೆಣ್ಣು ಮಗುವಿಗೆ ಜನ್ಮ ನೀಡಿದ ವಿವರವನ್ನು ಆಸ್ಪತ್ರೆಯವರು ಸಂಕೇಶ್ವರದ ಪೊಲೀಸ್ ಠಾಣೆಗೆ ವಿಷಯ ಮುಟ್ಟಿಸಿದರು. ತಕ್ಷಣ ಪೊಲೀಸ್ ಇನ್ಸ್‌ಪೆಕ್ಟರ್ ಶಿವಶರಣ ಅವಜಿ ಅಲರ್ಟ್ ಆದರು. ಹುಕ್ಕೇರಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ಎಸ್.ಆರ್. ಪಾಟೀಲರಿಗೆ ವಿವರಣೆ ಕೇಳಿದರು. ಅದರಂತೆ ಸಿಡಿಪಿಓ ತಕ್ಷಣ ನಾಗನೂರ ಕೆ.ಎಸ್. ಗ್ರಾಮ ಹಾಗೂ ಅಪ್ರಾಪ್ತೆ ಹೆರಿಗೆಗೆ ದಾಖಲಾಗಿದ್ದ ಆಸ್ಪತ್ರೆಗೆ ತೆರಳಿ ವಿವರವಾದ ಮತ್ತು ನಿಖರವಾದ ಮಾಹಿತಿ ಸಂಗ್ರಹಿಸಿ ತಕ್ಷಣ ಸಂಕೇಶ್ವರದ ಪೊಲೀಸ್ ಠಾಣೆಗೆ ಆಗಮಿಸಿ ವಿವರವಾದ ದೂರು ದಾಖಲಿಸಿದರು.

### ಕಾಮುಕ ವೈಭವ ಕಾಂಬಳೆ ಬಂಧನ...

ಅದರಂತೆ ಸಂಕೇಶ್ವರದ ಚಾಣಾಕ್ಷ ಪೊಲೀಸ್ ಇನ್ಸ್‌ಪೆಕ್ಟರ್ ಶಿವಶರಣ ಅವಜಿಯವರು ದೂರನ್ನು

☞ 14


ಕೊಲೆಯಾದ ರಮೇಶ್‌ಕುಮಾರ್

**ಚಿಕ್ಕವಯಸ್ಸಿಗೆ ಮದುವೆಯಾಗಿ ಎರಡು ಮಕ್ಕಳಿಗೆ ಜನ್ಮ ನೀಡಿ ಬಳಿಕ ಸಂಸಾರ ಸರಿಹೋಗಲ್ಲ ಎಂಬುದು ಗೊತ್ತಾಗುತ್ತಿದ್ದಂತೆಯೇ ಸಂಬಂಧ ಮುರಿದುಕೊಂಡು ಮತ್ತೆ ಓದು ಮುಂದುವರೆಸಿ ಸಾಫ್ಟ್‌ವೇರ್ ಇಂಜಿನಿಯರಾಗಿ ಲಕ್ಷ ರೂಪಾಯಿ ಸಂಬಳ ಪಡೆಯುತ್ತಿದ್ದಾಕೆ ಉತ್ತರ ಭಾರತ ಶ್ರೀಮಂತನ ಮದುವೆಯಾಗಿ ಒಂದಷ್ಟು ದಿನ ಆತನೊಂದಿಗಿದ್ದು ಆತನಿಗೆ ಹಣದ ವಿಚಾರದಲ್ಲಿ ಮೋಸ ಮಾಡಿ ಜೈಲ್ ಸೇರಿ ಬಳಿಕ ಅಲ್ಲಿಂದ ಬೆಂಗಳೂರಿಗೆ ಬಂದು ತೆಲಂಗಾಣ ಮೂಲದ ರಿಯಲ್ ಎಸ್ಟೇಟ್ ಉದ್ಯಮಿಯನ್ನು ಮತ್ತೊಮ್ಮೆ ಮದುವೆಯಾಗಿ ಆತನಿಗೆ ಗೋಲಿ ಹೊಡೆದು ಪಶುವೈದ್ಯನೊಂದಿಗೆ ಅಕ್ರಮ ಸಂಬಂಧವಿರಿಸಿಕೊಂಡು ಹಣಕ್ಕಾಗಿ ರಿಯಲ್ ಎಸ್ಟೇಟ್ ಉದ್ಯಮಿ ಗಂಡನ ಕೊಂದು ದುಡ್ಡು ಲಪಟಾಯಿಸಿ ಇದೀಗ ಮತ್ತೆ ಜೈಲ್ ಸೇರಿರುವ ಹೆಂಗಸೊಬ್ಬಳ ಕ್ರೈಂ ಸ್ಟೋರಿ ಇಲ್ಲಿದೆ.**

## ಕೊಡಗಿನಲ್ಲಿ ಪತ್ತೆಯಾದ ಅರೆಬೆಂದ ಹೆಣದ ಹಿಂದಿನ ರಹಸ್ಯ ಬಯಲು

# ಗಂಡನಿಗೆ ಮುಹೂರ್ತವಿಟ್ಟ ಹೆಂಡತಿ

**ಕೊಡಗು**

✍ಬಿ.ಎಂ. ಲವಕುಮಾರ್

ನಿಜಕ್ಕೂ ಈ ಕ್ರೈಂ ಸ್ಟೋರಿ ಓದಿದ ಬಳಿಕ ಹೆಣ್ಣು ಮಕ್ಕಳು ಬೆಚ್ಚಿ ಬೀಳುವುದಂತು ನಿಜ. ಹೆಂಗಸೊಬ್ಬಳು ಇಷ್ಟೆಲ್ಲ ಮಾಡಲು ಸಾಧ್ಯನಾ? ಎಂಬ ಪ್ರಶ್ನೆಯೂ ಮೂಡದಿರದು. ಆದರೆ ನಿಜ ಮಗ್ಗುಲು ಬದಲಿಸಿದಂತೆ ಗಂಡಂದಿರನ್ನು ಬದಲಾಯಿಸುತ್ತಾ ಶೋಕಿ ಜೀವನ ನಡೆಸುತ್ತಾ ಪರಪುರುಷನ ತೋಳ್ತೆಕ್ಕೆಗೆ ಬೀಳುತ್ತಲೇ ಹಳೆಯ ಗಂಡನನ್ನು ಶಿವನಪಾದಕ್ಕೆ ಕಳುಹಿಸಿ ಆತನ ಹಣದಲ್ಲಿ ಬಾಯ್ ಫ್ರೆಂಡ್ ಜತೆ ಸುಖವಾಗಿರಬಹುದೆಂದು ನಂಬಿದವಳು ಇದೀಗ ಜೈಲ್ ಸೇರಿ ಕಂಬಿ ಎಣಿಸುತ್ತಿದ್ದಾಳೆ.


ಎಸ್ಪಿ ರಾಮರಾಜನ್ ಕೆ.


ಎಎಸ್ಪಿ ಕೆ.ಎಸ್. ಸುಂದರ್‌ರಾಜ್

ಇಷ್ಟಕ್ಕೂ ಏನಿದು ಸ್ಟೋರಿ? ಎಂದು ತಿಳಿಯ ಬೇಕಾದರೆ ಕೆಲವು ದಿನಗಳ ಹಿಂದಕ್ಕೆ ಹೋಗಬೇಕಾಗುತ್ತದೆ. ಅದು ಅಕ್ಟೋಬರ್ ತಿಂಗಳ ಮೊದಲ ವಾರ ಮೈಸೂರು ಸೇರಿದಂತೆ ಕೊಡಗು ದಸರಾ ಗುಂಗಿನಲ್ಲಿತ್ತು. ಜನರು ಕೂಡ ದಸರಾದ ಸಂಭ್ರಮದಲ್ಲಿದ್ದರು. ಪೊಲೀಸರು ಕೂಡ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದರು. ಅವತ್ತು ಅಂದರೆ ಅಕ್ಟೋಬರ್ 8ರಂದು ಕೊಡಗಿನ ಮಡಿಕೇರಿ ಕುಶಾಲನಗರ ನಡುವಿನ ಸುಂಟಿಕೊಪ್ಪ ಪೊಲೀಸ್ ಠಾಣಾ ಸರಹದ್ದಿನ ಪನ್ಯ ಎಸ್ಟೇಟ್ ಬಳಿಯ ಸಂದೇಶ್‌ರವರ ಕಾಫಿ ತೋಟದಲ್ಲಿ ಅರ್ಧಂಬರ್ಧ ಬೆಂದಿರುವ ಗಂಡಸಿನ ಶವ ಪತ್ತೆಯಾಗಿತ್ತು.


ಕಾಫಿ ತೋಟದ ಕೆಲಸಕ್ಕೆ ಹೋಗಿದ್ದ ಕಾರ್ಮಿಕರು ಶವವನ್ನು ನೋಡಿ ತೋಟದ ಮಾಲೀಕರಿಗೆ ಮಾಹಿತಿ ನೀಡಿದ್ದರು. ಅದರಂತೆ ಕೂಡಲೇ ಮಾಲೀಕರು ಸುಂಟಿಕೊಪ್ಪ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಸುಂಟಿಕೊಪ್ಪ ಪೊಲೀಸ್ ಠಾಣೆಯ ಪೊಲೀಸರಲ್ಲದೆ, ಖುದ್ದು ಎಸ್ಪಿ ರಾಮರಾಜನ್. ಕೆ. ಅವರೇ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದರು. ಹೀಗಾಗಿ ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಕಲಂ: 103, 234 ಬಿ.ಎನ್.ಎಸ್. ರಂತೆ ಪ್ರಕರಣ ದಾಖಲಿಸಲಾಗಿತ್ತು.

ಅರೆಬೆಂದ ಸ್ಥಿತಿಯಲ್ಲಿದ್ದ ಶವ ಯಾರದ್ದು? ಇದು ಕೊಲೆಯೇ? ಯಾರು ಮಾಡಿರಬಹುದು? ಸತ್ತವನು ಸ್ಥಳೀಯ ವ್ಯಕ್ತಿಯಾ? ಅಥವಾ ಬೇರೆ ಊರಲ್ಲಿ ಕೊಲೆ ಮಾಡಿ ಇಲ್ಲಿ ತಂದು ಹಾಕಿದ್ರಾ? ಹೀಗೆ ನೂರಾರು ಅನುಮಾನಗಳು ಪೊಲೀಸರು ಮಾತ್ರವಲ್ಲದೆ, ಎಲ್ಲರ ತಲೆಯಲ್ಲಿ ಓಡಲಾರಂಭಿಸಿತ್ತು. ಏಕೆಂದರೆ ಹೆಣವನ್ನು ಕೆಲವು ದಿನಗಳ ಹಿಂದೆಯೇ ಪೆಟ್ರೋಲ್ ಹಾಕಿ ಸುಟ್ಟಿದ್ದರಿಂದ ಅರೆ ಬೆಂದ ಸ್ಥಿತಿಯಲ್ಲಿತ್ತು ಹೀಗಾಗಿ ಗುರುತು ಪತ್ತೆ ಹಚ್ಚುವುದು ಕಷ್ಟವಾಗಿತ್ತು. ಆದರೆ ಬೇರೆಲ್ಲೋ ಕೊಲೆ ಮಾಡಿ ಇಲ್ಲಿ ತಂದು ಪೆಟ್ರೋಲ್ ಹಾಕಿ ಸುಟ್ಟಿದ್ದಾರೆ ಎಂಬುದನ್ನು ಸುಲಭವಾಗಿ ಹೇಳಬಹುದಾಗಿತ್ತು. ಆದರೆ ಹಂತಕರು ಸ್ಥಳದಲ್ಲಿ ಯಾವುದೇ ಸುಳಿವು ಬಿಟ್ಟು ಹೋಗಿರಲಿಲ್ಲ.

ಈ ಪ್ರಕರಣವನ್ನು ಭೇಧಿಸಲೇಬೇಕೆಂಬ ಹಠಕ್ಕೆ ಕೊಡಗು ಪೊಲೀಸರು ಬಿದ್ದಿದ್ದರು. ದಸರಾದ ಒತ್ತಡದ ನಡುವೆ ಎಸ್ಪಿ ರಾಮರಾಜನ್.ಕೆ. ಎಎಸ್ಪಿ ಸುಂದರ್‌ರಾಜ್. ಕೆ.ಎಸ್ ಅವರ ಮಾರ್ಗದರ್ಶನದಲ್ಲಿ ಮತ್ತು ಸೋಮವಾರಪೇಟೆ ಉಪ ವಿಭಾಗದ ಡಿವೈಎಸ್ಪಿ ಗಂಗಾಧರಪ್ಪ ಆರ್.ವಿ, ನೇತೃತ್ವದಲ್ಲಿ 16 ಜನರ ಒಟ್ಟು 4 ವಿಶೇಷ ತನಿಖಾ ತಂಡವನ್ನು ರಚಿಸಿ ತನಿಖೆಗೆ ಆದೇಶಿಸಲಾಗಿತ್ತು. ಈ ತನಿಖಾ ತಂಡದಲ್ಲಿ ಸೋಮವಾರಪೇಟೆ ಪೊಲೀಸ್ ಠಾಣೆಯ ನಿರೀಕ್ಷಕರಾದ ಮುದ್ದು ಮಾದೇವ, ಸುಂಟಿಕೊಪ್ಪ ಠಾಣಾಧಿಕಾರಿ ಚಂದ್ರಶೇಖರ್, ಕುಶಾಲನಗರ ಗ್ರಾಮಾಂತರ ಠಾಣಾಧಿಕಾರಿ ಮೋಹನ್‌ರಾಜ್ ಹಾಗೂ ಇಲಾಖೆಯ ಇನ್ನಿತರ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿದಂತೆ 16 ಜನರ ತಂಡ ಇದರಲ್ಲಿತ್ತು.

ಈ ತಂಡವು ತನಿಖೆಯನ್ನು ಆರಂಭಿಸಿತ್ತು. ಶವ ದೊರೆತ ಸ್ಥಳದ ಆಸುಪಾಸಿನಲ್ಲಿ ಯಾವುದೇ ಸಿಸಿಟಿವಿ ಕ್ಯಾಮರಾಗಳು ಇಲ್ಲದ್ದರಿಂದ ಪೊಲೀಸರಿಗೆ ಜಾಡು ಹುಡುಕುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ.

ಆದರೂ ಶವ ಸಿಕ್ಕಿದ ಸ್ಥಳಕ್ಕೆ ಸಮೀಪದ ಮುಖ್ಯ ಹೆದ್ದಾರಿಯಲ್ಲಿ ಓಡಾಡಿರುವ ವಾಹನಗಳ ಪರಿಶೀಲನೆಯನ್ನು ಸಿಸಿಟಿವಿ ಕ್ಯಾಮರಾಗಳ ಮೂಲಕ ಪೊಲೀಸರು ಮಾಡುತ್ತಲೇ ಇದ್ದರು.


ಆರೋಪಿ ನಿಹಾರಿಕಾ

ತನಿಖಾ ತಂಡದವು ತಂಡವು ತಾಂತ್ರಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಮಾಹಿತಿ ಸಂಗ್ರಹಕ್ಕೆ ಮುಂದಾಗಿ ಸುಮಾರು 500 ಕ್ಕೂ ಹೆಚ್ಚು ಸಿಸಿ ಕ್ಯಾಮರಾಗಳ ಪರಿಶೀಲನೆ ಮಾಡಿ ಆ ಮಾರ್ಗದಲ್ಲಿ ಸಂಚರಿಸಿರುವ ವಾಹನಗಳ ಪರಿಶೀಲನೆ, ಮೊಬೈಲ್ ಕರೆಗಳ ಜಾಡನ್ನು ಹಿಡಿದು ಸತತ 10 ದಿನಗಳವರೆಗೆ ಮಾಹಿತಿ ಸಂಗ್ರಹಣೆ ಕಾರ್ಯದಲ್ಲಿ ನಿರತವಾಗಿತ್ತು. ಅಷ್ಟೇ ಅಲ್ಲದೆ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಕಾಣೆಯಾದ ವ್ಯಕ್ತಿಗಳ ಮಾಹಿತಿಗಳನ್ನು ಸಂಗ್ರಹಿಸಲಾಗಿತ್ತು. ಆದರೆ ಹೇಳಿಕೊಳ್ಳುವಂತಹ ಮಾಹಿತಿಗಳು ಲಭ್ಯವಾಗಿರಲಿಲ್ಲ.

ಈ ವಿಚಾರದಲ್ಲಿ ತನಿಖಾ ತಂಡ ಮಾಹಿತಿಯನ್ನು ಕಲೆಹಾಕುತ್ತಲೇ ಸಾಗಿತ್ತು. ಮಡಿಕೇರಿಯಿಂದ ತುಮಕೂರುವರೆಗೂ 500ಕ್ಕೂ ಅಧಿಕ ಸಿಸಿಟಿವಿ ದೃಷ್ಯವಾಳಿಗಳ ತನಿಖೆ ನಡೆಸಿತ್ತು. ಇದೆಲ್ಲದರ ನಡುವೆ ತನಿಖೆಗೆ ದಿಕ್ಕು ಬದಲಿಸಿದ್ದು ಮತ್ತು ಪೊಲೀಸರಿಗೆ ತನಿಖೆಗೆ ಸಹಕಾರ ನೀಡಿದ್ದು ಅದೊಂದು ಕೆಂಪು ಬಣ್ಣದ ಬೆಂಜ್ ಕಾರು. ಸಿಸಿಟಿವಿಯಲ್ಲಿ ಸೆರೆ ಸಿಕ್ಕ ಬೆಂಜ್ ಕಾರು (ಟಿಎಸ್-07 ಎಫ್‌ಎಸ್-5679) ತೆಲಂಗಾಣದಾಗಿತ್ತು. ಹೀಗಾಗಿ ಅದರ ಜಾಡು ಹಿಡಿದು ತನಿಖಾ ತಂಡ ತೆಲಂಗಾಣಕ್ಕೆ ತೆರಳಿತ್ತು. ಅಲ್ಲಿ ಕಾರಿನ ನಂಬರನ್ನು ಹಿಡಿದು ಪರಿಶೀಲನೆ ನಡೆಸಿದಾಗ ಕಾರಿನ ಮಾಲೀಕ ಯಾರು ಎಂಬುದು ಪತ್ತೆಯಾಗುತ್ತದೆ.

ಆ ಕೆಂಪು ಬೆಂಜ್ ಕಾರಿನ ಮಾಲೀಕ ರಮೇಶ್ ಕುಮಾರ್(54) ಎಂಬುದು ಗೊತ್ತಾಗುತ್ತದೆ. ಹೀಗಾಗಿ ಆತನ ಕುಟುಂಬದವರನ್ನು ಭೇಟಿಯಾಗಿ ಇನ್ನಷ್ಟು ಮಾಹಿತಿ ಕಲೆ ಹಾಕುವ ಕೆಲಸಕ್ಕೆ ಕೊಡಗು ಪೊಲೀಸ್ ತಂಡ ಮುಂದಾಗುತ್ತದೆ. ಹೀಗೆ ಮಾಹಿತಿ ಕಲೆ ಹಾಕುವ ವೇಳೆ ರಮೇಶ್ ಕುಮಾರ್ ಒಬ್ಬ ರಿಯಲ್ ಎಸ್ಟೇಟ್ ಉದ್ಯಮಿ ಎಂಬುದು ಗೊತ್ತಾಗುತ್ತದೆ. ಅಷ್ಟೇ ಅಲ್ಲದೆ ಕಳೆದ ಒಂದು ವಾರದಿಂದ ನಾಪತ್ತೆಯಾಗಿರುವ ಮಾಹಿತಿಯೂ ಬೆಳಕಿಗೆ ಬರುತ್ತದೆ.

ಅಲ್ಲಿಯೇ ಠಿಕಾಣಿ ಹೂಡಿದ ತಂಡ ಆತನ ಹುಡುಕಾಟ ನಡೆಸುತ್ತಾರೆ. ಆತ ಎಲ್ಲಿ ಹೋಗಿರಬಹುದು ಅಂತ ತನಿಖೆ ನಡೆಸುತ್ತಲೇ ತೆಲಂಗಾಣದಲ್ಲಿ ಠಿಕಾಣಿ ಹೂಡಿದ ಕೊಡಗು ಪೊಲೀಸರು ರಮೇಶ್ ಕುಮಾರ್ ಕುಟುಂಬದ ಬಗ್ಗೆ ಮಾಹಿತಿ ಕಲೆ ಹಾಕಿ ತನಿಖೆ ಮಾಡುತ್ತಾರೆ. ಈ ವೇಳೆ ರಮೇಶ್ ಕುಮಾರ್‌ಗೆ ಎರಡನೇ ಹೆಂಡತಿ ಇರುವ ಬಗ್ಗೆಯೂ ಮಾಹಿತಿ ದೊರೆಯುತ್ತದೆ. ಹೀಗಾಗಿ ಆಕೆಯನ್ನು ಸಂಪರ್ಕಿಸಿದರೆ ಮಾಹಿತಿ ಸಿಗಬಹುದು ಎಂದು ಪೊಲೀಸರು ಆಕೆಯನ್ನು ಸಂಪರ್ಕಿಸುವ ಪ್ರಯತ್ನ ಮಾಡುತ್ತಾರೆ. ಆದಾಗಲೇ ಆಕೆಯ ಎರಡನೇ ಪತ್ನಿ ಪಂತುಲ್ ನಿಹಾರಿಕ ನಾಪತ್ತೆ ಪ್ರಕರಣ ದಾಖಲಿಸಲು ಮುಂದಾಗಿರುತ್ತಾಳೆ.


ಆರೋಪಿಗಳಾದ ನಿಖಿಲ್ ಹಾಗೂ ಅಂಕುರ್ ರಾಣಾ

ಆದರೆ ಪೊಲೀಸರಿಗೆ ಆಕೆಯ ಮೇಲೆಯೇ ಸಂಶಯ ಮೂಡಲಾರಂಭಿಸುತ್ತದೆ. ಹೀಗಾಗಿ ಪೊಲೀಸರು ಆಕೆಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸುತ್ತಾರೆ. ಆಗಲೇ ಪೊಲೀಸರೇ ನಂಬಲಾರದ ಕಥೆಗೆ ಅವಳು ಸಾಕ್ಷಿಯಾಗಿರುವುದು ಗೊತ್ತಾಗುತ್ತದೆ. ಅಷ್ಟೇ ಅಲ್ಲದೆ ಕೊಡಗಿನಲ್ಲಿ ಅರೆಬೆಂದ ಸ್ಥಿತಿಯಲ್ಲಿ ಹೆಣವಾಗಿ ಪತ್ತೆಯಾದವನು ರಿಯಲ್ ಎಸ್ಟೇಟ್ ಉದ್ಯಮಿ ರಮೇಶ್ ಕುಮಾರ್ ಎನ್ನುವುದು ಖಾತ್ರಿಯಾಗಿತ್ತು. ಮೃತ ರಮೇಶ್ ಕುಮಾರ್ ಮರ್ಡರ್ ಮಿಸ್ಟ್ರಿ ಹಿಂದೆ ಎರಡನೇ ಪತ್ನಿ ಪಂತುಲ್ ನಿಹಾರಿಕಾಳ ಕೈವಾಡ ಇರುವುದು ಮೇಲ್ನೋಟಕ್ಕೆ ಗೊತ್ತಾಗಿತ್ತು.



ಇಷ್ಟಕ್ಕೂ ಕೊಲೆಗೀಡಾದ ರಮೇಶ್ ಕುಮಾರ್‌ಗೆ ನಿಹಾರಿಕಾ ಎರಡನೇ ಹೆಂಡತಿಯಾಗಿದ್ದರೆ, ಆಕೆಗೆ ರಮೇಶ್ ಕುಮಾರ್ ಮೂರನೇ ಗಂಡನಾಗಿದ್ದನು. ಆತನಿಂದ ಸ್ವಲ್ಪ ಮಟ್ಟಿಗೆ ದೂರವಿದ್ದ ಆಕೆ ಮತ್ತೊಬ್ಬ ಪಶುವೈದ್ಯನ ತೆಕ್ಕೆಯಲ್ಲಿ ಅದಾಗಲೇ ಬಂಧಿಯಾಗಿದ್ದಳು. ಹೀಗಾಗಿ ಗಂಡನ ಬಳಿಯಿದ್ದ ಹಣವನ್ನು ಲಪಟಾಯಿಸಲು ಆಕೆ ಖೆಡ್ಡಾ ತೋಡಿ ಬಿಟ್ಟಿದ್ದಳು. ರಮೇಶ್ ಕುಮಾರ್ ಕೊಲೆ ಹೇಗಾಯಿತು ಎಂದು ಹೇಳುವ ಮೊದಲು ಪಂತುಲ್ ನಿಹಾರಿಕಾಳ ಬದುಕಿನ ಬಗ್ಗೆ ಹೇಳಲೇಬೇಕಾಗುತ್ತದೆ. ಒಂದು ವೇಳೆ ಅವಳು ತನ್ನ ಬುದ್ದಿವಂತಿಕೆಯನ್ನು ಒಳ್ಳೆಯದಕ್ಕೆ ಬಳಸಿದ್ದರೆ ಆಕೆ ಗಂಡನ ಕೊಂದು ಜೈಲ್ ಸೇರುವ ಪ್ರಮೇಯ ಬರುತ್ತಿರಲಿಲ್ಲವೇನೋ?

ಹಾಗೆ ನೋಡಿದರೆ 29 ವರ್ಷ ಪ್ರಾಯದ ನಿಹಾರಿಕಾ ಮೂಲತಃ ತೆಲಂಗಾಣ ರಾಜ್ಯದ ಯಾದಾದ್ರಿ ಜಿಲ್ಲೆಯ ಮೋಂಗೀರ್ ನಗರದ ನಿವಾಸಿ. ಈಕೆಗೆ 16 ವರ್ಷ ಇರುವಾಗಲೇ ತಂದೆ ಸಾವನ್ನಪ್ಪಿದ್ದರು. ಹೀಗಾಗಿ ತಾಯಿ ಆಕೆಗೆ 16 ವರ್ಷಕ್ಕೆ ಮದುವೆ ಮಾಡಿಸಿದ್ದರು. ಒಂದಷ್ಟು ವರ್ಷಗಳ ಕಾಲ ದಾಂಪತ್ಯ ಜೀವನ ಸಾಗಿತ್ತು. ಅಷ್ಟರಲ್ಲೇ ಎರಡು ಮಕ್ಕಳಾಗಿದ್ದವು. ತದನಂತರದಲ್ಲಿ ಗಂಡ ಹೆಂಡತಿ ನಡುವೆ ವೈಷಮ್ಯ ಮೂಡಿತ್ತು ಹೀಗಾಗಿ ಆಕೆ ಗಂಡನಿಂದ ಡೈವರ್ಸ್ ಪಡೆದು ತಾಯಿ ಮನೆ ಸೇರುತ್ತಾಳೆ.

ಈಕೆ ಶಾಲಾ ದಿನಗಳಲ್ಲಿ ಅತಿ ಬುದ್ಧಿವಂತೆಯಾಗಿದ್ದಳು. ಎಲ್ಲ ಪರೀಕ್ಷೆಗಳಲ್ಲಿ ಶೇಕಡಾ 90ಕ್ಕೂ ಅಧಿಕ ಅಂಕಗಳನ್ನು ಪಡೆಯುತ್ತಿದ್ದಳು. ಹೀಗಾಗಿ ಗಂಡನಿಂದ ದೂರವಾದ ಬಳಿಕ ಕಷ್ಟಪಟ್ಟು ಎಂಜಿನಿಯರಿಂಗ್ ಪಾಸ್ ಮಾಡಿ ಹಲವು ಬಗೆಯ ಕಂಪ್ಯೂಟರ್ ಕೋರ್ಸ್‌ಗಳನ್ನು ಮಾಡಿ, ಆ ನಂತರ ಬೆಂಗಳೂರಿಗೆ ಬಂದ ಈಕೆ ಟಿಸಿಎಸ್ ಸೇರಿದಂತೆ ಹಲವೆಡೆ ಕೆಲವು ವರ್ಷಗಳ ಕಾಲ ಕೆಲಸ ಮಾಡುತ್ತಾಳೆ. ಈಕೆ ತಿಂಗಳಿಗೆ 1 ಲಕ್ಷದ 20 ಸಾವಿರ ರೂ. ಸಂಬಳ ಪಡೆಯುವ ತನಕ ಬೆಳೆದಿದ್ದಳು.

ಹೀಗಿರುವಾಗಲೇ ನಿಹಾರಿಕಾಗೆ ಉತ್ತರ ಭಾರತದ ಹರಿಯಾಣ ಮೂಲದ ವ್ಯಕ್ತಿಯೊಬ್ಬನ ಜೊತೆ ಪ್ರೇಮಾಂಕುರವಾಗಿ ಹರಿಯಾಣಕ್ಕೆ ತೆರಳಿ ಆತನೊಂದಿಗೆ ಬದುಕು ಕಟ್ಟಿಕೊಳ್ಳುತ್ತಾಳೆ. ಆದರೆ ಕೆಲವೇ ಸಮಯದಲ್ಲಿ ಅವರ ಸಂಬಂಧ ಹಣಕಾಸಿನ ವಿಚಾರದಲ್ಲಿ ಹಳಸಿ ಹೋಗುವುದಲ್ಲದೆ, ಹಣದ ವ್ಯವಹಾರದಲ್ಲಿ ವಂಚನೆ ಮಾಡಿದ ಆರೋಪದಡಿ ಜೈಲಿಗೂ ಹೋಗುತ್ತಾಳೆ. ಅಲ್ಲೊಬ್ಬಳು ಮಹಿಳೆ ಪರಿಚಯವಾಗುತ್ತದೆ. ಆಕೆಯ ಮಗ ಅಂಕುರ್ ರಾಣಾನೂ ಈಕೆಗೆ ಪರಿಚಯವಾಗುತ್ತಾನೆ. ಅಲ್ಲಿ ಜೈಲಿನಿಂದ ಹೊರ ಬಂದ ನಂತರ ನಿಹಾರಿಕಾ ಹರಿಯಾಣ ಬಿಟ್ಟು ಬೆಂಗಳೂರಿಗೆ ಬರುತ್ತಾಳೆ.

ಬೆಂಗಳೂರಿನಲ್ಲಿದ್ದ ನಿಹಾರಿಕಾಳಿಗೆ 2018ರಲ್ಲಿ ತೆಲಂಗಾಣದಲ್ಲಿ ರಿಯಲ್ ಎಸ್ಟೇಟ್ ನಡೆಸುತ್ತಿದ್ದ ಉದ್ಯಮಿ ರಮೇಶ್ ಕುಮಾರ್‌ನ ಪರಿಚಯವಾಗುತ್ತದೆ. ಇಬ್ಬರ ನಡುವೆ ಪ್ರೇಮಾಂಕುರವಾಗಿ ಮದುವೆಯಾಗುವ ನಿರ್ಧಾರ ಮಾಡುತ್ತಾರೆ. ಆತನಿಗೆ ಎರಡನೇ ಹೆಂಡತಿಯಾಗಿ ನಿಹಾರಿಕಾ ಆತನ ಬದುಕಿನೊಳಗೆ ಪ್ರವೇಶ ಪಡೆಯುತ್ತಾಳೆ. ಹಾಗಾಗಿ ರಿಜಿಸ್ಟರ್ ವಿವಾಹ ಮಾಡಿಕೊಳ್ಳುತ್ತಾರೆ. ಆತನ ಬಳಿ ಸಾಕಷ್ಟು ಹಣವಿದ್ದುದರಿಂದ ಆಕೆಯ ಐಷಾರಾಮಿ ಜೀವನಕ್ಕೆ ಬೇಕಾದ ಹಣಕಾಸು ವ್ಯವಸ್ಥೆಯನ್ನು ಆತನೇ ಪೂರೈಸುತ್ತಿದ್ದನು. ಆದ್ದರಿಂದ ಶೋಕಿ ಜೀವನ ಮಾಡಿಕೊಂಡು ನೆಮ್ಮದಿಯಾಗಿದ್ದಳು. ಹೀಗೆ ಇದ್ದಿದ್ದರೆ ಏನು ಆಗುತ್ತಿರಲಿಲ್ಲ, ಆದರೆ ಆಗಿದ್ದೇ ಬೇರೆ.

ಬೆಂಗಳೂರಿನಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ ನಿಹಾರಿಕಾ ನಾಯಿ ಸಾಕಿದ್ದಳು. ಅದಕ್ಕೆ ಆರೋಗ್ಯ ಕೈಕೊಟ್ಟಾಗ ಅದನ್ನು ಹಿಡಿದುಕೊಂಡು ಬೆಂಗಳೂರಿನ ರಾಮಮೂರ್ತಿ ನಗರದ ಪಶು ವೈದ್ಯ ಡಾ. ನಿಖಿಲ್ ಬಳಿ ಹೋಗಿದ್ದಳು. ನಾಯಿಯ ಆರೋಗ್ಯದ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ನಡುವೆ ಮಾತುಕತೆಗಳು ಆರಂಭವಾದವು. ಕ್ರಮೇಣ ಮಾತಿನಲ್ಲಿ ಮಂಡಿ ತಿನ್ನಲು ಶುರು ಮಾಡಿದರು. ನಿಧಾನವಾಗಿ ಇಬ್ಬರ ನಡುವೆ ಸಂಬಂಧ ಶುರುವಾಗಿತ್ತು. ದುಡ್ಡುಕೊಡೋಕೆ ಗಂಡ ರಮೇಶ್ ಕುಮಾರ್ ಇದ್ದ ಹೀಗಾಗಿ ಡಾ.ನಿಖಿಲ್ ಜತೆಗೆ ಲವ್ವಿ ಡವ್ವಿ ಶುರು ಮಾಡಿಕೊಂಡಳು.

ಯಾವಾಗ ಬಾಯ್ ಫ್ರೆಂಡ್ ಸಿಕ್ಕಿದನೋ ಗಂಡನನ್ನು ನೆಗ್ಲೆಟ್ ಮಾಡಲಾರಂಭಿಸಿದಳು. ಹೀಗಾಗಿ ಗಂಡಹೆಂಡತಿ ನಡುವೆ ಭಿನ್ನಾಭಿಪ್ರಾಯಗಳು ಶುರುವಾದವು. ಆತ ಅವಳಿಗೆ ದುಡ್ಡು ಕೊಡುವುದನ್ನು ನಿಲ್ಲಿಸಿದ್ದನು. ಹೀಗಾಗಿ ಶೋಕಿ ಮಾಡುತ್ತಿದ್ದ ನಿಹಾರಿಕಳ ಬದುಕು ಅಂಡು ಸುಟ್ಟ ಬೆಕ್ಕಿನಂತಾಗಿತ್ತು. ಇನ್ನು ಮುಂದೆ ಆತ ತನಗೆ ದುಡ್ಡು ಕೊಡಲ್ಲ ಗೊತ್ತಾದಾಗ ಅವನಿಂದ ದುಡ್ಡು ಹೊಡೆದು ಅವನನ್ನೇ ಮುಗಿಸುವ ನಿರ್ಧಾರಕ್ಕೆ ನಿಹಾರಿಕಾ ಬಂದು ಬಿಟ್ಟಿದ್ದಳು. ಈ ನಡುವೆ ಗಂಡನಿಂದ 8 ಕೋಟಿ ರೂ. ಹಣ ಪಡೆಯುವ ನಿರೀಕ್ಷೆ ಮಾಡಿದ್ದಳಾದರೂ ಅದು ಸಿಗಲ್ಲ ಎಂಬುದು ಗೊತ್ತಾಗಿತ್ತು. ಹೀಗಾಗಿ ಕೊಲೆ ಮಾಡಿ ಹಣ ಪೀಕುವ ಪ್ರಯತ್ನ ಮಾಡಿದ್ದಳಲ್ಲದೆ, ಅದಕ್ಕಾಗಿ ಹರಿಯಾಣದಲ್ಲಿ ಪರಿಚಯನಾಗಿದ್ದ ತನ್ನ ಹಳೇ ಸ್ನೇಹಿತ ಅಂಕುರ್ ರಾಣಾನೊಂದಿಗೆ ಸುಮಾರು 27 ಲಕ್ಷಕ್ಕೆ ಡೀಲ್ ಕುದುರಿಸಿದ್ದಳು.


ಡಿವೈಎಸ್ಪಿ ಆರ್.ವಿ. ಗಂಗಾಧರಪ್ಪ


ಪಿಐ ಮುದ್ದು ಮಾದೇವ

ಮೊದಲೇ ರಮೇಶ್ ಕುಮಾರ್‌ನನ್ನು ಎಲ್ಲಿಗೆ ಕರೆಯಿಸಿಕೊಳ್ಳಬೇಕು? ಹೇಗೆ ಮುಗಿಸಬೇಕು ಎಂಬುದರ ಬಗ್ಗೆ ಸ್ಕೆಚ್ ಹಾಕಿ ಅದರಂತೆ ಹರಿಯಾಣದಿಂದ ಅಂಕುರ್ ರಾಣಾನನ್ನು ದಿನಾಂಕ 01-10-2024ರಂದು ಹೈದರಾಬಾದ್‌ಗೆ ಬರಲು ತಿಳಿಸಿದ್ದಾಳೆ. ಆ ನಂತರ ಕೊಲೆಯ ರೂಪುರೇಷೆ ತಯಾರು ಮಾಡಿದ್ದಾರೆ. ಅದರಂತೆ. ದಿನಾಂಕ 03-10-2024ರಂದು ನಿಹಾರಿಕಾ ಗಂಡ ರಮೇಶ್ ಕುಮಾರ್‌ನನ್ನು ಕರೆಯಿಸಿಕೊಂಡು ಕಾರಿನಲ್ಲಿ ಡ್ರಾಪ್ ಮಾಡುವಂತೆ ಹೇಳಿದ್ದಾಳೆ ಇವಳ ಜತೆಗೆ ಅಂಕುರ್ ರಾಣಾನು ಇದ್ದನು. ಇವರ ಒಳ ಮರ್ಮ ಅರಿಯದ ಗಂಡ ಕೆಂಪು ಮರ್ಸಿಡಿಸ್ ಬೆನ್ಜ್ ಟಿಎಸ್-07 ಎಫ್‌ಎಸ್-5679 ನಂಬರಿನ ಕಾರಿನಲ್ಲಿ ಕರೆದೊಯ್ದಿದ್ದಾನೆ. ಉಪ್ಪಲ್-ಭುವನಗಿರಿ ನಡುವಿನ ಹೆದ್ದಾರಿಯ ಬಳಿ ಕಾರನ್ನು ಬದಿಗೆ ನಿಲ್ಲಿಸುವಂತೆ ನಿಹಾರಿಕಾ ಹೇಳಿದ್ದಾಳೆ. ಬಳಿಕ ಅಂಕುರ್ ರಾಣಾನೊಂದಿಗೆ ಸೇರಿದ ನಿಹಾರಿಕಾ ಹಗ್ಗದಿಂದ ಕುತ್ತಿಗೆ ಬಿಗಿದು ರಮೇಶ್ ಕುಮಾರ್‌ನನ್ನು ಕೊಲೆ ಮಾಡುತ್ತಾರೆ.


ತೆಲಂಗಾಣದಲ್ಲಿ ಆರೋಪಿಗಳೊಂದಿಗೆ ಪೊಲೀಸರು

ಆ ನಂತರ ಅಲ್ಲಿಂದ ಬೆಂಗಳೂರಿನ ಹೊರಮಾವು ಎಂಬಲ್ಲಿಗೆ ಬಂದು ತನ್ನ ಬಾಯ್ ಫ್ರೆಂಡ್ ಡಾ. ನಿಖಿಲ್ ಬಳಿ ವಿಚಾರ ತಿಳಿಸಿ ಶವವನ್ನು ಯಾರಿಗೂ ಸಿಗದಂತೆ ನಾಶ ಮಾಡುವ ಉದ್ದೇಶದಿಂದ ಕೊಡಗಿನ ಸುಂಟಿಕೊಪ್ಪ ಬಳಿ ಪನ್ಯ ಎಸ್ಟೇಟ್‌ಗೆ ತಂದು ಯಾರಿಗೂ ಗೊತ್ತಾಗದಂತೆ ಬೆಂಕಿ ಹಚ್ಚಿ ಕಾರಿನೊಂದಿಗೆ ತೆರಳುತ್ತಾರೆ. ಆದಾಗಲೇ ಕೊಲೆ ಮಾಡಿ ಕೆಲವು ದಿನಗಳ ಕಾಲ ಕಾರಿನಲ್ಲಿಟ್ಟುಕೊಂಡೇ ಸುತ್ತಾಡಿದ ಇವರು ಕೊನೆಗೆ ಕೊಡಗಿಗೆ ತಂದು ಯಾರು ಕಾಣದ ಪ್ರದೇಶದಲ್ಲಿ ಎಸೆದು ಪೆಟ್ರೋಲ್ ಹಾಕಿ ಸುಡುತ್ತಾರೆ.


ಮಹಜರ್ ಮಾಡುತ್ತಿರುವ ಪೊಲೀಸರು

ಇದಾದ ನಂತರ ಅಕ್ಟೋಬರ್ 8ರಂದು ಶವ ಪತ್ತೆಯಾಗುತ್ತದೆ. ಆದರೆ ಅತ್ತ ನಾವು ಸಿಗಲ್ಲ ಸೇಫ್ ಆಗಿದ್ದೇವೆ ಎಂದುಕೊಳ್ಳುವಾಗಲೇ ಕೊಡಗು ಪೊಲೀಸರು 22-10-2024ರಂದು ಮೊದಲಿಗೆ ನಿಹಾರಿಕಾ ಮತ್ತು ನಿಖಿಲ್‌ನನ್ನು ಬಂಧಿಸಿ ವಿಚಾರಣೆ ಮಾಡಿ ಕೃತ್ಯಕ್ಕೆ ಬಳಸಿದ ಕಾರು, ಮೊಬೈಲ್ ಹಾಗೂ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಂಡಿದ್ದರು. ಅಲ್ಲದೆ ಮತ್ತೊಬ್ಬ ಹಂತಕ ಅಂಕೂರ್ ರಾಣಾನ ಬಂಧಿಸುವ ಸಲುವಾಗಿ ವಿಶೇಷ ತನಿಖಾಧಿಕಾರಿಯಾಗಿದ್ದ ಸೋಮವಾರಪೇಟೆ ಠಾಣೆಯ ಪೊಲೀಸ್ ನಿರೀಕ್ಷಕರಾದ ಮುದ್ದು ಮಾದೇವರವರನ್ನು ನೇಮಿಸಿ ತನಿಖೆ ಮುಂದುವರೆಸಲಾಗಿತ್ತು. ಅದರಂತೆ ಪಿಎಸ್‌ಐ, ಚಂದ್ರಶೇಖರ್ ಸಿಬ್ಬಂದಿ ರಂಜಿತ್, ಉದಯಕುಮಾರ್, ಸುದೀಶ್‌ಕುಮಾರ್‌ರವರು ಹರಿದ್ವಾರಕ್ಕೆ ತೆರಳಿ ಮಿಂಚಿನ ಕಾರ್ಯಾಚರಣೆ ನಡೆಸಿ ಆತನನ್ನು ವಶಕ್ಕೆ ಪಡೆದುಕೊಂಡು ಕರೆತರುವಲ್ಲಿ ಯಶಸ್ವಿಯಾಗಿದ್ದರು. ಈ ನಡುವೆ ಹಂತಕರ ಪೈಕಿ ನಿಹಾರಿಕ ಮತ್ತು ಆಕೆಯ ಬಾಯ್ ಫ್ರೆಂಡ್ ನಿಖಿಲ್ ಹಾಗೂ ಸುಫಾರಿ ಕಿಲ್ಲರ್ ಅಂಕುರ್ ರಾಣಾ ಎಂಬುವರುಗಳನ್ನು ಬಂಧಿಸಲಾಗಿ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿ ನಂತರ ಪೊಲೀಸ್ ಕಸ್ಟಡಿಗೆ ಮೂವರನ್ನು ಪಡೆದಿದ್ದರು.


ವಿಚಾರಣೆ ಮಾಡುತ್ತಿರುವ ಪೊಲೀಸ್ ಅಧಿಕಾರಿಗಳು

ಆ ನಂತರ ವಿಚಾರಣೆ ಮುಗಿಸಿ ಓರ್ವ ಆರೋಪಿ ಡಾ.ನಿಖಿಲ್‌ನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಮೇರೆಗೆ ನ್ಯಾಯಾಂಗ ಬಂಧನಕ್ಕೆ ನೀಡಲಾಗಿತ್ತು. ಪ್ರಮುಖ ಆರೋಪಿಗಳಾದ ಪಂತುಲ್ ನಿಹಾರಿಕಾ ಹಾಗೂ ಅಂಕುರ್ ರಾಣಾ ಪೊಲೀಸ್ ಕಸ್ಟಡಿಗೆ ಪೊಲೀಸ್ ತಂಡ ಪಡೆದುಕೊಂಡು ಅ. 28ರ ಸೋಮವಾರ ಬೆಳಗ್ಗೆ ಕೊಡಗಿನ 13 ಮಂದಿ ಪೊಲೀಸರ ತಂಡ ಟಿ.ಟಿ. ವಾಹನದಲ್ಲಿ ಸ್ಥಳ ಮಹಜರು ನಡೆಸಲು ಮೊದಲು ಬೆಂಗಳೂರಿಗೆ ತೆರಳಿ ಅಲ್ಲಿ ಮಹಜರು ನಡೆಸಿ ನಂತರ ಅ.29ರ ಮಂಗಳವಾರ ತೆಲಂಗಾಣಕ್ಕೆ ಕರೆದುಕೊಂಡು ಹೋಗಿದ್ದರು.

ಕೃತ್ಯ ನಡೆದ ಸ್ಥಳವಾದ ಉಪ್ಪಲ್ ಭುವನಗಿರಿಯ ರಾಜ್ಯ ಹೆದ್ದಾರಿಯ ಸಮೀಪ ಮಹಜರು ಕಾರ್ಯ ನಡೆಸಿ ರಾತ್ರಿ ಹೈದರಾಬಾದ್‌ನಿಂದ 30 ಕಿಲೋಮೀಟರ್ ದೂರದ ಉಪ್ಪಲ್ ಸಮೀಪ ಉಡುಪಿ ಗಾರ್ಡನ್ ಹೋಟೆಲ್ ವಸತಿ ಗ್ರಹದ ಮೂರನೇ ಅಂತಸ್ತಿನಲ್ಲಿ ಆರೋಪಿ ಸಹಿತ ಎಲ್ಲರೂ ತಂಗಿರುವ ಸಮಯದಲ್ಲಿ ಅ.31ಗುರುವಾರ ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ಎಲ್ಲರೂ ನಿದ್ರೆಗೆ ಜಾರಿದ ಸಂದರ್ಭ ಕೈಗೆ ಹಾಕಿರುವ ಖೋಳವನ್ನು ಯಾರು ತಿಳಿಯದಂತೆ ಕೈಯಿಂದ ಮೆಲ್ಲನೆ ಕಳಚಿ ಮುಂಭಾಗದ ಬಾಗಿಲ ಸಮೀಪ ಇರುವ ಕಿಟಕಿಯ ಮೂಲಕ ಪರಾರಿಯಾಗಿದ್ದಾನೆ. ಅಷ್ಟೇ ಅಲ್ಲದೆ, ಪೊಲೀಸ್ ಬಳಿ ಇದ್ದ ಸಂಪರ್ಕ ಸಾಧಿಸುವ ಸಾಧನವನ್ನು ಕೂಡ ಎತ್ತಿಕೊಂಡು ಪರಾರಿಯಾಗಿದ್ದಾನೆ ಎನ್ನಲಾಗಿದೆ. ಇತ್ತ ಬೆಳಿಗ್ಗೆ ಪೊಲೀಸರು ಎದ್ದು ನೋಡುವಾಗ ಆರೋಪಿ ಪರಾರಿಯಾಗಿರುವುದು ಬೆಳಕಿಗೆ ಬಂದಿದ್ದು ಈ ಸಂಬಂಧ ಸಮೀಪದ ಕಂಚರಾಮ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಆ ನಂತರ ಈತನ ಪತ್ತೆಗಾಗಿ ಸುಂಟಿಕೊಪ್ಪ ಠಾಣಾಧಿಕಾರಿ ಚಂದ್ರಶೇಖರ್ ಹಾಗೂ ಅವರ ತಂಡ ತೀವ್ರ ಸ್ವರೂಪದ ಕಾರ್ಯಾಚರಣೆ ನಡೆಸಿ ನವೆಂಬರ್ 5ರಂದು ಜೈಪುರದಲ್ಲಿ ಬಂಧಿಸಿ ಕೊಡಗಿಗೆ ಕರೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿ ಅಂಕುರ್ ರಾಣಾ ಪರಾರಿ ಪ್ರಕರಣ ಕಷ್ಟಪಟ್ಟು ತನಿಖೆ ನಡೆಸಿ ಹಂತಕರನ್ನು ಬಂಧಿಸಿದ್ದ ಕೊಡಗು ಪೊಲೀಸ್ ತಂಡಕ್ಕೆ ತೀವ್ರ ಮುಜುಗರ ತಂದಿತ್ತು. ಇದೀಗ ಆತನ ಬಂಧಿಸಿರುವುದು ನೆಮ್ಮದಿಯುಸಿರು ಬಿಡುವಂತಾಗಿದೆ. ಈ ಮಧ್ಯೆ, ಪೊಲೀಸ್ ಕಸ್ಟಡಿಗೆ ಪಡೆದುಕೊಂಡಿದ್ದ ಆರೋಪಿಗಳಾದ ನಿಹಾರಿಕಾ ಹಾಗೂ ಅಂಕುರ್ ರಾಣಾನನ್ನು ನವೆಂಬರ್ 4ರಂದು ಪೊಲೀಸರು ಮಡಿಕೇರಿ ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿತ್ತು. ಆದರೆ ಅಂಕುರ್ ರಾಣಾ ತಪ್ಪಿಸಿಕೊಂಡಿದ್ದರಿಂದ ನಿಹಾರಿಕಾಳನ್ನು ಮಾತ್ರ ಹಾಜರುಪಡಿಸಿ, ತೆಲಂಗಾಣದಲ್ಲಿ ದೂರು ನೀಡಲಾದ ಎಫ್‌ಐಆರ್ ಕಾಪಿಯನ್ನು ಹಾಜರುಪಡಿಸಿ, ಕೂಡಲೇ ತಪ್ಪಿಸಿಕೊಂಡಿದ್ದ ಆರೋಪಿಯನ್ನು ಬಂಧಿಸುವುದಾಗಿ ನ್ಯಾಯಾಧೀಶರಲ್ಲಿ ಮನವಿ ಮಾಡಿಕೊಳ್ಳಲಾಯಿತು. ಆರೋಪಿ ತಪ್ಪಿಸಿಕೊಂಡಿದ್ದಕ್ಕೆ ನ್ಯಾಯಾಧೀಶರು ತೀವ್ರ ಸ್ವರೂಪದ ಆಕ್ಷೇಪವನ್ನು ವ್ಯಕ್ತಪಡಿಸಿ ಕೆಲವು ಹಿರಿಯ ಅಧಿಕಾರಿಗಳಿಗೆ ಕಾನೂನಿನಂತೆ ಶೋಕಾಷ್ ನೋಟಿಸನ್ನು ಜಾರಿಗೆ ಮಾಡಿದ್ದರು. ಇದೀಗ ಆರೋಪಿಯನ್ನು ಬಂಧಿಸಲಾಗಿದೆ. ಆದರೆ ಕರ್ತವ್ಯಲೋಪ ಮೆರೆದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಮೇಲೆ ಕಾನೂನು ಕ್ರಮ ಜಾರಿಯಾಗುವುದಂತು ನಿಶ್ಚಿತ.

# ಕಚಗುಳಿ

## ಹಲೋ ಮೈ ಡಿಯರ್

''ಹಲೋ ಮೈ ಡಿಯರ್.''

''ಯಾರು... ಯಾರದು?

''ಏ... ನನ್ನವಾಯ್ಸ್‌ಕೇಳಿದ ಮೇಲೆ ಗೊತ್ತಾಗಲಿಲ್ವ? ಏ... ನಾನು ಕಣೋ ಶ್ವೇತ...''

ಅವನಿಂದ ಪ್ರತಿಕ್ರಿಯೆ ಬರಲಿಲ್ಲ.

''ಯಾಕೆ ಮಾತಾಡುತ್ತಿಲ್ಲ?''

ಅವನು ಗಂಭೀರವಾಗಿ ''ನಾನು ಸ್ಟಡಿ ಮಾಡ್ತಾ ಇದೀನಿ. ನಾಳೆ ಸೆಮಿನಾರ್ ಇದೆ. ನನ್ನ ಡಿಸ್ಟರ್ಬ್ ಮಾಡ್ಬೇಡ ಶ್ವೇತ'' ಎಂದನು.

ಅವಳು ನಗಾಡಿದಳು. ಮತ್ತೇರಿಸುವ ಮಾದಕ ನಗು! ಆ ನಗುವಿನ ಸೆಳೆತಕ್ಕೆ ಒಳಗಾಗದ ಯುವಕರೇ ಮಾನಸ ಗಂಗೋತ್ರಿಯಲ್ಲಿ ಇರಲಿಲ್ಲ.

ಶ್ವೇತ ಸ್ಟನ್ನಿಂಗ್ ಬ್ಯುಟಿ. ಗಂಗೋತ್ರಿಯ ಚೆಲುವೆ. ಅವಳ ನಗುವಿಗಾಗಿ, ಕಣ್ಣಿನ ಕುಡಿ ನೋಟಕ್ಕಾಗಿ ಯುವಕರು ಹಂಬಲಿಸುತ್ತಾರೆ.

ಈ ಸನ್ಯಾಸಿ ಯಾರು? ಈ ಚೆಲುವೆ ತಾನಾಗಿಯೇ ಫೋನ್ ಮಾಡಿ ಮಾತಾಡಲು ಹಂಬಲಿಸುತ್ತಿರುವಾಗ ಇವನು ಯಾಕೆ ಹೀಗಾಡುತ್ತಿದ್ದಾನೆಯ

ಅವಳು ''ಏ... ನನಗಿಂತ ನಿನಗೆ ಓದು ಮುಖ್ಯವಾಯಿತೆ? ಎಲ್ಲಿ... ಒಂದೇ ಒಂದು ಸಲ ನನ್ನನ್ನು ನೆನು ಮಾಡಿಕೊಂಡು ಮಾತಾಡು.''

''ಸಾರಿ ಶ್ವೇತ.''

''ಈ ಸಾರಿ ಯಾಕೆ?''

''ನಿನಗಾಗಿ ಹಂಬಲಿಸುತ್ತಾ ಪರದಾಡುತ್ತಿರುವರಿಗೆ ಫೋನ್ ಮಾಡಿದರೆ ಅವರಿಗೆ ತುಂಬಾ ತುಂಬಾ ಖುಷಿ ಆಗುತ್ತೆ'' ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದನು.

ಅವನು ಚಂದನ್ ಬಾಗಡೆ.

ಗಂಗೋತ್ರಿಯ ಎಂ.ಎ. ಸ್ಟುಡೆಂಟ್.

●●●

ಶ್ವೇತಾಳ ಮುಖ ಕೆಂಪಾಗಿದೆ. ಅವಳ ಜೊತೆ ಹತ್ತಾರು ಮಂದಿ ಗೆಳತಿಯರಿದ್ದಾರೆ. ಈ ಫೋನ್ ಸಂಭಾಷಣೆ ಅವರಿಗೆ ಕೇಳಿಸಿದೆ. ಅವಳಿಗೆ ಒಂದು ರೀತಿ ಶೇಮ್ ಆಗಿದೆ. ಆಗ ಗೆಳತಿಯರಲ್ಲಿ ಒಬ್ಬಳು ''ಏ ಶ್ವೇತ... ಎಲ್ಲಾ ವಿದ್ಯಾರ್ಥಿಗಳಂತೆ ಚಂದನ್ ಬಾಗಡೆ ಅಲ್ಲ. ನಿನ್ನ ಬೆತ್ತಲಾಗಿ ಬ್ರೇಕ್ ಡ್ಯಾನ್ಸ್ ಮಾಡಿದರೂ ಅವನು ಬದಲಾಗೋಲ್ಲ'' ಎಂದಳು.

ಶ್ವೇತಾಳ ಮುಖ ಕೋಪದಿಂದ ಕಡು ಕೆಂಪಾಯಿತು. ಅವಳು ಗಂಭೀರವಾಗಿ ''ನಾನು ನೇಕೆಡ್ ಡ್ಯಾನ್ಸ್ ಮಾಡೋ ಅಗತ್ಯ ಇಲ್ಲ. ನನ್ನ ನಗು, ಸೌಂದರ್ಯದಿಂದ ಅವನ ಮೇಲೆ ಲವ್ ಬಲೆ ಬೀಸುತ್ತೀನಿ'' ಎಂದಳು.

ಮತ್ತೊಬ್ಬಳು ಗೆಳತಿ ''ನೀನೇನೋ ಬಲೆ ಬೀಸುತ್ತೀಯ ನಿಜ. ಆದರೆ ಆ ಬಲೆಗೆ ಆದೂರ್ವಾಸ ಮಹರ್ಷಿ ಬೀಳಬೇಕಲ್ಲ'' ಎಂದಳು.

''ನನ್ನ ಜೊತೆ ಚಾಲೆಂಜ್ ಮಾಡ್ತೀರ.''

''ಹೌದು... ಇದು ಲವ್ ಚಾಲೆಂಜ್.''

''ನಾನು... ನಾನು ಈ ಚಾಲೆಂಜ್‌ನಲ್ಲಿ ಗೆಲ್ತೀನಿ. ಅವನನ್ನು ಲವ್ ಬಲೆಗೆ ಬೀಳುವ ಹಾಗೆ ಮಾಡ್ತೀನಿ.''

''ಒಂದು ವೇಳೆ ಆಗದಿದ್ದರೆ...''

ಕಾಲೇಜಿಗೆ... ಐ ಮೀನ್ ಗಂಗೋತ್ರಿಗೆ ಬರೋದನ್ನ ಸ್ಟಾಪ್ ಮಾಡ್ತೀನಿ.''

ಗೆಳತಿಯರು ಗಾಬರಿಯಾದರು.

●●●

ಚಂದನ್ ಬಾಟಿಯನಿಗೆ ವಾಟ್ಸಾಪ್ ಮೆಸೇಜ್ ಬಂದಿತು. ಹಲೋ ಡಿಯರ್ ಚಂದನ್. ಶ್ವೇತಾಳ ಲವ್ ಮೆಸೇಜ್. ನಾನು ನಿನ್ನನ್ನು ಲವ್ ಮಾಡುತ್ತಿದ್ದೀನಿ. ಇದು ಸತ್ಯ.. ಸತ್ಯ...! ನೀನು ನನ್ನ ಲವ್ ಮಾಡೋಲ್ವ? ನನಗೆ ನಿರಾಸೆ ಮಾಡ್ಬೇಡ. ಇವತ್ತು ಕಾಲೇಜಿನ ಗಾರ್ಡನ್ ಹತ್ತಿರ ನಿನಗಾಗಿ ಕಾಯುತ್ತಿರುತ್ತೇನೆ. ಬೆಳಿಗ್ಗೆ ಹತ್ತು ಗಂಟೆಗೆ ಸರಿಯಾಗಿ ನೀನು ಬರಬೇಕು. ನಾನು ಲವ್ ರೋಸ್ ಕೊಟ್ಟು 'ಐ ಲವ್ ಯೂ ಅಂತ ಹೇಳ್ತೀನಿ.' ನಿನ್ನ ಪ್ರೀತಿ ನನಗೆ ಬೇಕು. ನಿನಗಾಗಿ ಕಾದಿರುತ್ತೇನೆ.

●●●

ಗಂಗೋತ್ರಿಯ ಮುಂಭಾಗದಲ್ಲಿರುವ ಗಾರ್ಡನ್‌ನಲ್ಲಿ ಶ್ವೇತ ಇದ್ದಾಳೆ. ಅವಳು ತನ್ನ ಸೌಂದರ್ಯಕ್ಕೆ ಮೆರಗು ಬರುವ ರೀತಿಯಲ್ಲಿ ಮೇಕಪ್ ಮತ್ತು ಡ್ರೆಸ್ ಮಾಡಿಕೊಂಡು ಚಿತ್ತಾಕರ್ಷಕ ಸೌಂದರ್ಯದಿಂದ ಆ ಚೆಲುವೆ ಕಂಗೊಳಿಸುತ್ತಿದ್ದಾಳೆ.

ಅವಳ ಕೈಯಲ್ಲಿ ಗುಲಾಬಿ ಇದೆ.

ಅವಳು ಚಡಪಡಿಸುತ್ತಿದ್ದಾಳೆ.

ಗೆಳತಿಯರಿಗೆ ಈ ಸಂಗತಿ ಹೇಳಿರಲಿಲ್ಲ. ಯಾಕೆ ಅಂದರೆ ಮತ್ತೊಂದು ಸಲ ಅವಮಾನ ಆಗಬಾರದು ಎಂಬ ಉದ್ದೇಶದಿಂದ ಗುಟ್ಟು ಮಾಡಿದ್ದಾಳೆ.

ಹತ್ತು ನಿಮಿಷಗಳಾಯಿತು.

ಚಂದನ್ ಬಾಟಿಯ ಬರಲಿಲ್ಲ.

ಅವಳಿಗೆ ಅನುಮಾನ ಕಾಡುತ್ತಿದೆ.

ಆಗ ಮೆಸೇಜ್ ಬಂದಿತು.

''ನನಗಾಗಿ ಕಾಯಬೇಡ. ಈ ರೀತಿ ಟೈಂ ವೇಸ್ಟ್ ಮಾಡುವುದರ ಬರಲು ಓದಿನ ಕಡೆ ಗಮನ ಕೊಡು. ಮಾಸ್ಟರ್ ಡಿಗ್ರಿಯಲ್ಲಿ ರ‍್ಯಾಂಕ್ ಪಡೆಯಲು ಟ್ರೈ ಮಾಡು.''

ಈ ಸಲ ಸಹ ಫೇಲಾಗಿದೆ.

ಇದೆಂತಹ ಅವಮಾನ.

●●●

ಶ್ವೇತಾಳಿಗೆ ಫೋನ್ ಕಾಲ್ ಬಂದಿತು. ಗೆಳತಿಯರಲ್ಲಿ ಒಬ್ಬಳಾದ ಮಾಲತಿ ''ಶ್ವೇತ... ಚಂದನ್ ಬಂದಿದ್ನ?''

ಅವಳು ಚಡಪಡಿಸುತ್ತಾ ''ಎಲ್ಲಿಗೆ?''

''ರೋಸ್ ಗಾರ್ಡನ್‌ಗೆ.''

''ಅವನು ಬಂದೇ ಬರುತ್ತಾನೆ. ಅಂತ ನೀನು ಗಾರ್ಡನ್‌ನಲ್ಲಿ ಕಾಯುತ್ತಿದ್ದೆ. ರೋಸ್ ಕೊಟ್ಟು ಲವ್ ಯೂ ಡಿಯರ್ ಅಂತ ಹೇಳಲು ಕಾಯುತ್ತಿದ್ದೆ.''

ಅವಳ ಮುಖ ರಂಗೇರಿತು.

''ನಾನು ಹೇಳದಿದ್ದರೂ ಗೆಳತಿಯರು ಫಾಲೋ ಮಾಡಿ ತಿಳಿದುಕೊಳ್ಳುತ್ತಿದ್ದಾರೆ. ಇನ್ನು ಮುಂದೆ ನಾನು ಎಚ್ಚರಿಕೆಯಿಂದ ಇರಬೇಕು ಎಂದುಕೊಂಡಳು.

●●●

ನಾಳೆ ಸೆಮಿನಾರ್ ಇದೆ. ಶ್ವೇತ ವಿಷಯ ಮಂಡನೆ ಮಾಡಬೇಕು. ನಂತರ ಸ್ಟುಡೆಂಟ್‌ಗಳು ಪ್ರಶ್ನೆ ಕೇಳ್ತಾರೆ. ಇದು ಒಂದು ರೀತಿ ಸಂವಾದ ಕಾರ್ಯಕ್ರಮ. ಆದರೆ ಅವಳಿಗೆ ಪುಸ್ತಕಗಳನ್ನು ಓದಿ ಥಿಯರಿ ಬರೆಯುವಷ್ಟು ತಾಳ್ಮೆ ಇರಲಿಲ್ಲ.

ಅವಳಿಗೆ ಸೂರ್ಯತೇಜ ನೆನಪಾದನು. ಬುದ್ಧಿವಂತ ವಿದ್ಯಾರ್ಥಿ! ಆದರೆ ಇವಳ ಚೆಲುವಿಗೆ ಮನಸೋತು ತಲೆಕೆಡಿಸಿಕೊಂಡಿದ್ದಾನೆ.

ಅವನಿಗೆ ಫೋನ್ ಮಾಡಿದಳು.

ಸೂರ್ಯತೇಜ ರೋಮಾಂಚನಗೊಂಡನು.

''ಶ್ವೇತ... ನಿನಗೆ ನನ್ನ ನೆನಪು ಬಂದು ಫೋನ್ ಮಾಡಿರೋದು ತುಂಬಾ ಖುಷಿಯಾಗಿದೆ.''

''ನಿನ್ನಿಂದ ಹೆಲ್ಪ್ ಆಗಬೇಕು.''

''ಏನಾಗಬೇಕು ಅಂತ ಹೇಳು. ಧಾರಾಳವಾಗಿ ಮಾಡ್ತೀನಿ.

ಸೆಮಿನಾರ್ ವಿಷಯ ಹೇಳಿದ ನಂತರ ''ನನ್ನ ಹೆಲ್ತ್ ಸರಿಯಿಲ್ಲ. ನನ್ನ ಪರವಾಗಿ ನೀನು ಸ್ಟಡಿ ಮಾಡಿ ಥಿಯರಿ ಬರೆದು ಪಿ.ಡಿ.ಎಫ್. ಮಾಡಿ ವಾಟ್ಸಾಪ್ ಮಾಡು. ಅದನ್ನ ನಾನು ಸಬ್‌ಮಿಟ್ ಮಾಡ್ತೀನಿ.''

ಅವನು ಚಡಪಡಿಸುತ್ತಾ ''ಇಷ್ಟು ತಡವಾಗಿ ಹೇಳಿದರೆ ಹೇಗೆ ಸಾಧ್ಯ ? ಸೆಮಿನಾರ್ ಥಿಯರಿ ಅಂದ್ರೆ ತುಂಬಾ ಓದಬೇಕು.''

''ರಾತ್ರಿ ಪೂರ್ತಿ ಓದು.''

''ಅದು... ಅದು...''

ಅವಳು ಮಾದಕ ಸ್ವರದಲ್ಲಿ ''ಏ ಸೂರ್ಯತೇಜ... ನನಗಾಗಿ ಇದನ್ನ ಮಾಡೋಲ್ವ'' ಎಂದು ಮುದ್ದು, ಮುದ್ದಾಗಿ ಕೇಳಿದಳು.

ಸೂರ್ಯತೇಜ ಕ್ಲೀನ್ ಬೋಲ್ಡ್!

''ಓಕೆ ನಿನಗಾಗಿ ಮಾಡ್ತೀನಿ.''

ಅವಳು ಟಾನಿಕ್ ಕೊಡುವ ರೀತಿಯಲ್ಲಿ ಮಾದಕವಾಗಿ ನಗಾಡಿದಳು.

●●●

ಸೂರ್ಯತೇಜ ಏನೋ ಥಿಯರಿ ರೆಡಿ ಮಾಡಿ ಕಳಿಸಿದ್ದನು. ಆದರೆ ಶ್ವೇತಾಳ ಸೆಮಿನಾರ್ ಸಕ್ಸಸ್ ಆಗಲಿಲ್ಲ.

ಕಾರಣ ಏನು? ಚಂದನ್ ಬಾಟಿಯ!

ತುಂಬಾ ಬುದ್ಧಿವಂತ ವಿದ್ಯಾರ್ಥಿಯಾಗಿದ್ದ ಅವನು ಸಂವಾದದ ಕಾರ್ಯಕ್ರಮದಲ್ಲಿ ಪ್ರಶ್ನೆಗಳನ್ನು ಕೇಳಿದ್ದನು. ಅದೆಂತಹ ಕ್ಲಿಷ್ಟಕರವಾದ ಪ್ರಶ್ನೆಗಳೆಂದರೆ, ಶ್ವೇತ ಉತ್ತರಿಸಲಾರದೆ ಚಡಪಡಿಸಿದ್ದಳು.

●●●

''ಶ್ವೇತ... ಬಲೆ ಬೀಸುವ ಪ್ರೋಗ್ರಾಂ ಸ್ಟಾಪ್ ಮಾಡು. ಚಂದನ್ ಎಲ್ಲರಂತೆ ಅಲ್ಲ. ಅವನೇ ಬೇರೆ, ಅವನ ರೀತಿ ಬೇರೆ. ಓದಿನ ವಿನಹ ಅವನಿಗೇನೂ ಬೇಕಾಗಿಲ್ಲ.''

ಶ್ವೇತ ಗಂಭೀರವಾಗಿ ಹೇಳಿದಳು.

''ನಾನು ಅಷ್ಟೊಂದು ಸುಲಭವಾಗಿ ಸೋಲನ್ನು ಒಪ್ಪಿಕೊಳ್ಳುವುದಿಲ್ಲ.''

''ಹಾಗಾದರೆ ಏನು ಮಾಡ್ತೀಯ?''

''ಸಕ್ಸಸ್ ಆದ್ಮೇಲೆ ಹೇಳ್ತೀನಿ.''

●●●

ಚಂದನ್ ಬಾಟಿಯ ಗಂಗೋತ್ರಿಯ ರಸ್ತೆಯಲ್ಲಿ ಬರುತ್ತಿದ್ದಾನೆ. ಶ್ವೇತ ಎದುರಾಗಿ ಬರುತ್ತಿದ್ದಾಳೆ. ಅವಳು ಎದುರಾದರೂ ಸಹ ಅವಳಿಗೆ ವಿಶ್ ಮಾಡದೆ ತನ್ನ ಪಾಡಿಗೆ ತಾನು ವಿಶ್ ಮಾಡದೆ ತನ್ನ ಪಾಡಿಗೆ ತಾನು ಅಲ್ಲಿಂದ ಹೊರಟನು.

ಆಗ ಸನ್ನಿವೇಶ ಬದಲಾಯಿತು.

ಶ್ವೇತ ನಿಂತಲ್ಲೇ ತೂರಾಡುತ್ತಾ ನೆಲದತ್ತ ವಾಲಿಕೊಳ್ಳಲಾರಂಭಿಸಿದಳು. ಚಂದನ್ ಬಾಗಡೆ ನೋಡಿದನು. ವೇಗವಾಗಿ ನುಗ್ಗಿದನು. ಅವಳು ನೆಲಕ್ಕೆ ಬೀಳುವ ಮೊದಲೇ ಅವಳನ್ನು ತಬ್ಬಿ ಹಿಡಿದುಕೊಂಡನು.

ಅವಳು ನಡುಗುತ್ತಿದ್ದಾಳೆ. ನಡುಗುತ್ತಿರುವಾಗಲೇ ಅವನನ್ನು ಬಿಗಿಯಾಗಿ ತಬ್ಬಿಕೊಂಡಳು. ಎದೆಗೆ ಅವಳ ಸೌಂದರ್ಯ ರೂಪದ ಉಬ್ಬಿರುವ ಎದೆ ಭಾಗ ಪ್ರೆಸ್ ಆಯಿತು. ತುಟಿಗೆ ತುಟಿ ಸೇರಿತು. ಅವಳೇ ಚುಂಬಿಸಿದಳು. ಅವಳ ಚುಂಬನದಲ್ಲಿ ಕಾಮದ ತೀವ್ರತೆ ಇತ್ತು ಎನ್ನುವ ರೀತಿ ಚುಂಬಿಸಿದ್ದರು.

ಇದು ಮೊದಲ ಅನುಭವ. ಅವನು ರೋಮಾಂಚನಗೊಂಡನು. ಆ ಕ್ಷಣಗಳಲ್ಲಿ ಅವನು ಮೈಮರೆತನು. ಒಂದು ರೀತಿಯಲ್ಲಿ ವಿಪರೀತ ಅಮಲೇರಿದೆ. ಅವಳು ಮೈ ಸವರುತ್ತಾ ಚುಂಬಿಸುತ್ತಿದ್ದಾಳೆ. ಒಂದು... ಎರಡು... ಮೂರು! ಎಲ್ಲಾ ಮುಗಿಯಿತು!

●●●

ಬೆಳಗಿನ ಎಂಟು ಗಂಟೆಯಾದರೂ ಸಹ ಅವನಿಗೆ ಎಚ್ಚರ ಆಗಿರಲಿಲ್ಲ.

ಗಾಳಿ ಜೋರಾಗಿ ಬೀಸಿತು. ಅವನು ಎಚ್ಚರಗೊಂಡು ಕಣ್ಣುಗಳನ್ನು ತೆರೆದನು. ಫ್ಯಾನ್ ತಿರುಗುತ್ತಿದೆ. ಲೈಟ್ ಬೆಳಕು ಪ್ರಜ್ವಲಿಸಿದೆ. ಅವನಿಗೆ ಹಿತವಾದ ಬಲು ಮೃದುವಾದ ಸ್ಪರ್ಶದ ಅನುಭವ ಆಗುತ್ತಿದೆ.

ಅವಳು ಅವನ ಮೇಲೆ ಮಲಗಿಕೊಂಡು ಮುಖದ ತುಂಬಾ ಮುತ್ತಿಡುತ್ತಿದ್ದಾಳೆ. ಅವಳ ಬಲು ಮೃದುವಾದ ಕೋಮಲವಾದ ಕೈ, ಅವನ ಅಂಗ, ಅಂಗಗಳನ್ನು ಸ್ಪರ್ಶಿಸುತ್ತಿದೆ.

ಪ್ರಾಯದ ಯುವಕ ಕೆರಳಿದನು.

ಅವಳನ್ನು ತನ್ನ ಮೇಲೆ ಎಳೆದು ಬಿಗಿಯಾಗಿ ತಬ್ಬಿಕೊಂಡು ಉರುಳಾಡಿದನು. ಅವಳ ಕೆನ್ನೆ ಕಚ್ಚಿ, ತುಟಿಗಳನ್ನು ತುಂಬಾ ಗಾಢವಾಗಿ ಚುಂಬಿಸಿದನು. ಆ ಕ್ಷಣಗಳಲ್ಲಿ ಅವನು ಅವಳಲ್ಲಿ ಪೂರ್ಣವಾಗಿ ಲೀನವಾಗಿ ವಿಜೃಂಭಿಸಿದನು. ಅವಳ ಸುಖದಿಂದ ಚೀತ್ಕಾರ ಮಾಡಿದಳು. ಅವನನ್ನು ಹಿಂಡುತ್ತಾ ಬಲು ಉದ್ರೇಕ ಉಂಟು ಮಾಡಿದಳು.

ಅವರಿಬ್ಬರೂ ತೃಪ್ತರಾಗಿದ್ದಾರೆ.

ಅವನು ಅವಳ ಬೆತ್ತಲೆ ಮೈ ಸವರುತ್ತಾ ''ಶ್ವೇತ... ನೀನು ಲವ್ ಗೇಮ್‌ನಲ್ಲಿ ಗೆದ್ದಿದ್ದೀಯ. ನಾನು ಇನ್ನು ಮುಂದೆ ಯಾವತ್ತಿದ್ದರೂ ಸಹ ನಿನ್ನವನು'' ಎಂದು ಅವಳ ತುಟಿಗಳನ್ನು ಮುದ್ದಾಡುತ್ತಾ ''ಇದು ಯಾರ ಮನೆ'' ಎಂದು ಕೇಳಿದನು.

ಅವಳು ನಗುತ್ತಾ ''ಇದು ನನ್ನ ತಂದೆ ಕಟ್ಟಿಸಿರೋ ಔಟ್ ಹೌಸ್. ಇಲ್ಲಿಗೆ ಬೇರೆ ಯಾರೂ ಬರೋಲ್ಲ'' ಎಂದಳು.

''ನಾವಿಬ್ಬರು ಇಲ್ಲಿಗೆ ಬಂದಿದ್ದು ಹೇಗೆ?''

''ನಾನು ಬ್ಯಾಲೆನ್ಸ್ ಕಳೆದುಕೊಂಡು ನೆಲದ ಮೇಲೆ ಬಿದ್ದಾಗ ನೀನು ತಬ್ಬಿಕೊಂಡೆ. ಆ ಕ್ಷಣಗಳಲ್ಲಿ ನೀನು ಕಾಮ ಉನ್ಮತ್ತನಾಗಿದ್ದೆ. ನಿನಗೆ ನಿರಾಸೆ ಮಾಡಬಾರದು ಅಂತ ನಾನೇ ನಿನ್ನನ್ನು ಕರೆದುಕೊಂಡು ಈ ಗೆಸ್ಟ್‌ಹೌಸ್‌ಗೆ ಬಂದೆ. ರಾತ್ರಿ ಪೂರ್ತಿ ನೀನು ನನ್ನನ್ನು...'' ಎಂದು ನಗಾಡಿದಳು.

ಅವನು ಅವಳ ಬೆತ್ತಲೆ ಮೈ ಸವರುತ್ತಾ ''ನನಗೆ ಆ ಸುಖದ ಅನುಭವ ಆಗಿದೆ. ಇನ್ನು ಮುಂದೆ ಆಗಾಗ ಈ ಸುಖ ನೀಡಬೇಕು'' ಎಂದು ಹೇಳಿದನು.

ಅವಳು ವ್ಯಂಗ್ಯವಾಗಿ ನಗಾಡಿದಳು.

●●●

ಗೆಳತಿಯರ ಜೊತೆ ಇದ್ದಂತ ಶ್ವೇತ ಸ್ವಲ್ಪ ಅಹಂಕಾರ, ಅಹಂಭಾವದಿಂದ ''ಈಗ ಚಂದನ್... ಬಾಗಡೆ ಇಲ್ಲಿಗೆ ಬರ್ತಾನೆ. ಅವನು ಯಾವ ರೀತಿ ಬರ್ತಾನೆ ಗೊತ್ತಾ'' ಎಂದು ಹೇಳಿ ನಗಾಡಿದಳು.

''ಅವಳು ಫೋನ್ ಮಾಡಿದಳು.

''ನಿನ್ನ ಫೋನ್ ಕಾಲ್‌ಗಾಗಿ ಕಾಯುತ್ತಿದ್ದೆ. ನೀನು ಈಗಲೇ ರೋಸ್ ಗಾರ್ಡನ್ ಹತ್ತಿರ ಬಾ. ನನಗೊಂದು ಆಸೆ ಇದೆ.''

''ಹೇಳು ಶ್ವೇತ.''

''ನೀನು ಷರ್ಟ್, ಪ್ಯಾಂಟ್, ಚಪ್ಪಲಿ ತೆಗೆದು ಬರೀ ಚಡ್ಡಿಯಲ್ಲಿ ನಿಂತಿರಬೇಕು.''

ಅವನು ಗಾಬರಿಯಿಂದ ''ಶ್ವೇತ ಇದು ಪಬ್ಲಿಕ್ ರೋಡ್.''

''ನನಗಾಗಿ ಪ್ಲೀಸ್...''

ಕಾರಲ್ಲಿ ಗೆಳತಿಯರನ್ನು ಕರೆದುಕೊಂಡು ರೋಸ್ ಗಾರ್ಡನ್‌ಗೆ ಬಂದಳು.

ಅಲ್ಲಿ ಕಂಡಿದ್ದೇನು? ಅವಳು ಹೇಳಿದಂತೆ ಎಂಭತ್ತು ಭಾಗ ಬೆತ್ತಲಾಗಿ ನಿಂತಿದ್ದಾನೆ.

ಗೆಳತಿಯರು ಮರೆಯಲ್ಲಿದ್ದಾರೆ. ಶ್ವೇತ ''ಈಗ ಡ್ಯಾನ್ಸ್ ಮಾಡಿಸುತ್ತೀನಿ'' ಎಂದು ಗೆಳತಿಯರಿಗೆ ಫೋನ್ ಮಾಡಿ ಹೇಳಿದಳು.

ಚಂದನ್ ಬಾಗಡೆ ಕುಣಿಯುತ್ತಿದ್ದಾಳೆ.

ಗೆಳತಿಯರು ಅವನ ಕಡೆ ಅನುಕಂಪದಿಂದ ನೋಡಿದರು. ಶಿಸ್ತು ಮತ್ತು ಆದರ್ಶ ವಿದ್ಯಾರ್ಥಿಯನ್ನ ಶ್ವೇತ ಕೈಗೊಂಬೆ ಮಾಡಿಕೊಂಡಿದ್ದಾಳೆ. ಇವಳ ಹುಚ್ಚು ಹಿಡಿದರೆ ಓದಿಗೆ ಗುಡ್‌ಬೈ ಹೇಳಬೇಕಾಗುತ್ತದೆ.

ಅವನು ಎಷ್ಟೇ ಬೇಡಿಕೊಂಡರೂ ಸಹ ಸುಖದ ಮಿಲನಕ್ಕೆ ಅವಕಾಶ ಕೊಡಲಿಲ್ಲ.

ಗೋಗರೆದು ಗೋಳಾಡಿದನು. ಕೆನ್ನೆಗೆ ಹೊಡೆದು ಅವಮಾನ ಮಾಡಿದಳು. ಒಂದು ತಿಂಗಳು ಬೇಡಿಕೊಂಡನು. ಅಂತಿಮವಾಗಿ ಏನಾಯಿತು?

ಗಂಗೋತ್ರಿಯ ಹಿಂಭಾಗದಲ್ಲಿರುವ ಮರದಲ್ಲಿ ಚಂದನ್ ಬಾಗಡೆಯ ಶವ ನೇತಾಡುತ್ತಿತ್ತು. ಅವಳು ವಿಲಕ್ಷಣವಾಗಿ ನಗುತ್ತಿದ್ದಳೇ ವಿನಹ, ಅವನ ಮನಸ್ಸು ಕೆಡಿಸಲು ಶೀಲ ಕಳೆಉದಕೊಂಡಿರುವ ರಹಸ್ಯ ಬಹಿರಂಗ ಪಡಿಸಲಿಲ್ಲ. ☯

### ಘಟಪ್ರಭಾ : ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಮತ್ತು ಸಿಬ್ಬಂದಿಗಳ ಮಿಂಚಿನ ಕಾರ್ಯಾಚರಣೆ...


# ಮೂವರು ಕರೆಂಟ್ ಮೋಟಾರ್, ಕೇಬಲ್ ವೈರ್‌ಗಳ ಕಳ್ಳರ ಬಂಧನ

**ಗ್ರಾಮೀಣ ಪರಿಸರದಲ್ಲಿನ ರೈತರಿಗೆ ತೀವ್ರ ತಲೆನೋವಾಗಿ ಪರಿಣಿಸಿದ ಮೂವರು ಐನಾತಿ ಕಳ್ಳರು ಕೇಬಲ್ ವೈರ್ ಮತ್ತು ಕರೆಂಟ್ ಮೋಟಾರ್‌ಗಳನ್ನು ಸದ್ದಿಲ್ಲದೇ ಕಳ್ಳತನ ಮಾಡಿಕೊಂಡು ಪರಾರಿ ಆಗುತ್ತಿದ್ದರು. ಕೇಬಲ್ ವೈರ್ ಮತ್ತು ಕರೆಂಟ್ ಮೋಟಾರ್ ಕಳ್ಳತನ ಪ್ರಕರಣಗಳನ್ನು ತುಂಬಾ ಗಂಭೀರವಾಗಿ ಪರಿಗಣಿಸಿದ್ದ ಡೈನಾಮಿಕ್ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಹೆಚ್.ಕೆ. ನರಳೆ, ಎಂ.ಎಸ್. ವನಹಳ್ಳಿ ಮತ್ತು ಸಿಬ್ಬಂದಿಗಳು ಸೇರಿಕೊಂಡು ಖಚಿತ ಮಾಹಿತಿ ಆಧರಿಸಿ ರೈತರಿಗೆ ತಲೆನೋವಾಗಿದ್ದ ಮೂವರು ಕಳ್ಳರನ್ನು ಬಂಧಿಸಿ ಅವರಿಂದ ಕಳ್ಳತನ ಮಾಡಿದ್ದ 3 ಲಕ್ಷ ರೂ.ಗಳ ಮೌಲ್ಯದ ಕರೆಂಟ್ ಮೋಟಾರ್ ಹಾಗೂ ಕೇಬಲ್ ವೈರ್, ಒಂದು ಮೋಟಾರ್ ಸೈಕಲ್ ವಶಪಡಿಸಿಕೊಂಡಿರುವ ಪ್ರಕರಣ ಬೆಳಗಾವಿ ಜಿಲ್ಲೆಯ ಘಟಪ್ರಭಾ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**




ಮೂವರು ಕರೆಂಟ್ ಮೋಟಾರ್, ಕೇಬಲ್ ಕಳ್ಳರಿಂದ 3 ಲಕ್ಷ ರೂ. ಮೌಲ್ಯದ ಸ್ವತ್ತು ವಶಪಡಿಸಿಕೊಂಡ ಘಟಪ್ರಭಾ ಪೊಲೀಸರು


ಕಳೆದ ತಿಂಗಳ ಹಿಂದಷ್ಟೇ ಇಬ್ಬರು ಐನಾತಿ ಮನೆಗಳ್ಳರನ್ನು ಬಂಧಿಸಿ ಅವರಿಂದ 3 ಲಕ್ಷ ರೂ.ಗಳ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ವಶಪಡಿಸಿಕೊಂಡ ಬೆನ್ನಲ್ಲಿ ಇದೀಗ ಗ್ರಾಮೀಣ ಪರಿಸರದ ರೈತಾಪಿ ಜನರಿಗೆ ತೀವ್ರ ತಲೆನೋವಾಗಿದ್ದ ಕರೆಂಟ್ ಮೋಟಾರ್ ಮತ್ತು ಕೇಬಲ್ ಕಳ್ಳರನ್ನು ಹೆಡೆಮುರಿ ಕಟ್ಟುವಲ್ಲಿ ಘಟಪ್ರಭಾದ ಧಾಡಸಿ ಮತ್ತು ಚತುರ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ನೇತೃತ್ವದಲ್ಲಿ ಪಿಎಸ್‌ಐ (ಕಾ.ಸು) ಹೆಚ್.ಕೆ. ನರಳೆ, ಪಿಎಸ್‌ಐ (ಕ್ರೈಂ) ಎಂ.ಎಸ್. ವನಹಳ್ಳಿ ಮತ್ತು ಸಿಬ್ಬಂದಿಗಳು ಮಿಂಚಿನ ಕಾರ್ಯಾಚರಣೆ ನಡೆಸಿ ಮೂವರು ಕಳ್ಳರನ್ನು ಬಂಧಿಸಿ ಅವರಿಂದ 3 ಲಕ್ಷ ರೂ.ಗಳ ಕಳುವಿನ ಸ್ವತ್ತು ವಶಪಡಿಸಿಕೊಂಡಿದ್ದಾರೆ.



ಡಿವೈಎಸ್ಪಿ ಡಿ.ಹೆಚ್. ಮುಲ್ಲಾ



ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ



ಪಿಎಸ್‌ಐ (ಕಾ.ಸು) ಹೆಚ್.ಕೆ. ನರಳೆ

**ಕರೆಂಟ್ ಮೋಟಾರ್... ಕೇಬಲ್ ಕಳ್ಳತನಗಳು...**

ನಮ್ಮ ನಾಡಿನ ಬೆನ್ನೆಲುಬು ಎಂದೇ ಹೆಸರಾದ ರೈತರು ತಮ್ಮ ಜಮೀನುಗಳಿಗೆ ನೀರುಣಿಸಲು ಕರೆಂಟ್ ಮೋಟಾರ್ ಮತ್ತು ಇದಕ್ಕೆ ಕೇಬಲ್ ಬಳಸುತ್ತಾರೆ. ಜಮೀನಿನಲ್ಲಿ ಬಾವಿಯ ದಂಡೆಗೆ ಕರೆಂಟ್ ಮೋಟಾರ್ ಹಾಗೆಯೇ ಬಿಟ್ಟು ತಮ್ಮ ಮನೆಗಳಿಗೆ ಹೋಗುವುದು ವಾಡಿಕೆ. ಇತ್ತೀಚಿಗೆ ಘಟಪ್ರಭಾ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವಂತಹ ಕಲ್ಲೋಳಿ, ರಾಜಾಪೂರ ಮತ್ತು ಬೀರನಗಡ್ಡಿ ಊರಿನ ಪರಿಸರದಲ್ಲಿಯ ರೈತರ ಜಮೀನಿನಲ್ಲಿಯ ಕರೆಂಟ್ ಮೋಟಾರ್ ಮತ್ತು ಕೇಬಲ್ ವೈಲ್ ಇದ್ದಕ್ಕಿದ್ದಂತೆ ಕಳ್ಳತನವಾಗಿದ್ದವು. ಇದರ ಕುರಿತಾಗಿ ಘಟಪ್ರಭಾ ಪೊಲೀಸ್ ಠಾಣೆಯಲ್ಲಿ ದೂರುಗಳು ಕೂಡಾ ದಾಖಲಾಗಿದ್ದವು. ಆದರೂ ಕೂಡಾ ಕಳ್ಳರ ಪತ್ತೆ ಆಗಿರಲಿಲ್ಲ. ಹೀಗಾಗಿ ರೈತರು ತಮ್ಮ ಜಮೀನಿನಲ್ಲಿರುವ ಕೇಬಲ್ ವೈರ್ ಮತ್ತು ಕರೆಂಟ್ ಮೋಟಾರ್‌ಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯತೊಡಗಿದ್ದರು.

**ವಿಶೇಷ ತನಿಖಾ ತಂಡದ ಕಾರ್ಯಾಚರಣೆ...**

ಕಳೆದ ಒಂದು ತಿಂಗಳ ಹಿಂದಷ್ಟೇ ಘಟಪ್ರಭಾ ಪೊಲೀಸ್ ಠಾಣೆಗೆ ಆಗಮಿಸಿರುವ ಪೊಲೀಸ್ ಇನ್ಸ್‌ಪೆಕ್ಟರ್ ಆಳೆದು ತೂಗಿ ತಮ್ಮ ಪೊಲೀಸ್ ಠಾಣೆಯಲ್ಲಿ ಚತುರ ಹಾಗೂ ಧಾಡಸಿ ಸಿಬ್ಬಂದಿಗಳನ್ನೊಳಗೊಂಡ ಒಂದು ತನಿಖಾ ತಂಡವನ್ನು ರಚಿಸಿದ್ದರು. ತಂಡದಲ್ಲಿ ಪಿಎಸ್‌ಐಗಳಾದ ಹೆಚ್.ಕೆ. ನರಳೆ, ಎಂ.ಎಸ್. ವನಹಳ್ಳಿ, ಎಎಸ್‌ಐ ಪಿ.ಎಂ. ಪಾಟೀಲ,

**ಬೆಳಗಾವಿ**
✍ ಮನ್ನಾಪೂರ

ಸಿಬ್ಬಂದಿಗಳಾದ ಆರ್.ಕೆ. ಹೊಳ್ಕರ, ರಾಮಕೃಷ್ಣ ಗಿಡಪ್ಪ ಗೋಳ, ಬಿ.ಎಂ. ತಳವಾರ, ರಾಜು ಧುಮಾಳೆ, ಬಿ.ಎಸ್. ನಾಯಿಕ ಸೇರಿದ್ದರು. ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ತಮ್ಮ ನೇತೃತ್ವದ ತನಿಖಾ ತಂಡಕ್ಕೆ ಕೆಲವೊಂದು ಸೂಕ್ತ ನಿರ್ದೇಶನಗಳನ್ನು ನೀಡಿ ಕರೆಂಟ್ ಮೋಟಾರ್, ಕೇಬಲ್ ವೈರ್ ಕಳ್ಳರ ಪತ್ತೆಗೆ 'ಗೋ ಅಹೆಡ್' ಎಂದರು.

**ಮೂವರು ಕಳ್ಳರ ಬಂಧನ...**

ರೈತರ ಕರೆಂಟ್ ಮೋಟಾರ್ ಮತ್ತು ಕೇಬಲ್ ವೈರ್ ಕಳ್ಳತನ ಪ್ರಕರಣ ಪತ್ತೆ ಮಾಡುವಲ್ಲಿ ಗೋಕಾಕ ಪೊಲೀಸ್ ಉಪವಿಭಾಗದ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಹೆಚ್ಚುವರಿ ಎಸ್ಪಿಗಳಾದ ಆರ್.ಬಿ. ಬಸರಗಿ, ಶ್ರುತಿ ಎನ್.ಎಸ್., ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಂದ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಹೆಚ್.ಕೆ. ನರಳೆ, ಎಂ.ಎಸ್. ವನಹಳ್ಳಿ ಸೂಕ್ಷ್ಮ ನಿರ್ದೇಶನಗಳನ್ನು ಪಡೆದುಕೊಂಡರು. ಅಂದುಕೊಂಡಂತೆ ವಿಶೇಷ ತನಿಖಾ ತಂಡದ ಸದಸ್ಯರು ನಿಖರವಾದ ಮಾಹಿತಿ ಆಧರಿಸಿ ಮೂವರು ಮಹಾ ಐನಾತಿ ಕಳ್ಳರನ್ನು ಪತ್ತೆಹಚ್ಚಿ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ಅವರೆಲ್ಲ ಕಾಗಕ್ಕ... ಗುಬ್ಬಕ್ಕನ ಕಥೆ ಹೇಳತೊಡಗಿದ್ದರು. ಕೊನೆಗೆ ಪೊಲೀಸ್ ಭಾಷೆ ಪ್ರಯೋಗವಾದ ಕೂಡಲೇ ತಮ್ಮ ಕಳ್ಳತನವನ್ನು ಕಕ್ಕಿದರು.

**3 ಲಕ್ಷ ರೂ.ಗಳ ಸ್ವತ್ತು ವಶಕ್ಕೆ...**

ಬಂಧಿತ ಮೂರು ಜನ ಐನಾತಿ ಕಳ್ಳರಿಂದ ಸುಮಾರು 3 ಲಕ್ಷ ರೂ.ಗಳ ಮೌಲ್ಯದ ಕರೆಂಟ್ ಮೋಟಾರ್, ಕೇಬಲ್ ವೈರ್ ಹಾಗೂ ಒಂದು ಮೋಟಾರ್ ಸೈಕಲ್ ವಶಪಡಿಸಿಕೊಂಡು ನ್ಯಾಯಾಂಗದ ವಶಕ್ಕೆ ಒಪ್ಪಿಸಿದ್ದಾರೆ. ಕಲ್ಲೋಳಿ, ರಾಜಾಪೂರ, ಬೀರನಗಡ್ಡಿ ಗ್ರಾಮದ ರೈತರು ಘಟಪ್ರಭಾ ಪೊಲೀಸರ ಕಾರ್ಯಾಚರಣೆಗೆ ಭೇಷ್ ಎನ್ನುತ್ತಿದ್ದಾರೆ.

**ಶ್ಲಾಘನೆ...**

ರೈತರಿಗೆ ತಲೆನೋವಾಗಿ ಪರಿಣಮಿಸಿದ ಮೂವರು ಐನಾತಿ ಕಳ್ಳರನ್ನು ಬಂಧಿಸಿದ ಘಟಪ್ರಭಾ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಹೆಚ್.ಕೆ. ನರಳೆ, ಎಂ.ಎಸ್. ವನಹಳ್ಳಿ, ಎಎಸ್‌ಐ ಪಿ.ಎಂ. ಪಾಟೀಲ, ಸಿಬ್ಬಂದಿಗಳಾದ ಆರ್.ಕೆ. ಹೊಳ್ಕರ್, ಗಿಡ್ಡಪ್ಪಗೋಳ, ಬಿ.ಎಂ. ತಳವಾರ, ರಾಜು ಧುಮಾಳೆ, ಬಿ.ಎಸ್. ನಾಯಿಕ ಅವರ ಕಾರ್ಯಾಚರಣೆಯನ್ನು ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಹೆಚ್ಚುವರಿ ಎಸ್ಪಿಗಳಾದ ಆರ್.ಬಿ. ಬಸರಗಿ, ಶ್ರುತಿ ಎನ್.ಎಸ್., ಎಸ್ಪಿ ಡಾ. ಭೀಮಾಶಂಕರ ಗುಳೇದ ಹಾಗೂ ಸಾರ್ವಜನಿಕರು ಶ್ಲಾಘಿಸಿದ್ದಾರೆ.



ಕಳುವಾಗಿದ್ದ ಕರೆಂಟ್ ಮೋಟಾರ್ ಮತ್ತು ಕೇಬಲ್ ವೈರ್‌ಗಳು

# ದಾವಣಗೆರೆಯ ಪೊಲೀಸ್ ನ್ಯೂಸ್ ವರದಿಗಾರ ವೀರಪ್ಪ ಎಂ. ಬಾವಿ ನಿಧನ



ಲಯನ್ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು 1982ರಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಕ್ರೈಂ ವಾರಪತ್ರಿಕೆ 'ಪೊಲೀಸ್ ನ್ಯೂಸ್' ಪ್ರಕಟಣೆ ಆರಂಭಿಸಿದಾಗ, 1990ರಲ್ಲಿ ಪತ್ರಿಕೆಗೆ ವರದಿಗಾರರಾಗಿ ಸೇರಿದವರು ಶ್ರೀ ವೀರಪ್ಪ ಎಂ. ಬಾವಿ. ಇವರು ಅಂದಿನಿಂದ ಇಂದಿನವರೆವಿಗೂ ಸುಮಾರು 34 ವರ್ಷ ಕಾಲ ಅಹರ್ನಿಶಿ ಕರ್ತವ್ಯ ನಿಭಾಯಿಸಿದ್ದರು. ಇವರು ದಿನಾಂಕ 3-11-2024ರ ಭಾನುವಾರದಂದು ದೈವಾಧೀನರಾಗಿರುತ್ತಾರೆ. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶ್ರೀಯುತ ವೀರಪ್ಪ ಎಂ. ಬಾವಿ ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಪತ್ನಿ ಮತ್ತು ಮಕ್ಕಳಿಗೆ ಭಗವಂತ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಪೊಲೀಸ್ ನ್ಯೂಸ್ ಪತ್ರಿಕಾ ಬಳಗ

# ಬಡವನ ಶವ ಸಂಸ್ಕಾರ ಮಾಡಿ ಮಾನವೀಯತೆ ಮೆರೆದ ಪೊಲೀಸರು



ಮೃತ ಅಮರನಾಥನ ಶವ

ರಸ್ತೆ ಅಪಘಾತವೊಂದರಲ್ಲಿ ಮೃತಪಟ್ಟಿದ್ದ ಬಡ ಕುಟುಂಬದ ವ್ಯಕ್ತಿಯ ಅಂತಿಮ ಸಂಸ್ಕಾರ ಮಾಡಲು ಅವರ ಮನೆಯವರು ಅಶಕ್ತರಾದ ಕಾರಣ ಮೃತನ ಅಂತ್ಯ ಸಂಸ್ಕಾರವನ್ನು ತಮ್ಮ ಸ್ವಂತ ಖರ್ಚಿನಲ್ಲಿ ನೆರವೇರಿಸುವ ಮೂಲಕ ಕೋಲಾರ ಗ್ರಾಮಾಂತರ ಠಾಣೆ ಪೊಲೀಸರು ಮಾನವೀಯ ಕಾರ್ಯ ಮಾಡಿದ್ದಾರೆ.



ಎಸ್ಪಿ ನಿಖಿಲ್



ಪಿಐ ಕೆ. ಕಾಂತರಾಜ್

### ಪೈಂಟರ್ ಅಮರ್‌ನಾಥ್‌ಗೆ ಅಪಘಾತ

ಕೋಲಾರದಿಂದ ಮುಳಬಾಗಿಲು ಕಡೆಗೆ ಹೋಗುವ ಎನ್‌ಹೆಚ್-75 ರಸ್ತೆಯಲ್ಲಿ ಕೆಂದಟ್ಟಿ ಸಮೀಪ ರಸ್ತೆಬದಿಯಲ್ಲಿ ಅಕ್ಟೋಬರ್ 30ರಂದು ರಾತ್ರಿ 7.30ರ ಸಮಯದಲ್ಲಿ ನಡೆದು ಹೋಗುತ್ತಿದ್ದ ಅಪರಿಚಿತ ವ್ಯಕ್ತಿಗೆ ಬೆಂಗಳೂರು ಕಡೆಯಿಂದ ಕೋಲಾರದ ಕಡೆ ಹೋಗಲು ಬಂದ ಯಾವುದೋ ಒಂದು ಕಾರನ್ನು ಅದರ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಡಿಕ್ಕಿ ಹೊಡೆಸಿ ಅಪಘಾತ ಮಾಡಿ ಕಾರನ್ನು ಸ್ಥಳದಲ್ಲಿ ನಿಲ್ಲಿಸದೇ ಹೋಗಿರುತ್ತಾನೆ. ಈ ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿಯನ್ನು ಸ್ಥಳೀಯರು ಕೋಲಾರ ನಗರದ ಶ್ರೀ ನರಸಿಂಹರಾಜ ಆಸ್ಪತ್ರೆಗೆ ದಾಖಲು ಮಾಡಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾನೆ.

ಕೋಲಾರ ಸಂಚಾರಿ ಪೊಲೀಸ್ ಠಾಣೆಯ ಮೊ.ಸಂ. 87/2024 ಕಲಂ 281, 106(1) ಬಿಎನ್‌ಎಸ್ ರೆಡ್‌ವಿತ್ 187 ಐಎಂವಿ ಆಕ್ಟ್‌ನಂತೆ ಪ್ರಕರಣವನ್ನು ದಾಖಲಿಸಿಕೊಂಡು ಮೃತಪಟ್ಟಿರುವ ಆಸಾಮಿ, ಅನಾಮದೇಯ ವ್ಯಕ್ತಿಯಾಗಿದ್ದು, ಈ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಪತ್ತೆ ಮಾಡಲು ಈತನ ಫೋಟೋವನ್ನು ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರಚಾರ ಪಡಿಸಿದರು. ಮೃತನ ವಾರಸುದಾರನನ್ನು ಪತ್ತೆ ಮಾಡಲಾಗಿ ಉತ್ತರಪ್ರದೇಶದ ವಾಸಿ ರಾಮ್‌ಜೀರವರ ಮಗ ಅಮರ್‌ನಾಥ್ ಕೆಲವು ತಿಂಗಳುಗಳ ಹಿಂದೆ ಕೆಲಸ ಹುಡುಕಿಕೊಂಡು ಕೋಲಾರ ತಾಲ್ಲೂಕಿನ ನರಸಾಪುರ ಹಾಗೂ ವೇಮಗಲ್ ಭಾಗದಲ್ಲಿರುವ ಕೈಗಾರಿಕಾ ಪ್ರದೇಶಕ್ಕೆ ಬಂದಿದ್ದು, ಕೆಲಸಕ್ಕಾಗಿ ಅಲೆಯುತ್ತಿದ್ದಾಗ ಪೈಂಟಿಂಗ್ ಕೆಲಸ ಮಾಡುವವರು ಈತನನ್ನು ಕೆಲಸಕ್ಕೆ ಕರೆದಿದ್ದು ಒಂದು ತಿಂಗಳಿಂದ ಇವರ ಜೊತೆ ಕೆಲಸ ಮಾಡಿಕೊಂಡು ಇದ್ದನು. ಕಳೆದ ಒಂದು ವಾರದಿಂದ ಕೋಲಾರ ತಾಲ್ಲೂಕಿನ ಕೆಂದಟ್ಟಿ ಗ್ರಾಮದಲ್ಲಿ ಪೈಂಟಿಂಗ್ ಕೆಲಸ ಮಾಡಿಕೊಂಡು ಇದ್ದನು. ಕೆಲಸ ಮುಗಿಸಿಕೊಂಡು ರಸ್ತೆಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಈ ಘಟನೆ ನಡೆದಿದೆ.





ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆ





ಶವ ಸಂಸ್ಕಾರ ಮಾಡುತ್ತಿರುವುದು

### ಶವಸಂಸ್ಕಾರ ಮಾಡಿದ ಪೊಲೀಸರು

ಮೃತ ಅಮರನಾಥನ ಶವದ ಮಹಜರ್ ನಡೆಸಿದ ಮೇಲೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿ ನಂತರ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಂತರಿಸಲು ಪೊಲೀಸರು ಮುಂದಾದರು. ಆದರೆ ಕುಟುಂಬಸ್ಥರು ಮೃತದೇಹವನ್ನು ಉತ್ತರ ಪ್ರದೇಶಕ್ಕೆ ಸಾಗಿಸುವಷ್ಟು ಸ್ಥಿತಿವಂತರಾಗಿರಲಿಲ್ಲ. ಜೊತೆಗೆ ಮೃತನ ಸಂಬಂಧಿಕರು ಆರ್ಥಿಕವಾಗಿ ದುರ್ಬಲರಾಗಿದ್ದು, ಮೃತದೇಹವನ್ನು ಊರಿಗೆ ಕೊಂಡೊಯ್ಯಲು ನಮ್ಮಲ್ಲಿ ಶಕ್ತಿ ಇಲ್ಲ ಎಂದು ಕುಟುಂಬಸ್ಥರು ನೊಂದುಕೊಂಡು ಕಣ್ಣೀರಿಟ್ಟರು. ಈ ವಿಷಯವನ್ನು ತಿಳಿದುಕೊಂಡ ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯ ಪಿಐ ಕಾಂತ್‌ರಾಜ್ ರವರು ನಮಗೆ ಯಾಕೆ ಈ ಗೊಡವೆ ಎನ್ನದೆ ಈ ವಿಚಾರವನ್ನು ಎಸ್ಪಿ ಬಿ. ನಿಖಿಲ್‌ರವರಿಗೆ ತಿಳಿಸಿ ಅವರ ಅಪ್ಪಣೆ ಮೇರೆಗೆ ಪಿಐ ಕಾಂತ್‌ರಾಜ್ ಮತ್ತು ಸಿಬ್ಬಂದಿಯವರಾದ ಮಂಜುನಾಥ್, ಕುಮಾರ್, ಶಿವರಾಜಾಚಾರಿರವರು ಮಾನವೀಯತೆ ದೃಷ್ಟಿಯಿಂದ ಮೃತನ ಮನೆಯವರ ಕೋರಿಕೆಯಂತೆ ಕೋಲಾರ ನಗರದ ಗಲ್‌ಪೇಟೆ ಪೊಲೀಸ್ ಠಾಣೆ ಹಿಂಭಾಗ ಇರುವ ಸ್ಮಶಾನದಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಮೃತದೇಹದ ಅಂತಿಮ ವಿಧಿವಿಧಾನ ಕಾರ್ಯವನ್ನು ನೆರವೇರಿಸಿರುತ್ತಾರೆ. ಈ ಮೂಲಕ ಪೊಲೀಸರು ಮಾನವೀಯಂತೆ ಮೆರೆದು ಮೃತನ ಸಂಬಂಧಿಕರ ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಪೊಲೀಸರ ಈ ಕಾರ್ಯಕ್ಕೆ ಹಿರಿಯ ಅಧಿಕಾರಿಗಳು ಸಹ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

-ಕೋ.ನಾ. ಪ್ರಭಾಕರ್

---

6 ☞

ಮಾವನ ಪರಶುರಾಮನಿಗೆ ನಾನು ಕೆಲಸಕ್ಕೆ ಅಂತಾ ಹುಬ್ಬಳ್ಳಿ-ಧಾರವಾಡದ ಕಡೆ ಹೋಗುನಿದಿದೆ ಸ್ವಲ್ಪ ದಿನಗಳ ಮಟ್ಟಿಗೆ ಕಾವೇರಿ ಹಾಗೂ ಮಗು ಇಲ್ಲೇ ಇರಲಿ ಅಂತಾ ಸುಮಾರು ನಾಲ್ಕು-ಐದು ವರ್ಷಗಳ ಹಿಂದೆ ಬಿಟ್ಟು ಹೋದನು. ಆಗಾಗ ದೂರದಾಣಿ ಮುಖಾಂತರ ಹೆಂಡತಿ, ಮಗು, ಯೋಗಕ್ಷೇಮ ವಿಚಾರಿಸುವುದು, ಬಿಡುವಿದ್ದಾಗ ಬಂದು ಹೋಗುವುದು ಅಂತಾ ಮಾಡುತ್ತಿದ್ದನು. ಕಾವೇರಿ ಇದರ ಮಧ್ಯೆ ಎರಡನೇ ಮಗುವಿಗೆ ಜನ್ಮ ನೀಡಿದ್ದು ಇದು ಸುಮಾರು ವರ್ಷಗಳ ಕಾಲ ಸಾಗುತ್ತ ಬಂದಿತು.



ಕೊಲೆಯಾದ ಕಾವೇರಿಯ ಬಾಡಿಗೆ ಮನೆಯ ಮುಂದೆ ಪೊಲೀಸರು

### ಹೆಂಡತಿ ತವರಿಗೆ ಬಂದು ಠಿಕಾಣಿ ಹೂಡಿದ ಪುನಿತ್

ಸುಮಾರು ಮೂರು-ನಾಲ್ಕು ವರ್ಷಗಳಿಂದ ಹೆಂಡತಿ ಕಾವೇರಿಯನ್ನು ಆಕೆಯ ತವರಿನಲ್ಲಿಯೇ ಬಿಟ್ಟು ಹೋಗಿದ್ದ ಪುನೀತ ಮರಳಿ ಜಮಖಂಡಿಗೆ ಬಂದು ತನ್ನ ಮಾವನಾದ ಪರಶುರಾಮನಿಗೆ ಇನ್ನು ಮುಂದೆ ತಾನು ಊರೂರು ಅಂತ ಕೆಲಸಕ್ಕೆ ತಿರುಗಾಡದೇ ಇಲ್ಲಿಯೇ ಇದ್ದು ಹೆಂಡತಿಯೊಟ್ಟಿಗೆ ಮಕ್ಕಳನ್ನು ನೋಡಿಕೊಂಡು ಕೆಲಸಕ್ಕೆ ಹೋಗುತ್ತೇನೆ ಅಂತ ಮಾವನ ಕಾಲಿಗೆ ಬಿದ್ದು ಪುನೀತ ಒಂದು ತಿಂಗಳ ಹಿಂದೆ ಬಂದು ಜಮಖಂಡಿಯಲ್ಲಿಯೇ ತನ್ನ ಮಾವ ಪರಶುರಾಮನ ಸಹಾಯದಿಂದ ಅವರ ಮನೆಯ ಸ್ವಲ್ಪ ದೂರದಲ್ಲಿ ಒಂದು ಬಾಡಿಗೆ ಮನೆಯ ಮಾಡಿಕೊಂಡು ತನ್ನದೇ ಆದ ಒಂದು ಸಂಸಾರವನ್ನು ಹೂಡಿದ. ಆದರೆ ಪುನೀತನ ಎರಡೂ ಮಕ್ಕಳು ಅಜ್ಜಿ-ತಾತನ ಬಳಿ ಇದ್ದವು. ಇದು ಸುಮಾರು ದಿನಗಳವರೆಗೆ ಸಂಸಾರವನ್ನು ಮಾಡುತ್ತ ಬಂದನು.

### ಸಿಟ್ಟಿಗೆದ್ದು ಹೆಂಡತಿಯನ್ನು ಬಡಿದು ಕೊಂದ!

ಪುನೀತನು ತಾನು ಬಂದು ಒಂದು ತಿಂಗಳೂ ಸಹ ಆಗಿರಲಿಲ್ಲ, ಮತ್ತೇ ಹೆಂಡತಿ ಕಾವೇರಿಗೆ ನಾವು ಇಲ್ಲಿ ಇರುವುದು ಬೇಡ ಬೇರೆ ಊರಿಗೆ ಹೋಗಿ ದುಡಿಯೋಣ ಅಂತ ಹೇಳಿದಾಗ ಅದರ ಸಲುವಾಗಿಯೇ ಇಬ್ಬರ ಮಧ್ಯೆ ಕೆಲವು ಬಾರಿ ವಾಗ್ವಾದಗಳು ಏರ್ಪಟ್ಟಿದ್ದವು ಇದು ಅತಿರೇಕಕ್ಕೇರಿತ್ತು.

ಅಂದು ದಿನಾಂಕ 11/10/2024 ರಂದು ರಾತ್ರಿ 8 ಗಂಟೆಗೆ ಮನೆಗೆ ಬಂದ ಪುನೀತ್ ಅದೇ ವಿಷಯವಾಗಿ ಹೆಂಡತಿ ಕಾವೇರಿಯೊಂದಿಗೆ ಜಗಳಕ್ಕೆ ನಿಂತಾಗ ಆಗ ಕಾವೇರಿ ತಾನು ಬರುವುದಿಲ್ಲ ಅಂತಾ ಖಡಾ ಖಂಡಿತವಾಗಿ ಹೇಳಿದಳು. ಇದರಿಂದ ಸಿಟ್ಟಿಗೆದ್ದ ಪುನೀತ್ ಅಲ್ಲಿಯೇ ಬಳಿಯಿದ್ದ ಯಾವುದೋ ಒಂದು ಬಲವಾದ ಆಯುಧದಿಂದ ಆಕೆಯ ದೇಹದ ತಲೆಯ ಹಾಗೂ ಕೆಲವು ಭಾಗಗಳಿಗೆ ಹೊಡೆದು ಕೊಲೆ ಮಾಡಿ ಪರಾರಿಯಾದನು.

ಮರುದಿನ ಬೆಳಿಗ್ಗೆ ಅಂದರೆ ದಿನಾಂಕ 12/10/2024 ಮುಂಜಾನೆ 8 ಗಂಟೆ ಸುಮಾರಿಗೆ ಈ ವಿಷಯ ಬಡಾವಣೆಯ ಜನರಿಗೆ ಗೊತ್ತಾಗಿ ಕಾವೇರಿ ತಂದೆಗೆ ತಿಳಿಸಿದಾಗ ಬಂದು ನೋಡಿದಾಗ ಕಾವೇರಿ ರಕ್ತದ ಮಡುವಿನಲ್ಲಿ ಪ್ರಾಣ ತೆತ್ತಿದಳು. ಆಗ ಕಾವೇರಿ ತಂದೆ ಪರಶುರಾಮ ನೇರವಾಗಿ ಜಮಖಂಡಿ ನಗರ ಠಾಣೆಗೆ ಹೋಗಿ ಕರ್ತವ್ಯದಲ್ಲಿದ್ದ ಜಮಖಂಡಿ ನಗರ ಠಾಣೆಯ ಪಿಎಸ್‌ಐ ಅನಿಲ್ ಕುಂಬಾರರವರಿಗೆ ನಡೆದ ಘಟನೆ ಬಗ್ಗೆ ವಿವರಿಸಿ ದೂರು ದಾಖಲಿಸಿದರು. ದೂರು ದಾಖಲಿಸಿಕೊಂಡ ಪಿಎಸ್‌ಐ 98/2024 ಕಲಂ 103(1), 352, 351(3) ಬಿಎನ್‌ಎಸ್ 2023 ನೆದರಡಿಯಲಿ ಪ್ರಕರಣ ದಾಖಲಿಸಿಕೊಂಡು ಘಟನಾ ಸ್ಥಳಕ್ಕೆ ಕೂಡಲೇ ತಮ್ಮ ಠಾಣಾ ಸಿಬ್ಬಂದಿಯೊಂದಿಗೆ ಬಂದು ಶವ ಹಾಗೂ ಸ್ಥಳವನ್ನು ಪರಿಶೀಲಿಸಿದ ನಂತರ ತಮ್ಮ ಹಿರಿಯ ಅಧಿಕಾರಿಗಳಾದ ಜಮಖಂಡಿ ವೃತ್ತ ನಿರೀಕ್ಷಕರಾದ ಮಲ್ಲಪ್ಪ ಮಡ್ಡಿ, ಜಮಖಂಡಿ ಡಿವೈಎಸ್ಪಿ ಈ. ಶಾಂತಕುಮಾರ್ ಎಸ್ಪಿ ಅಮರನಾಥ ರೆಡ್ಡಿರವರಿಗೆ ಸುದ್ದಿ ರವಾನಿಸಿದರು. ಸುದ್ದಿ ತಿಳಿದ ಹಿರಿಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಬಂದು ಶವದ ಜಾಗೆಯ ಕುಲಂಕೂಶವಾಗಿ ಪರಿಶೀಲಿಸಿ ಪಂಚನಾಮೆ ನಡೆಸಿ ಕಾವೇರಿ ಶವವನ್ನು ಕುಟುಂಬಸ್ಥರಿಗೆ ಹಸ್ತಾಂತರಿದರು. ಘಟನೆಗೆ ಸಂಬಂಧಿಸಿದ ಸದರಿ ಆರೋಪಿಯಾದ ಪುನೀತ್ ಬಾಳಪ್ಪ ಗಿರಣಿ (28) (ವಿಜಯಪುರ ಜಿಲ್ಲೆ ಸಿಂದಗಿ ತಾಲೂಕು ಪಡಗಾನುರ) ಆರೋಪಿಯನ್ನು ಶೀಘ್ರವೇ ಬಂಧಿಸಿ ಮೃತಳ ಕುಟುಂಬಸ್ಥರಿಗೆ ಸೂಕ್ತ ನ್ಯಾಯ ಒದಗಿಸುವುದಾಗಿ ಅಂತ ಭರವಸೆ ನೀಡಿ, ಆರೋಪಿಯನ್ನು ಬಂಧಿಸಲು ಸೂಕ್ತ ಮಾರ್ಗದರ್ಶನ ನೀಡಿದರು. ಆರೋಪಿ ಪುನೀತ್ ಸದ್ಯ ತಲೆಮರಿಸಿಕೊಂಡಿದ್ದು ಆತನನ್ನು ಬಂಧಿಸಲು ಒಂದು ತಂಡ ರಚಿಸಿ ಆರೋಪಿ ಪತ್ತೆಗೆ ಪೊಲೀಸರು ಜಾಲ ಬೀಸಿದ್ದಾರೆ. ☯



ಹೆಚ್‌ಸಿ ತುಪ್ಪದ

ಕ್ರೈಂ ಪ್ರಪಂಚ

# ಕ್ರಿಮಿನಲ್ ಇನ್ವೆಸ್ಟಿಗೇಷನ್

ವಟ

ಮಧ್ಯಾಹ್ನ ಒಂದು ಗಂಟೆ.

ಎಸ್.ಐ. ಶ್ರೀರಂಗನ್ ಯಾವುದೋ ಕೇಸಿನ ಫೈಲ್ ನೋಡುತ್ತಾ ಕುಳಿತಿದ್ದಾಗ ಪಿ.ಸಿ. ಯೊಬ್ಬ ಒಳಗೆ ಬಂದು ''ಸಾರ್... ಯಾರೋ ಗೋಪಾಲಯ್ಯ ಅನ್ನೋವ್ರು ಬಂದಿದ್ದಾರೆ. ತಮ್ಮನ್ನ ಅರ್ಜೆಂಟ್ ಆಗಿ ನೋಡ್ಬೇಕಂತೆ'' ಎಂದನು.

ಫೈಲ್‌ನಿಂದ ತಲೆ ಎತ್ತದೆ ''ಈಗ ನಂಗೆ ಟೈಂ ಇಲ್ಲ. ಸಂಜೆ ಬರಲು ಹೇಳಿ'' ಎಂದನು.

''ಸಾರ್... ಅವರು ನಿಮ್ಮ ಊರಿನವರಂತೆ. ನಿಮಗೆ ಹೈಸ್ಕೂಲ್‌ನಲ್ಲಿ ಟೀಚರ್ ಆಗಿದ್ರಂತೆ. ಗಣಿತದ ಮೇಸ್ಟ್ರು ಗೋಪಾಲಯ್ಯ ಅಂದ್ರೆ ಗೊತ್ತಾಗುತ್ತೆ ಅಂತ ಹೇಳಿದ್ರು.''

ಗಣಿತದ ಮೇಸ್ಟ್ರು ಗೋಪಾಲಯ್ಯ!

ದಡಕ್ಕನೆ ಎದ್ದು ನಿಂತನು.

ಭಾವುಕ ಗೌರವದ ಸೂಚನೆ.

''ಅರವನ್ನ ಒಳಗೆ ಕರ್ಕೊಂಡ್ ಬನ್ನಿ. ಹಾಗೆ ಸ್ಪೆಷಲ್ ತಿಂಡಿ, ಕಾಫಿ ಕಳಿಸಲು ವ್ಯವಸ್ಥೆ ಮಾಡಿ.''

''ಆಗಲಿ ಸಾರ್.''

ಸುಮಾರು ಐವತ್ತೈದರ ಪ್ರಾಯದ ಗೋಪಾಲಯ್ಯ ಮತ್ತು ಅವರ ಪತ್ನಿ ಮಹಾದೇವಮ್ಮ ಒಳಗೆ ಬಂದರು. ಈ ಪೊಲೀಸ್ ಅಧಿಕಾರಿ ಶ್ರೀರಂಗನ್ ಅವರ ಹತ್ತಿರ ಹೋಗಿ ಗೌರವ ಸೂಚಿಸಿ, ಕೈ ಹಿಡಿದು ಕರೆತಂದು ಕೂರಿಸಿ ಕ್ಷೇಮ ವಿಚಾರಿಸಿದನು. ವಿದ್ಯಾರ್ಥಿ ಜೀವನದ ಘಟನೆಗಳ ಬಗ್ಗೆ ಪ್ರಾರಂಭದಲ್ಲಿ ಮಾತಾಡಿದನು.

ಮಹಾದೇವಮ್ಮನ ಕಣ್ಣುಗಳಲ್ಲಿ ನೀರಿನ ಪಸೆ ಕಾಣುತ್ತಿದೆ. ಗೋಪಾಲಯ್ಯ ಗಾಬರಿಯಾಗಿದ್ದಾರೆ ಮತ್ತು ಚಡಪಡಿಸುತ್ತಿದ್ದಾರೆ.

ಶ್ರೀರಂಗನ್ ''ಮೇಸ್ಟ್ರೆ... ಏನೋ ಸಮಸ್ಯೆ ಬಂದಿರೋದ್ರಿಂದ ನೀವು ಇಲ್ಲಿಗೆ ಬಂದಿದ್ದೀರ. ಅದೇನು ಅಂತ ಧೈರ್ಯವಾಗಿ ಹೇಳಿ. ನನ್ನಿಂದ ಆಗುವ ಸಹಾಯವನ್ನು ಖಂಡಿತಾ ಮಾಡ್ತೀನಿ'' ಎಂದು ಭರವಸೆ ನೀಡಿದನು.

ಆಕೆ ಕಂಬನಿ ಒರೆಸಿಕೊಂಡರು.

ಮೇಸ್ಟ್ರು ನಿಟ್ಟುಸಿರುಬಿಟ್ಟರು.

''ನನ್ನ ಮಗ ರೋಹನ್ ನಿನಗೆ ಗೊತ್ತಿರಬೇಕು.''

''ಹಾಂ... ಯಾವುದೋ ಫಂಕ್ಷನ್‌ನಲ್ಲಿ ನಿಮ್ಮ ಜೊತೆ ನೋಡಿದ್ದೆ. ಈಗ ಏನು ಮಾಡ್ಕೊಂಡಿದ್ದಾನೆ?''

''ಡಿಗ್ರಿ ಮುಗಿದ ಮೇಲೆ ಕೆಲಸ ಹುಡುಕಲು ಪ್ರಾರಂಭ ಮಾಡ್ದ. ಟೆಂಪೊರರಿಯಾಗಿ ತುಂಬಾ ಕಡಿಮೆ ಸಂಬಳಕ್ಕೆ ಎಲ್ಲೋ ಒಂದು ಕಡೆ ಕೆಲಸ ಮಾಡುತ್ತಿದ್ದ. ಆದರೆ ಈಗ... ಈಗ...'' ಎಂದು ದುಃಖ ಮತ್ತು ಭಾವುಕ ಗಾಬರಿಯ ಕಾರಣದಿಂದ ತಡವರಿಸಿದರು.

''ಈಗ ಏನಾಯಿತು ಅಂತ ಹೇಳಿ.''

ಮಹಾದೇವಮ್ಮ ದುಃಖ, ಗಾಬರಿಯಿಂದ ''ಅವನು ಎರಡು ದಿನಗಳಿಂದ ಮನೆಗೆ ಬಂದಿಲ್ಲ. ಎಲ್ಲಿಗೆ ಹೋದ ಅಂತ ಗೊತ್ತಿಲ್ಲ. ನಾವು ಎಲ್ಲಾ ಕಡೆ ವಿಚಾರಿಸಿದೆವು. ಅವನ ಮೊಬೈಲ್ ಫೋನ್ ಸಹ ಸ್ವಿಚ್ ಆಫ್ ಆಗಿದೆ'' ಎಂದರು.

ಪೊಲೀಸ್ ಅಧಿಕಾರಿ ''ಅವನನ್ನು ಕೊನೆಯ ಸಲ ನೋಡಿದ್ದು ಯಾವಾಗ?''

''ಗುರುವಾರ ಸಂಜೆ ಐದು ಗಂಟೆಗೆ.''

''ಆಗ ಅವನು ಹೇಗಿದ್ದ?''

ಗೋಪಾಲಯ್ಯ ''ತುಂಬಾ ಖುಷಿಯಾಗಿದ್ದ. ದಿನನಿತ್ಯಕ್ಕಿಂತ ಅವತ್ತು ತುಂಬಾ ಟ್ರಿಮ್ ಆಗಿ ಡ್ರೆಸ್ ಮಾಡ್ಕೊಂಡ್ ಹೋಗಿದ್ದ. ಲವಲವಿಕೆ, ನಗು, ಉತ್ಸಾಹ ಅವನಲ್ಲಿತ್ತು'' ಎಂದರು.

''ಎಲ್ಲಿಗೆ ಹೋಗ್ತೀನಿ ಅಂತ ಹೇಳಿದ್ನ?''

''ಫ್ರೆಂಡ್ ಮನೆಗೆ ಅಂತ ಹೇಳಿದ್ದ.''

''ಯಾವ ಫ್ರೆಂಡ್ ಅಂತ ಕೇಳಿದ್ರ?''

''ಅವನು ಆಗಾಗ ಫ್ರೆಂಡ್ ಮನೆಗೆ ಹೋಗಿ ಬರುತ್ತಿದ್ದರಿಂದ ನಾವು ವಿಚಾರಿಸಲಿಲ್ಲ.''

''ನೀವು ಅವನಿಗೆ ಯಾವಾಗ ಫೋನ್ ಮಾಡಿದ್ರಿ?''

ಗೋಪಾಲಯ್ಯ ''ರಾತ್ರಿ ಹತ್ತು ಗಂಟೆಯಾದರೂ ಬರಲಿಲ್ಲ. ಗಾಬರಿಯಾಗಿ ಫೋನ್ ಮಾಡಿದೆವು. ಆದರೆ ಫೋನ್ ಸ್ವಿಚ್ ಆಫ್ ಆಗಿತ್ತು.''

''ಸಂಬಂಧಿಕರನ್ನ ವಿಚಾರಿಸಿದ್ರಾ?''

''ಎಲ್ಲರಿಗೂ ಫೋನ್ ಮಾಡಿದ್ದೆ. ಆದರೆ ಅವನು ಸಂಬಂಧಿಕರು ಅಥವಾ ಪರಿಚಯುದವರ ಮನೆಗೆ ಹೋಗಿರಲಿಲ್ಲ.''

''ಆಮೇಲೆ ಏನು ಮಾಡಿದ್ರಿ?''

''ಅವನು ಕೆಲಸ ಮಾಡುತ್ತಿದ್ದ ಆಫೀಸ್‌ಗೆ ಹೋಗಿ ವಿಚಾರಿಸಿದ್ರೆ... ಗುರುವಾರ ಕೆಲಸಕ್ಕೆ ಹೋಗಿದ್ದ. ನಂತರ ಅಂದರೆ ಶುಕ್ರವಾರ, ಶನಿವಾರ ಲೀವ್ ಹಾಕದೆ ಚಕ್ಕರ್ ಹೊಡೆದಿದ್ದ.''

''ಮಗನ ಫೋಟೋ ತಂದಿದ್ದೀರ?''

ಮಹಾದೇವಮ್ಮ ಪರ್ಸ್‌ನಿಂದ ಪೋಸ್ಟ್ ಕಾರ್ಡ್ ಸೈಜ್‌ನ ಫೋಟೋ ತೆಗೆದು ಟೇಬಲ್ ಮೇಲೆ ಇಟ್ಟರು.

ಪೊಲೀಸ್ ಅಧಿಕಾರಿ ನೋಡಿದನು.

ರೋಹನ್ ಚಿತ್ತಾಕರ್ಷಕ ರೂಪಿನ ಮನ್ಮಥ. ಬಾಡಿ ಬಿಲ್ಡಿಂಗ್ ವ್ಯಾಯಾಮ ಮಾಡುತ್ತಿದ್ದರಿಂದ ಬಾಡಿ ಶೇಪ್ ಸೂಪರ್ ಆಗಿತ್ತು. ಈ ಕಾಲದ ಯುವತಿಯರನ್ನು ಆಕರ್ಷಿಸಬಲ್ಲ ಅಪರೂಪದ ಹೀರೋ ಅಪಿಯರೆನ್ಸ್ ಅವನಲ್ಲಿತ್ತು.

''ರೋಹನ್ ಫೋನ್ ನಂಬರ್ ಹೇಳಿ'' ಎಂದು ಗುರುತು ಹಾಕಿಕೊಂಡ ನಂತರ 'ರೋಹನ್ ಯಾರನ್ನಾದರೂ ಲವ್ ಮಾಡುತ್ತಿದ್ನ?''

ಗೋಪಾಲಯ್ಯ ''ನಮಗೆ ತಿಳಿದಂತೆ ಇಲ್ಲ ಶ್ರೀರಂಗನ್'' ಎಂದರು.

ನಿಮ್ಮ ಗಮನಕ್ಕೆ ಬಾರದಂತೆ ಲವ್ ಮಾಡಿರ ಬಹುದಲ್ವ? ಈ ಕಾಲದ ಯುವಕರು ಲವ್ ಕೇಸ್‌ಗಳಲ್ಲಿ ಬೇಗ ಸಿಕ್ಕಿಕೊಳ್ತಾರೆ.''

ಮಹಾದೇವಮ್ಮ ''ಆ ರೀತಿ ಮಾಡಿದ್ರೆ ನಮಗೆ ಹೇಗೆ ಗೊತ್ತಾಗುತ್ತೆ ಸಾರ್'' ಎಂದರು.

''ನಮಗೆ ಗೊತ್ತಾಗುತ್ತೆ. ನಿಮ್ಮ ಮನೆಗೆಗೆ ಬಂದು ಅವನ ರೂಮನ್ನು ನೋಡ್ತೀನಿ. ಅವನ ಫ್ರೆಂಡ್ಸ್‌ಗಳನ್ನು ವಿಚಾರಣೆ ಮಾಡಿ ತಿಳಿದುಕೊಳ್ತೀನಿ. ನಿಮ್ಮ ಮಗನಿಗೆ ತುಂಬಾ ಆತ್ಮೀಯವಾಗಿರುವ ಫ್ರೆಂಡ್ಸ್ ಯಾರು?''

''ಕೇಶವಪ್ರಸಾದ್ ನನ್ನ ಮಗನ ಕ್ಲೋಸ್ ಫ್ರೆಂಡ್. ಆಗಾಗ ನಮ್ಮ ಮನೆಗೆ ಬರುತ್ತಿದ್ದ.''

ಪೊಲೀಸ್ ಅಧಿಕಾರಿ ಕೇಶವಪ್ರಸಾದ್ ವಿವರ ಪಡೆದುಕೊಂಡರು. ನಂತರ ''ಸಾರ್... ನೀವು ಮಿಸ್ಸಿಂಗ್ ಕಂಪ್ಲೇಂಟ್ ಬರೆದುಕೊಡಿ. ನಾನು ವಿಚಾರಣೆ ಮಾಡ್ತೀನಿ.''

ಗೋಪಾಲಯ್ಯ ಅವನು ಹೇಳಿದಂತೆ ದೂರು ಬರೆದುಕೊಟ್ಟ ನಂತರ ''ಶ್ರೀರಂಗನ್... ನಮಗೆ ಅವನೊಬ್ಬನೇ ಆಧಾರಕಣಪ್ಪ. ಅವನಿಗೆ ಏನಾಗಿದೆ ಅಂತ ಗೊತ್ತಿಲ್ಲ. ನೀನು ನನಗಾಗಿ ವಿಶೇಷ ಗಮನ ನೀಡಿ ಅವನನ್ನು ಪತ್ತೆ ಮಾಡ್ಬೇಕು'' ಎಂದು ಕೈಗಳನ್ನು ಜೋಡಿಸಿ ಹೇಳಿದರು.

ಶ್ರೀರಂಗನ್ ಅವರ ಕೈ ಅದುಮುತ್ತಾ ''ನೀವು ಧೈರ್ಯವಾಗಿರಿ ಸಾರ್. ನಾನು ಪ್ರಾಮಾಣಿಕವಾಗಿ ಪ್ರಯತ್ನ ಮಾಡ್ತೀನಿ'' ಎಂದು ಹೇಳಿದನು.

●●●

ಹೋಟೆಲ್ ಶಿವಪ್ರಕಾಶ್!

ಆ ಹೋಟೆಲ್ ಮುಂದೆ ಪೊಲೀಸ್ ಜೀಪು ನಿಂತುಕೊಂಡಿತು. ಆದರೆ ಶ್ರೀರಂಗನ್ ಸಿಬ್ಬಂದಿಗಳ ಜೊತೆ ಒಳಗೆ ಹೋಗಲಿಲ್ಲ. ಇದರಿಂದ ಕೇಶವಪ್ರಸಾದ್‌ಗೆ ನೌಕರಿ ದೃಷ್ಟಿಯಿಂದ ಮುಜುಗರ ಆಗಬಹುದು ಎಂದು ಫೋನ್ ಮಾಡಿದನು.

''ಕೇಶವಪ್ರಸಾದ್... ನಾನು ಪೊಲೀಸ್ ಆಫೀಸರ್ ಶ್ರೀರಂಗನ್. ನೀನು ಕೆಲಸ ಮಾಡುತ್ತಿರುವ ಹೋಟೆಲ್ ಎದುರಿಗೆ ಇದ್ದೇನೆ. ಹತ್ತು ನಿಮಿಷ ಫ್ರೀ ಮಾಡ್ಕೊಂಡು ಬರಲು ಆಗುತ್ತಾ?''

''ಆಗಲಿ ಸಾರ್ ಬರ್ತೀನಿ.''

ಕಾರ್ಯ ಒತ್ತಡಗಳ ನಡುವೆ ಬಿಡುವು ಮಾಡಿಕೊಂಡು ಬರಲು ಸ್ವಲ್ಪ ಕಾಲಾವಕಾಶ ಬೇಕಾಯಿತು ಕಣ್ಮರೆ ಆಗಿರುವ ರೋಹನ್ ಪ್ರಾಯದ ಯುವಕ. ''ಹೇಳಿ ಸಾರ್... ಈಗ ನನ್ನಿಂದ ಏನಾಗಬೇಕು?''

''ನಿನ್ನ ಕ್ಲೋಸ್ ಫ್ರೆಂಡ್ ರೋಹನ್ ಬಗ್ಗೆ ನಿನಗೆ ಗೊತ್ತಿರಬೇಕು.''

ಕೇಶವಪ್ರಸಾದ್ ಬೇಸರದಿಂದ ''ಅವನ ತಂದೆ ಫೋನ್ ಮಾಡಿದ್ರು ಸಾರ್. ತುಂಬಾ ಒಳ್ಳೆಯ ಹುಡುಗ ರೋಹನ್. ಅವನ್ಯಾಕೆ ಕಣ್ಮರೆಯಾದ ಅಂತ ಗೊತ್ತಿಲ್ಲ'' ಎಂದನು.

ಪೊಲೀಸ್ ಅಧಿಕಾರಿ ''ಗೊತ್ತಿಲ್ಲ ಅಂತ ಹೇಳಿದ್ರೆ ತನಿಖೆ ನಿಂತ ನೀರಾಗುತ್ತೆ. ನಿನಗೆ ಗೊತ್ತಿರುವ ವಿಚಾರವನ್ನು ಹೇಳ್ಬೇಕು'' ಎಂದು ಗಂಭೀರವಾಗಿ ಹೇಳಿದನು.

''ಕೇಳಿ ಸಾರ್ ಖಂಡಿತಾ ಹೇಳ್ತೀನಿ.''

''ರೋಹನ್‌ಗೆ ನೀನು ತುಂಬಾ ಕ್ಲೋಸ್ ಫ್ರೆಂಡ್. ಸಾಮಾನ್ಯವಾಗಿ ಲವ್ ವಿಚಾರನ ಅಪ್ಪ-ಅಮ್ಮ ಅಥವಾ ಸಂಬಂಧಿಕರಿಗಿಂತ ಮೊದಲು ಕ್ಲೋಸ್ ಫ್ರೆಂಡ್ಸ್‌ಗೆ ಹೇಳ್ತಾರೆ. ಕಮಾನ್... ಟೆಲ್ ಮೀ... ರೋಹನ್ ಯಾರನ್ನಾದ್ರು ಲವ್ ಮಾಡಿದ್ನ?''

''ನನಗೆ ತಿಳಿದಂತೆ ಇಲ್ಲ ಸಾರ್.''

''ಕೇಶವಪ್ರಸಾದ್... ಸ್ವಲ್ಪ ಆಲೋಚನೆ ಮಾಡಿ, ನೆನಪು ಮಾಡಿಕೊಂಡು ಹೇಳು. ಅವನು ಲವ್ ಬಗ್ಗೆ ಹೇಳಿದ್ನ?''

''ಇಲ್ಲ ಸಾರ್. ಆ ರೀತಿ ಲವ್ ಮಾಡಿದ್ರೆ ತನ್ನ ಲವ್ ಫೀಲಿಂಗ್‌ನ ನನ್ನ ಜೊತೆ ಶೇರ್ ಮಾಡಿಕೊಳ್ತಿದ್ದ.''

''ಆರ್ ಯೂ ಶ್ಯೂರ್.'

''ಹೌದು ಸಾರ್.''

''ಓಕೆ ಅವನಿಗೆ ಕಾಲೇಜಿನಲ್ಲೇ ಆಗಲಿ ಅಥವಾ ಹೊರಗಿನ ಜೀವನದಲ್ಲೇ ಆಗಲಿ ಶತ್ರುಗಳು ಇದ್ರಾ?''

''ಕಾಲೇಜ್ ಎನಿಮಿ ಒಬ್ಬ ಇದ್ದ ಸಾರ್.''

''ಹೌದಾ... ಯಾರವನು?''

''ಬಾಬು ದಿನಕರ್ ಅಂತ.''

''ಯಾವ ಕಾರಣದಿಂದ ಕಾಲೇಜಿನಲ್ಲಿ ಅವರಿಬ್ಬರಿಗೆ ಜಗಳ ಆಗಿತ್ತು.''

''ಕಾರಣ ಏನು ಅಂತ ಗೊತ್ತಿಲ್ಲ. ಆದರೆ ಆ ಬಾಬು ದಿನಕರ್ ಗೂಂಡಾ ರೀತಿಯಲ್ಲಿ ವರ್ತಿಸಿದ್ದ. ಕಾಲೇಜಿನಲ್ಲಿ ರೋಹನ್ ಮೇಲೆ ಅಟ್ಯಾಕ್ ಮಾಡಿದ್ದ. ನಿನ್ನ ಸುಮ್ನೆ ಬಿಡೋಲ್ಲ. ನಿನಗೊಂದು ಗತಿ ಕಾಣುಸ್ತೀನಿ ಅಂತ ಪ್ರತಿಜ್ಞೆ ಮಾಡಿದ್ದ.''

''ಇದು ನಡೆದದ್ದು ಯಾವಾಗ?''

''ಎರಡು ತಿಂಗಳ ಹಿಂದೆ.''

''ಈ ಎರಡು ತಿಂಗಳ ಅವಧಿಯಲ್ಲಿ ಪುನಹ ಜಗಳ ಆಡಿರಲಿಲ್ವ?''

''ನನಗೆ ತಿಳಿದಂತೆ ಇಲ್ಲ.

''ಬಾಬು ದಿನಕರನ ಡೀಟೈಲ್ಸ್ ಕೊಡಿ'' ಎಂದಾಗ ಪಿ.ಸಿ. ಆ ವಿವರಗಳನ್ನು ನೋಟ್ ಮಾಡಿಕೊಳ್ಳಲು ರೆಡಿಯಾದನು.

●●●

ಪೊಲೀಸ್ ಅಧಿಕಾರಿ ಶ್ರೀರಂಗನ್ ಜೀಪನ್ನು ಮೇಸ್ಟ್ರು ಮನೆಗೆ ದೂರದಲ್ಲಿ ನಿಲ್ಲಿಸಿ ಇಳಿದು ನಡೆದುಕೊಂಡು ಬಂದನು.

ಇಬ್ಬರು ಪಿ.ಸಿ.ಗಳು ಜೀಪಿನ ಹತ್ತಿರ ನಿಂತಿದ್ದಾರೆ. ಪೊಲೀಸ್ ವಾಹನ ಮತ್ತು ಸಿಬ್ಬಂದಿಗಳನ್ನು ಕಂಡರೆ ಮೇಸ್ಟ್ರುಗೆ ನೆರೆ-ಹೊರೆಯವರಿಂದ ಕಿರಿಕ್ ಉಂಟಾಗುತ್ತದೆ ಎಂದು ಒಬ್ಬನೇ ಬಂದಿದ್ದಾನೆ ಶ್ರೀರಂಗನ್.

ಗೋಪಾಲಯ್ಯ ಮತ್ತು ಅವರ ಪತ್ನಿಗೆ ಧೈರ್ಯ ಹೇಳಿದ ನಂತರ ''ನಿಮ್ಮ ಮಗ ಉಪಯೋಗಿಸುತ್ತಿದ್ದ ಕೊಠಡಿಯನ್ನು ನಾನೊಂದು ಸಲ ನೋಡ್ಬೇಕು'' ಎಂದು ಹೇಳಿ ಈಗ ಅತ್ತ ಕಡೆ ಹೊರಟನು.

ಕೊಠಡಿಯೊಳಗೆ ಹೋಗಿ ಡೋರ್ ಲಾಕ್ ಮಾಡಿ ಕೊಂಡು ಹುಡುಕಿದನು.

ಹತ್ತು ನಿಮಿಷಗಳಾಯಿತು. ಪ್ರಕರಣಕ್ಕೆ ಮುಖ್ಯವಾದ ತಿರುವನ್ನು ನೀಡುವಂತ ಸುಳಿವು ಸಿಕ್ಕಿತ್ತು.

ಫೋಟೋಗಳು.

ಫೋನ್ ನಂಬರ್.

ಗಾಬರಿಯಾಗಿದ್ದ ಗೋಪಾಲಯ್ಯ ಮತ್ತು ಅವರ ಹೆಂಡತಿಗೆ ತನಗೆ ದೊರೆತಿರುವ ಸುಳಿವಿನ ಬಗ್ಗೆ ಹೇಳದೆ, ಬೇರೆ ಏನೋ ಮಾತಾಡಿ, ಧೈರ್ಯ ತುಂಬಿ ಈಗ ಅಲ್ಲಿಂದ ಹೊರಟನು.

●●●

ಕಳಿಂಗ ಬಾರ್!

ಡಿಲಕ್ಸ್ ರೂಮಲ್ಲಿ ಕುಳಿತು ವಿಸ್ಕಿ ಕುಡಿಯುತ್ತಾ ಸಿಗರೇಟ್ ಸೇದುತ್ತಿದ್ದಾನೆ. ಹಿಪ್ಪೀವಾಲ ಬಾಬು ದಿನಕರ್.

ಅವನ ಎದುರಿಗೆ ಕಾಲಿ ಇರುವ ಕುರ್ಚಿಯಲ್ಲಿ ಆಗತಾನೇ ಅಲ್ಲಿಗೆ ಬಂದಿದ್ದ ವ್ಯಕ್ತಿ ಕುಳಿತನು.

ಬಾಬು ದಿನಕರ್ ಗಡುಸಾಗಿ ''ಏ ಮಿಸ್ಟರ್... ಎರಡು ಸೀಟುಗಳನ್ನು ನಾನು ರಿಸರ್ವ್ ಮಾಡಿಸಿಕೊಂಡಿದ್ದೀನಿ. ನಾನು ಕುಡಿಯುವಾಗ ನನ್ನ ಎದುರಿಗೆ ಯಾರೂ ಸಹ ಕೂರಬಾರದು. ಗೆಟ್‌ಲಾಸ್ಟ್ ಫ್ರಂ ಹಿಯರ್''

☞ 14

> ''ಮಂದಾರ ಮಾಲ ಸೋ ಕಾಲ್ಡ್ ಬ್ಯುಟಿಫುಲ್ ಅಷ್ಟೇ ಅಲ್ಲ, ಅವಳ ತಂದೆ ರಾಜಕಾರಣಿ. ಅವಳು ಹ್ಯಾಂಡ್‌ಸಮ್ ಹೀರೋ ರೀತಿ ಇದ್ದ ರೋಹನ್‌ನನ್ನು ಇಷ್ಟಪಟ್ಟಿದ್ದಳು. ಸೌಂದರ್ಯ, ಶ್ರೀಮಂತಿಕೆ, ರಾಜಕೀಯದ ಪ್ರಭಾವ ಇರುವ ಕುಟುಂಬದ ಅವಳನ್ನು ಲವ್ ಮಾಡಿ ಮದುವೆ ಆಗುವ ಆಸೆ ನಿನಗಿತ್ತು. ರೋಹನ್ ಇದಕ್ಕೆ ಅಡ್ಡಿ ಆಗಿದ್ದ. ಲವ್ ರೈವಲ್ ಆಗಿದ್ದ. ಹಾಗಾಗಿ ಅವನನ್ನು ಲೋಕದಿಂದ ಕಳಿಸಲು ಮಾಸ್ಟರ್ ಪ್ಲಾನ್ ಮಾಡಿದೆ. ದಿಢೀರ್ ಅಂತ ಮರ್ಡರ್ ಮಾಡಿದರೆ ಅನುಮಾನ ಬರುತ್ತೆ ಅಂತ ಕಿಡ್ನಾಪ್ ಮಾಡಿದ್ದೀಯ. ಕಿಡ್ನಾಪ್ ಪ್ರಕರಣ ಪ್ರಚಾರ ಆಗುವಂತೆ ಮಾಡಿದ್ದೀಯ.'' ''ಹೂಂ... ಆಮೇಲೆ ಹೇಳಿ.'' ''ಕ್ರಮೇಣ ಅವನನ್ನು ಕೊಲೆ ಮಾಡಿ ಡೆಡ್‌ಬಾಡಿ ಮಣ್ಣು ಮಾಡುವ ಮಾಸ್ಟರ್ ಪ್ಲಾನ್‌ನಿಂದ...'' ಬಾಬು ದಿನಕರ್ ಕೂಡಲೇ ''ನನಗೊಂದು ಅನುಮಾನ ಬಂದಿದೆ.'' ''ಅನುಮಾನ... ಏನದು?' ''ನೀವು ಪೊಲೀಸ್ ಆಫೀಸರ್ರೋ ಅಥವಾ ಪತ್ತೇದಾರಿ ಸ್ಟೋರಿ ರೈಟರ್ರೋ ಅಂತ.''

13 ☞

ಎಂದನು.

ಬಾಬು ದಿನಕರ್ ಕುಳಿತಿರುವ ಜಾಗದಿಂದ ಅಲ್ಲಾಡದೆ ಸಿಗರೇಟ್ ಸೇದಿ ಬಾಬು ತುಂಬಾ ಹೊಗೆ ತುಂಬಿಸಿಕೊಂಡು ಅವನ ಮುಖದ ಮೇಲೆ ಬಿಟ್ಟನು.

ಬಾಬು ದಿನಕರ್ ಕೋಪದಿಂದ ಅಬ್ಬರಿಸಿದನು.

''ಕೂಲ್ ಡೌನ್ ಮಿಸ್ಟರ್ ಬಾಬು ದಿನಕರ್'' ಎಂದು ಹೇಳಿ ಐಡೆಂಟಿಟಿ ಕಾರ್ಡ್ ಅನ್ನು ಮುಖದ ಮುಂದೆ ಹಿಡಿದು ''ನಾನು ಪೊಲೀಸ್ ಆಫೀಸರ್ ಶ್ರೀರಂಗನ್. ನಿನ್ನನ್ನು ಎನ್‌ಕ್ವಯರಿ ಮಾಡಲು ಬಂದಿದ್ದೀನಿ.''

''ವಾಟ್ ಫಾರ್?''

ಶ್ರೀರಂಗನ್ ಗಂಭೀರವಾಗಿ ''ನಿನ್ನ ಕಾಲೇಜ್ ರೈವಲ್ ರೋಹನ್ ವಿಚಾರವಾಗಿ ನಿನ್ನನ್ನು ವಿಚಾರಣೆ ಮಾಡ್ಬೇಕು'' ಎಂದನು.

ಬಾಬು ದಿನಕರ್ ಗಡುಸಾಗಿ ''ಅವನಿಗೆ ಏನಾಗಿದೆ ಅಂತ ವಿಚಾರಣೆ ಮಾಡ್ಬೇಕು.''

''ಅವನು ಕಣ್ಮರೆಯಾಗಿದ್ದಾನೆ. ಅವನ ತಂದೆ ಮಿಸ್ಸಿಂಗ್ ಕಂಪ್ಲೆಂಟ್ ಕೊಟ್ಟಿದ್ದಾರೆ. ನನಗೆ ಬಂದಿರೋ ಇನ್‌ಫರ್‌ಮೇಷನ್ ಪ್ರಕಾರ ಅವನ ಕಣ್ಮರೆಯಾಗಿರುವುದರ ಹಿನ್ನಲೆಯಲ್ಲಿ ನಿನ್ನ ಪಾತ್ರ ಇದೆ.''

ಬಾಬು ದಿನಕರ್ ಕೋಪದಿಂದ ''ಯಾವ ಗ್ರೌಂಡ್ಸ್ ಮೇಲೆ ನನ್ನ ಈ ಆರೋಪ ಮಾಡುತ್ತಿದ್ದೀರ?''

''ನಿಮ್ಮಿಬ್ಬರ ನಡುವೆ ಯಾವುದೋ ಒಂದು ವಿಚಾರಕ್ಕೆ ಜಗಳ ಆಗಿತ್ತು. ನಿನಗೊಂದು ಗತಿ ಕಾಣುಸ್ತೀನಿ ಅಂತ ನೀನು ಓಪನ್ ಆಗಿ ಹೇಳಿದ್ದೆ. ನಿಜ ತಾನೆ?''

''ಹೌದು ನಿಜ.''

''ಅವನನ್ನು ನೀನೇ ಕಿಡ್ನಾಪ್ ಮಾಡಿ ಸೇಡು ತೀರಿಸಿಕೊಂಡಿದ್ದೀ.''

ಬಾಬು ದಿನಕರ್ ಗಡುಸಾಗಿ ''ಎಲ್ಲಾ ನಾನು ಅಂದುಕೊಂಡಂತೆ ಮತ್ತು ನಿರೀಕ್ಷೆ ಮಾಡಿದಂತೆ ಆಗಿದ್ದರೆ ನನ್ನ ಲವ್ ರೈವಲ್ ಆಗಿದ್ದ ರೋಹನ್‌ಗೆ ಖಂಡಿತಾ ಒಂದು ಗತಿ ಕಾಣಿಸಿರುತ್ತಿದ್ದೆ.''

''ವಾಟ್ ಡು ಯೂ ಮೀನ್?''

''ಕಾಲೇಜಿನಲ್ಲಿ ಓದುತ್ತಿದ್ದಾಗ ರೋಹನ್ ನನಗೆ ಪ್ರತಿಸ್ಪರ್ಧಿ ಆಗಿದ್ದ. ಹ್ಯಾಂಡ್‌ಸಮ್ ಹೀರೋ ರೀತಿ ಇದ್ದ ಅವನನ್ನು ಕಾಲೇಜಿನ ಯುವತಿಯರು ಇಷ್ಟಪಡುತ್ತಿದ್ರು. ಆ ಯುವತಿಯರಲ್ಲಿ ನಾನು ಒಬ್ಬಳನ್ನು ತುಂಬಾ ಇಷ್ಟಪಟ್ಟಿದ್ದೆ.''

ಪೊಲೀಸ್ ಅಧಿಕಾರಿ ಕೂಡಲೇ ''ನನ್ನ ಊಹೆ ಸರಿಯಾಗಿದ್ದರೆ ನೀನು ಇಷ್ಟಪಟ್ಟಿದ್ದ ಯುವತಿ ಮಂದಾರ ಮಾಲ...' ಎಂದು ಎದ್ದು ನಿಂತು ''ಯಾಮ್ ಐ ರೈಟ್'' ಎಂದು ಕೇಳಿದನು.

ಬಾಬು ದಿನಕರ್ ತಲೆಯಾಡಿಸಿದನು.

ಶ್ರೀರಂಗನ್ ಈಗ, ಗೋಪಾಲಯ್ಯನವರ ಮನೆಯಿಂದ (ರೋಹನ್ ಕೊಠಡಿ) ತಂದಿದ್ದ ಆಕರ್ಷಕ ರೂಪಿನ ಯುವತಿಯ ಫೋಟೋ ತೋರಿಸುತ್ತಾ ''ಇವಳೇ ತಾನೇ ಮಂದಾರ ಮಾಲ'' ಎಂದನು.

''ಹೌದು ಸಾರ್.''

''ಮಂದಾರ ಮಾಲ ಸೋ ಕಾಲ್ಡ್ ಬ್ಯುಟಿಫುಲ್ ಅಷ್ಟೇ ಅಲ್ಲ, ಅವಳ ತಂದೆ ರಾಜಕಾರಣಿ. ಅವಳು ಹ್ಯಾಂಡ್‌ಸಮ್ ಹೀರೋ ರೀತಿ ಇದ್ದ ರೋಹನ್‌ನನ್ನು ಇಷ್ಟಪಟ್ಟಿದ್ದಳು. ಸೌಂದರ್ಯ, ಶ್ರೀಮಂತಿಕೆ, ರಾಜಕೀಯದ ಪ್ರಭಾವ ಇರುವ ಕುಟುಂಬದ ಅವಳನ್ನು ಲವ್ ಮಾಡಿ ಮದುವೆ ಆಗುವ ಆಸೆ ನಿನಗಿತ್ತು. ರೋಹನ್ ಇದಕ್ಕೆ ಅಡ್ಡಿ ಆಗಿದ್ದ. ಲವ್ ರೈವಲ್ ಆಗಿದ್ದ. ಹಾಗಾಗಿ ಅವನನ್ನು ಲೋಕದಿಂದ ಕಳಿಸಲು ಮಾಸ್ಟರ್ ಪ್ಲಾನ್ ಮಾಡಿದೆ. ದಿಢೀರ್ ಅಂತ ಮರ್ಡರ್ ಮಾಡಿದರೆ ಅನುಮಾನ ಬರುತ್ತೆ ಅಂತ ಕಿಡ್ನಾಪ್ ಮಾಡಿದ್ದೀಯ. ಕಿಡ್ನಾಪ್ ಪ್ರಕರಣ ಪ್ರಚಾರ ಆಗುವಂತೆ ಮಾಡಿದ್ದೀಯ.''

''ಹೂಂ... ಆಮೇಲೆ ಹೇಳಿ.''

''ಕ್ರಮೇಣ ಅವನನ್ನು ಕೊಲೆ ಮಾಡಿ ಡೆಡ್‌ಬಾಡಿ ಮಣ್ಣು ಮಾಡುವ ಮಾಸ್ಟರ್ ಪ್ಲಾನ್‌ನಿಂದ...''

ಬಾಬು ದಿನಕರ್ ಕೂಡಲೇ ''ನನಗೊಂದು ಅನುಮಾನ ಬಂದಿದೆ.''

''ಅನುಮಾನ... ಏನದು?'

''ನೀವು ಪೊಲೀಸ್ ಆಫೀಸರ್ರೋ ಅಥವಾ ಪತ್ತೇದಾರಿ ಸ್ಟೋರಿ ರೈಟರ್ರೋ ಅಂತ.''

''ಮಿಸ್ಟರ್ ಬಾಬು ದಿನಕರ್...''

ಬಾಬು ದಿನಕರ್ ಎದ್ದು ನಿಂತು ''ಕೂಲ್ ಡೌನ್ ಇನ್‌ಸ್ಪೆಕ್ಟರ್ ಕೂಲ್ ಡೌನ್. ನನ್ನ ಮೇಲೆ ಈ ಆರೋಪ ಮಾಡುತ್ತಿದ್ದೀರಲ್ಲ. ನಿಮ್ಮ ಹತ್ತಿರ ಆಧಾರ ಏನಿದೆ? ಸಾಕ್ಷಿ, ಆಧಾರ ಇದ್ರೆ ಈಗಲೇ ಅರೆಸ್ಟ್ ಮಾಡಿ ಕರ್ಕೊಂಡ್ ಹೋಗಿ.'

''ನೋಡು ಮಿಸ್ಟರ್...''

''ಮಿಸ್ಟರ್ ಇನ್‌ಸ್ಪೆಕ್ಟರ್... ನಾನಾಗಲೇ ಹೇಳಿದ್ದೀನಿ. ಮಂದಾರ ಮಾಲಳ ಬಗ್ಗೆ ನಾನು ನಿರೀಕ್ಷೆ ಮಾಡಿದಂತೆ ಎಲ್ಲಾ ಆಗಿದ್ದರೆ, ಖಂಡಿತಾ ರೋಹನ್‌ನನ್ನು ಉಳಿಸುತ್ತಿರಲಿಲ್ಲ. ಆ ಮಂದಾರ ಮಾಲ ತಾನಾಗಿಯೇ ಬಂದು ನನ್ನನ್ನು ಮದುವೆ ಮಾಡಿಕೊಳ್ತೀನಿ ಅಂತ ಒಪ್ಪಿಕೊಂಡ್ರು, ಐಯಾಮ್ ನಾಟ್ ರೆಡಿ. ಅವಳನ್ನ ನಾನು ಮದುವೆ ಆಗೋಲ್ಲ.''

''ಫೈನಲ್ ಆಗಿ ನೀನು ಏನು ಹೇಳ್ತೀಯ ಬಾಬು ದಿನಕರ್. ಯಾಕೆ ಅಂದ್ರೆ, ರೋಹನ್ ಕಿಡ್ನಾಪ್ ಆಗಿದ್ದಾನೆ.'

''ಸಾರ್... ಮಂದಾರ್ ಮಾಲಳ ಕಾರಣದಿಂದ ರೋಹನ್ ರೈವಲ್ ಆಗಿದ್ದ. ಅವನ ಮೇಲೆ ದ್ವೇಷ ಸಾಧಿಸಿದ್ದೆ. ಈ ಮನ್ಮಥ ಬದುಕಿದ್ದರೆ ಆ ಶ್ರೀಮಂತ ಕುಟುಂಬದ ಚೆಲುವೆ ನನಗೆ ಒಲಿಯೋಲ್ಲ ಅಂತ ಅವನಿಗೇನಾದರೂ ಮಾಡಬೇಕು ಅಂತ ಅಂದುಕೊಂಡಿದ್ದೆ'' ಎಂದು ಹೇಳಿ ಪೊಲೀಸ್ ಅಧಿಕಾರಿಯ ಹತ್ತಿರ ಬಂದು ಶೀತಲ ಧ್ವನಿಯಲ್ಲಿ ''ಸಾರ್... ಆ ಮಂದಾರ ಮಾಲ ಸರಿ ಇಲ್ಲ. ಅವಳು ಸೌಂದರ್ಯ ಸರ್ಪ. ಅವಳು ಅಂತಿಮವಾಗಿ ಹೇಳಿದ್ದ ಆ ವಾಕ್ಯವನ್ನು ಹೇಳಿ ನನ್ನ ಹೇಳಿಕೆನ ಮುಗಿಸುತ್ತೀನಿ.''

''ಅವಳು ಏನು ಹೇಳಿದ್ಲು?''

''ಬಾಬು... ನಿನಗೂ ಸಹ ಅವಕಾಶ ಕೊಡ್ತೀನಿ ಎಂದು ಕಣ್ಣು ಮಿಟುಗಿಸಿ ನಗಾಡಿದಳು. ಏ... ನಿನಗೆ ಅರ್ಥವಾಗಿದೆ ಅಲ್ವ ಅಂತ ಹೇಳಿ ಏನೋ ಒಂದು ರೀತಿ ನಗಾಡಿದ್ದಳು. ಅವಳು ನಿಜವಾಗಿ ರೋಹನ್‌ನನ್ನು ಲವ್ ಮಾಡಿದ್ರೆ ಈ ರೀತಿ ಮಾತಾಡುತ್ತಿರಲಿಲ್ಲ. ಸಾರ್ ನೀವು ತನಿಖೆ ಮಾಡಿ ರಹಸ್ಯ ಪತ್ತೆ ಮಾಡಿ. ನಾನೇನು ಈ ದೇಶ ಬಿಟ್ಟು ಎಲ್ಲಿಗೂ ಹೋಗಲ್ಲ. ನನ್ನ ಅಗತ್ಯ ಕಂಡು ಬಂದರೆ ಫೋನ್ ಮಾಡಿ. ನೀವು ಕರೆದಾಗ ಬಂದು ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡ್ತೀನಿ'' ಎಂದು ಹೇಳಿದಾಗ ಪೊಲೀಸ್ ಅಧಿಕಾರಿ ಎದ್ದು ನಿಂತನು.

ಅವನಿಗೆ ಮತ್ತೊಮ್ಮೆ ಎಚ್ಚರಿಕೆ ನೀಡಿ ಅಲ್ಲಿಂದ ಹೊರ ಬಂದನು.

●●●

ಪೊಲೀಸರಿಗೆ ಫೋನ್ ಕಾಲ್ ಬಂದಿತು. ನಗರದ ಹೊರವಲಯದಲ್ಲಿರುವ ಬೇವಿನ ಗುಡ್ಡದ ತಪ್ಪಲಿನಲ್ಲಿ ಡೆಡ್‌ಬಾಡಿ ಬಿದ್ದಿದೆ. ಪ್ರಾಯದ ಯುವಕನನ್ನು ಯಾರೋ ಗುಡ್ಡದಿಂದ ತಳ್ಳಿದ್ದಾರೆ.

ಇದು ಕೊಲೆ... ಕೊಲೆ ಸಾರ್! ಪೊಲೀಸ್ ಅಧಿಕಾರಿ ಶ್ರೀರಂಗನ್ ಡಾಕ್ಟರ್ರು, ಫೋಟೋಗ್ರಾಫರ್ ಮತ್ತು ಫಿಂಗರ್ ಪ್ರಿಂಟ್‌ನವರಿಗೆ ಫೋನ್ ಮಾಡಿದನು ಮತ್ತು ಸರ್ಕಾರಿ ಆಸ್ಪತ್ರೆ ಡಾಕ್ಟರ್‌ಗೆ ಸುದ್ದಿ ತಿಳಿಸಲಾಯಿತು.

ನಗರದ ಹೊರವಲಯದ 'ಕಂಪಿಲಾಪುರ ಎಂಬ ಗ್ರಾಮದಲ್ಲಿ ಕೊಲೆ ನಡೆದಿದೆ.

ಶವ ಬೋರಲಾಗಿ ಬಿದ್ದಿದೆ.

ತಲೆಗೆ ಬಲವಾಗಿ ಪೆಟ್ಟು ಬಿದ್ದಿದೆ.

ಫೋಟೋಗ್ರಾಫರ್ ಶವ ಬಿದ್ದಿದ್ದ ಭಂಗಿಯ ಫೋಟೋ ತೆಗೆದನು. ಪಿ.ಸಿ.ಗಳು ಡೆಡ್‌ಬಾಡಿ ಸುತ್ತಲು ಬಿಳಿಯ ಬಣ್ಣದ ಪುಡಿಯಿಂದ ಮಾರ್ಕ್ ಮಾಡಿದರು ಮತ್ತು ಟೇಪ್ ಹಿಡಿದು ಅಳತೆ ಮಾಡಿದರು.

ಡಾಕ್ಟರ್ ಶವಪರೀಕ್ಷೆ ಮಾಡಿದ ನಂತರ ''ಸಾಯುವ ಮೊದಲು ಡ್ರಿಂಕ್ಸ್ ಸೇವನೆ ಆಗಿದೆ ಮತ್ತು ಲೈಂಗಿಕ ಕ್ರಿಯೆ ನಡೆಸಲಾಗಿದೆ. ರಾತ್ರಿ ಎಂಟರಿಂದ ಒಂಭತ್ತರ ಒಳಗೆ ಸಾವು ಸಂಭವಿಸಿದೆ ಇನ್‌ಸ್ಪೆಕ್ಟರ್'' ಎಂದರು.

ಮೃತ ವ್ಯಕ್ತಿ ರೋಹನ್ ಎಂಬುದು ತಿಳಿದ ಕೂಡಲೇ ತಂದೆ ಗೋಪಾಲಯ್ಯ ಮೇಸ್ತ್ರಿಗೆ ಫೋನ್ ಮಾಡಿದ್ದರು.

ಡಾಕ್ಟರ್ ''ಮತ್ತೊಂದು ಸಂಗತಿ ತಿಳಿಸಬೇಕು. ಸಾಯುವ ಮೊದಲು ಲೈಂಗಿಕ ಚಟುವಟಿಕೆ ನಡೆದಿದೆ. ಮದ್ಯಪಾನ ಸೇವನೆ ಆಗಿದೆ'' ಎಂದು ಹೇಳಿದರು.

ಪೊಲೀಸ್ ಅಧಿಕಾರಿ ಶ್ರೀರಂಗನ್ ಆ ಡೆಡ್ ಬಾಡಿಯ ಪೋಸ್ಟ್‌ಮಾರ್ಟಮ್ ಮುಗಿಸಿದ ನಂತರ, ಪಿ.ಸಿ.ಗಳಿಗೆ ಏನು ಮಾಡಬೇಕೆಂದು ಸೂಚನೆ ನೀಡಿದ ನಂತರ ಬೇವಿನ ಗುಡ್ಡದ ಕಡೆ ಹೊರಟನು. ಎತ್ತರದ ಆ ಗುಡ್ಡ ಹತ್ತುತ್ತಿದ್ದಾನೆ.

ಡೆಡ್‌ಬಾಡಿಯನ್ನು ಪೋಸ್ಟ್‌ಮಾರ್ಟಮ್ ಮಾಡಲು ಕಳಿಸಲಾಯಿತು. ಗೋಪಾಲಯ್ಯ, ಅವರ ಪತ್ನಿ ಮಗನ ಸಾವಿನಿಂದ ದುಃಖಿತರಾಗಿ ಗೋಳಾಡುತ್ತಿದ್ದಾರೆ.

ಬೇವಿನಗುಡ್ಡ...! ಪ್ರಕೃತಿ ಸೌಂದರ್ಯ ರಮಣೀಯವಾಗಿರುವ ಆ ಪ್ರದೇಶದಲ್ಲಿ ತಿರುಗಾಡಿದನು. ಗುಡ್ಡದಲ್ಲಿರುವ ಕಲ್ಲಿನ ಮಂಟಪದಲ್ಲಿ ಕಂಡು ಬಂದಿತು ದೃಶ್ಯ!

ಚಿತ್ತಾಕರ್ಷಕ ಬಣ್ಣದ ಕಾರ್ಪೆಟ್ ಹಾಕಲಾಗಿದೆ. ಅದರ ಮೇಲೆ ಎರಡು ದಿಂಬುಗಳು ಮತ್ತು ಬೆಡ್‌ಶೀಟ್ ಇದೆ. ಮತ್ತೊಂದು ಕಡೆ ಚಾರ್ಜಬಲ್ ಲೈಟ್ ಮತ್ತು ವಿಸ್ಕಿ ಸೀಸೆ, ತಂಪು ಪಾನೀಯದ ಸೀಸೆ ಮತ್ತು ವಿವಿಧ ರೀತಿಯ ತಿನಿಸುಗಳಿವೆ.

ಅರ್ಧ ಗಂಟೆ ಕಳೆಯಿತು.

ಈ ಪೊಲೀಸ್ ಅಧಿಕಾರಿಯ ಸೂಕ್ಷ್ಮ ದೃಷ್ಟಿಗೆ ಕೊಲೆಗೆ ಸುಳಿವು ನೀಡಬಲ್ಲ ಮತ್ತು ಕೊಲೆ ಮಾಡಿರುವ ವ್ಯಕ್ತಿಯನ್ನು ಗುರುತಿಸಬಲ್ಲಂತ ಸಾಕ್ಷಿ, ಆಧಾರ ದೊರಕಿದೆ.

●●●

ಶ್ರೀಮಂತ ಉದ್ಯಮಿ ರಾಜೇಂದ್ರ ವರ್ಮ ಅವರ ಬಂಗಲೆಗೆ ಬಂದನು ಪೊಲೀಸ್ ಅಧಿಕಾರಿ. ''ಮಂದಾರ ಮಾಲ ನೆನ್ನೆರಾತ್ರಿ ನೀನು ರೋಹನ್ ಜೊತೆ ಬೇವಿನ ಗುಡ್ಡದಲ್ಲಿ ಇದ್ದದ್ದು ನಿಜ ಎಂಬುದಕ್ಕೆ ಸಾಕ್ಷಿ, ಆಧಾರ ದೊರೆತಿದೆ'' ಎಂದು ಹೇಳಿ ಆಕೆಗೆ ಸಂಬಂಧ ಪಡುವ ವಸ್ತುಗಳನ್ನು ತೋರಿಸಿದನು.

ಮೊಬೈಲ್ ಫೋನ್. ಲಾಕೆಟ್ ಇರುವ ಸರ.

ಮೊಬೈಲ್ ಫೋನ್‌ನಿಂದ ಕಾಲ್ ಡೀಟೈಲ್ಸ್ ಚೆಕ್ ಮಾಡಲಾಗಿದೆ. ಕೊಲೆ ನಡೆದಿದ್ದ ದಿವಸ ರೋಹನ್‌ಗೆ ಕಾಲ್ ಮಾಡಿದ್ದಾಳೆ. ಅವನಿಂದ ಫೋನ್ ಕಾಲ್ ಬಂದಿದೆ.

ಪಿ.ಸಿ.ಗಳಲ್ಲಿ ಒಬ್ಬರು ಬಂದು ಅವಳ ಬೆರಳು ಗುರುತು ಪಡೆದು ಫಿಂಗರ್ ಪ್ರಿಂಟ್ ತಜ್ಞರಿಗೆ ಕಳಿಸಿದರು.

ಅರ್ಧ ಗಂಟೆ ಕಳೆಯಿತು. ಫಿಂಗರ್ ಪ್ರಿಂಟ್ ವರದಿ ಬಂದಿತು. ವಿಸ್ಕಿ ಸೀಸೆ, ಗ್ಲಾಸ್‌ಗಳು, ತಂಪು ಪಾನೀಯದ ಸೀಸೆಗಳ ಮೇಲೆ ಮಂದಾರ ಮಾಲಳ ಬೆರಳು ಗುರುತುಗಳು ಮೂಡಿವೆ ಎಂಬುದು ಖಚಿತವಾಗಿದೆ.

ಮಂದಾರ ಮಾಲ ಹೇಳಿಕೆ ಏನು? ರೋಹನ್ ಮೇಲೆ ವಿಪರೀತ ಕಾಮದ ಕ್ರೇಜ್ ಇತ್ತು. ಆದರೆ ಅವನನ್ನು ಮದುವೆ ಆಗಲು ಇಷ್ಟ ಇರಲಿಲ್ಲ. ರಾಜ್ಯದ ಪ್ರಭಾವಶಾಲಿ ಶ್ರೀಮಂತ ಮಗನ ಜೊತೆ ಮದುವೆ ಫಿಕ್ಸ್ ಆಗಿತ್ತು. ರೋಹನ್ ಬದುಕಿದ್ದರೆ ಸಮಸ್ಯೆ ಅಂತ ಆಸೆ ತೀರಿಸಿಕೊಂಡು ಕೊಲೆ ಮಾಡಿದ್ದಳು. ☯

---


7 ☞

ಪಡೆದುಕೊಂಡು ಕ್ರೈಂ ನಂ. 204/2023 ಕಲಂ 276(1) 376(2)(ಎನ್) 45, 506 ಐಪಿಸಿಯಂತೆ ಕಲಂ 4, 6 ಪೋಕ್ಸೋ ಕಾಯ್ದೆ2012ರಂತೆ ಪ್ರಕರಣ ದಾಖಲಿಸಿಕೊಳ್ಳಲು ಠಾಣಾಧಿಕಾರಿಗೆ ಸೂಕ್ತ ನಿರ್ದೇಶನ ನೀಡಿದರು. ಅಪ್ರಾಪ್ತೆಯ ಮೇಲೆ ಬಲವಂತವಾಗಿ ರೇಪ್ ಮಾಡಿ ಆಕೆಗೊಂದು ಹೆಣ್ಣುಮಗು ಕರುಣಿಸಿದ್ದ ಕಾಮುಕ ವೈಭವ ಕಾಂಬಳೆಯ ಪ್ರಕರಣದಲ್ಲಿ ಗೋಕಾಕದ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಅಂದಿನ ಹೆಚ್ಚುವರಿ ಎಸ್ಪಿ ವೇಣು ಗೋಪಾಲ್, ಎಸ್ಪಿಡಾ. ಭೀಮಾಶಂಕರ ಗುಳೇದ ಅವರೊಡನೆ ಸಮಾಲೋಚಿಸಿ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡರು. ಪರಾರಿಯಾಗಿದ್ದ ಕಾಮುಕ ವೈಭವ ಕಾಂಬಳೆಯನ್ನು ಅಂದಿನ ಪಿಎಸ್ಐ ರಾಜು ಮಮದಾಪೂರ, ಸಿಬ್ಬಂದಿಗಳಾದ ಮಹಿಬೂಬ ದಾದಾ ಮಲಿಕ್, ಸಂಜಯ ಕುದುರೆ ಮತ್ತಿತರರ ನೆರವಿನಿಂದ ವಶಕ್ಕೆ ತೆಗೆದುಕೊಂಡು ವಿಚಾರಣೆ ಕೈಗೊಂಡರು. ವಿಚಾರಣೆ ಕಾಲಕ್ಕೆ ವೈಭವ ಕಾಂಬಳೆ ತನ್ನ ತನ್ನ ಕೃತ್ಯ ಒಪ್ಪಿಕೊಂಡನು. ಆತನ ಹೇಳಿಕೆ ಮತ್ತು ಅಪ್ರಾಪ್ತೆಯ ಹೇಳಿಕೆ ಪಡೆದುಕೊಂಡು ಮಹಜರು ಮಾಡಲಾಯಿತು. ಪ್ರಕರಣದಲ್ಲಿ 3 ಮುದ್ದೆ ಮಾಲುಗಳು 25 ಜನ ಸಾಕ್ಷಿಗಳ ಹೇಳಿಕೆ ಪಡೆದುಕೊಂಡು ಪ್ರಬಲವಾದ ದೋಷಾರೋಪಣೆ ಪತ್ರವನ್ನು ತಯಾರಿಸಿ ವಿಶೇಷ ಶೀಘ್ರಗತಿಯ ಪೋಕ್ಸೋ ನ್ಯಾಯಾಲಯ ಬೆಳಗಾವಿಗೆ ಸಲ್ಲಿಸುವಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಶಿವಶರಣ ಅವಜಿ ಮತ್ತು ಸಿಬ್ಬಂದಿಗಳು ಯಶಸ್ವಿಯಾದರು.

**20 ವರ್ಷ ಜೈಲು**

**10 ಸಾವಿರ ರೂ. ದಂಡ...**

ಕಾಮುಕ ವೈಭವ ಕಾಂಬಳೆ ಜಾಮೀನಿಲ್ಲದ ಪ್ರಕರಣದಲ್ಲಿ ಜೈಲು ಸೇರಿ ಆಗಸ್ಟ್2023ರಿಂದ ಕಂಬಿ ಎಣಿಸುತ್ತಿದ್ದಾನೆ. ಇದೀಗ ಆತನು ಬಲವಂತವಾಗಿ ರೇಪ್ ಮಾಡಿ ಅಪ್ರಾಪ್ತೆಗೆ ಹೆಣ್ಣು ಮಗು ಆಗುವಂತೆ ಮಾಡಿದ ಕೃತ್ಯ ಬೆಳಗಾವಿಯ ವಿಶೇಷ ಶೀಘ್ರಗತಿಯ ಪೋಕ್ಸೋ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಿತು. ಸರಕಾರದ ಪಕ್ಷದಿಂದ ವಿಶೇಷ ಸರಕಾರಿ ಅಭಿಯೋಜಕರಾದ ಶ್ರೀ ಎಲ್.ವ್ಹಿ. ಪಾಟೀಲ ಸಮರ್ಥವಾಗಿ ವಾದ ಮಂಡಿಸಿದರು. ನ್ಯಾಯಾಧೀಶರಾದ ಶ್ರೀಮತಿ ಎಂ. ಪುಷ್ಪಲತಾ ಅವರು ಎರಡು ಕಡೆಯ ವಾದ-ವಿವಾದ ಆಲಿಸಿ ಮುದ್ದೆ ಮಾಲುಗಳ ಪರಿಶೀಲನೆ, ಸಾಕ್ಷಿಗಳ ಹೇಳಿಕೆ ಆಧರಿಸಿ ಕಾಮುಕ ವೈಭವನಿಗೆ 20 ವರ್ಷ ಜೈಲುಶಿಕ್ಷೆ ಮತ್ತು 10 ಸಾವಿರ ರೂ.ಗಳ ದಂಡ ವಿಧಿಸಿ ಮಹತ್ವದ ತೀರ್ಪು ನೀಡಿದ್ದಾರೆ. ಈ ತೀರ್ಪು ಅತ್ಯಾಚಾರ ಮಾಡುವ ಕ್ರಿಮಿನಲ್‌ಗಳಿಗೊಂದು ಎಚ್ಚರಿಕೆಯ ಗಂಟೆಯಾಗಿದೆ.


ಹೆಡ್ ಮಹಿಬೂಬ್ ದಾದಾ ಮಲಿಕ್

ರೇಪ್‌ಗೊಳಗಾದ ಸಂತ್ರಸ್ತೆಗೆ 50 ಸಾವಿರ ರೂ.ಗಳ ಪರಿಹಾರ, ಅವಳಿಗೆ ಜನಿಸಿದ ಹೆಣ್ಣು ಮಗುವಿಗೆ 1 ಲಕ್ಷ ರೂ.ಗಳ ಪರಿಹಾರವನ್ನು ಸರಕಾರದಿಂದ ಕೊಡಲು ನ್ಯಾಯಾಧೀಶರು ಆದೇಶಿಸಿದ್ದಾರೆ. ಅಪ್ರಾಪ್ತೆಗೆ ಜನಿಸಿದ ಹೆಣ್ಣು ಮಗುವಿಗೆ 18 ವರ್ಷವಾಗುವತನಕ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಮಾಡಬೇಕೆಂದು ತಿಳಿಸಿದ್ದಾರೆ. ಇದೊಂದು ಅತ್ಯುತ್ತಮ ತೀರ್ಪು ಎಂದು ಪ್ರಜ್ಞಾವಂತ ನಾಗರೀಕರು ಬಣ್ಣಿಸುತ್ತಿದ್ದಾರೆ.

**ಶ್ಲಾಘನೆ...**

ಅಪ್ರಾಪ್ತೆಯನ್ನು ನಂಬಿಸಿ ಬಲವಂತವಾಗಿ ರೇಪ್ ಮಾಡಿ ಆಕೆಗೊಂದು ಹೆಣ್ಣುಮಗು ಕರುಣಿಸಿದ ಕಾಮುಕನಿಗೆ ಅತ್ಯಂತ ಗರಿಷ್ಠ ಶಿಕ್ಷೆ ವಿಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಶಿವಶರಣ ಅವಜಿ ಮತ್ತು ಸಿಬ್ಬಂದಿಗಳ ಶ್ರಮವನ್ನು ಎಸ್ಪಿಡಾ. ಭೀಮಾಶಂಕರ ಗುಳೇದ, ಈಗಿನ ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ಆರ್.ಬಿ. ಬಸರಗಿ, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಸೇರಿದಂತೆ ಅನೇಕ ಪ್ರಜ್ಞಾವಂತರು ಶ್ಲಾಘಿಸಿದ್ದಾರೆ. ☯

# ‘ಮಠ’, ‘ಎದ್ದೇಳು ಮಂಜುನಾಥ’ ಸಿನಿಮಾ ನಿರ್ದೇಶಕ ಗುರುಪ್ರಸಾದ್ ಆತ್ಮಹತ್ಯೆ!



ಕನ್ನಡದ ಖ್ಯಾತ ನಿರ್ದೇಶಕ ‘ಮಠ’ ಹಾಗೂ ‘ಎದ್ದೇಳು ಮಂಜುನಾಥ’ ಸಿನಿಮಾವನ್ನು ನಿರ್ದೇಶಿಸಿದ್ದ ಗುರುಪ್ರಸಾದ್ ಆತ್ಮಹತ್ಯೆಗೆ ಶರಣಾಗಿದ್ದಾರೆ. ಕನ್ನಡದ ಡೇರಿಂಗ್ ಡೈರೆಕ್ಟರ್ ಅಂತಲೇ ಜನಪ್ರಿಯತೆ ಪಡೆದುಕೊಂಡಿದ್ದ ಗುರುಪ್ರಸಾದ್ ದುಡುಕಿನ ನಿರ್ಧಾರ ತೆಗೆದುಕೊಂಡಿದ್ದಾರೆ. ಗುರುಪ್ರಸಾದ್ ಅವರ ಶವ ಅಪಾರ್ಟ್‌ಮೆಂಟ್ ಒಂದರಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಗುರುಪ್ರಸಾದ್ ಯಾವ ಕಾರಣಕ್ಕೆ ಇಂತಹ ದುಡುಕಿನ ನಿರ್ಧಾರ ತೆಗೆದುಕೊಂಡಿದ್ದಾರೆ ಅನ್ನೋ ಬಗ್ಗೆ ಖಚಿತ ಮಾಹಿತ ಇಲ್ಲ, ಮೂಲಗಳ ಪ್ರಕಾರ ಗುರುಪ್ರಸಾದ್ ಸಾಲದ ಸುಳಿಗೆ ಸಿಲುಕಿದ್ದರು ಎನ್ನಲಾಗಿದೆ. ಸಾಲಗಾರರ ಕಾಟಕ್ಕೆ ತಡೆಯಲಾಗದೆ ಈ ನಿರ್ಧಾರಕ್ಕೆ ಬಂದಿದ್ದಾರೆ ಅನ್ನೋ ಮಾಹಿತಿ ಹೊರಬಿದ್ದಿದ್ದೆ. ಆದರೆ ಇವರ ಆತ್ಮಹತ್ಯೆ ಬಗ್ಗೆ ಖಚಿತ ಮಾಹಿತಿ ಇಲ್ಲ.

ಗುರುಪ್ರಸಾದ್ ಕನ್ನಡ ಚಿತ್ರರಂಗದ ಪ್ರತಿಭಾವಂತ ನಿರ್ದೇಶಕ ಹಾಗೂ ನಟ. ಇದೂವರೆಗೂ 5 ಕನ್ನಡ ಚಿತ್ರಗಳನ್ನು ಗುರುಪ್ರಸಾದ್ ನಿರ್ದೇಶನ ಮಾಡಿದ್ದಾರೆ. ಅದರಲ್ಲೂ ಗುರು ಪ್ರಸಾದ್ ನಿರ್ದೇಶಿಸಿದ ‘ಮಠ’ ಸಿನಿಮಾ ಸ್ಯಾಂಡಲ್‌ವುಡ್ ಕಲ್ಟ್ ಸಿನಿಮಾಗಳಲ್ಲಿ ಒಂದಾಗಿದೆ. ಇದರ ಹಿಂದೆನೇ ಗುರುಪ್ರಸಾದ್ ‘ಎದ್ದೇಳು ಮಂಜುನಾಥ’ ಸಿನಿಮಾ ನಿರ್ದೇಶಿಸಿದ್ದರು. ಆ ಸಿನಿಮಾ ಕೂಡ ದೊಡ್ಡ ಮಟ್ಟಕ್ಕೆ ಸದ್ದು ಮಾಡಿತ್ತು.

ಗುರುಪ್ರಸಾದ್ ಬರವಣಿಗೆ ಬಗ್ಗೆ ಕನ್ನಡ ಚಿತ್ರರಂಗದಲ್ಲಿ ಒಳ್ಳೆಯ ಅಭಿಪ್ರಾಯವಿತ್ತು. ಗುರುಪ್ರಸಾದ್ ಸಿನಿಮಾಗಳಿಗೆ ಬರವಣಿಗೆ ಬರೆಯುತ್ತಿದ್ದಾರೆ ಅಂದರೆ ಅಲ್ಲೊಂದು ನಿರೀಕ್ಷೆಯಿರುತ್ತಿತ್ತು. ಗುರುಪ್ರಸಾದ್ ಸಿನಿಮಾಗಳಿಗಷ್ಟೇ ಅಲ್ಲ, ರಿಯಾಲಿಟಿ ಶೋಗಳಿಗೂ ಕೂಡ ಬರವಣಿಗೆ ಬರೆದಿದ್ದರು. ಆ ಶೋಗಳು ಕೂಡ ಸೂಪರ್ ಹಿಟ್ ಆಗಿತ್ತು. ಇಂತಹ ಅಪ್ರತಿಮ ನಿರ್ದೇಶಕ ಆತ್ಮಹತ್ಯೆಗೆ ಶರಣಾಗಿದ್ದು ಚಿತ್ರರಂಗಕ್ಕೆ ಅಘಾತವಾಗಿದೆ.

ಕನ್ನಡದ ನಿರ್ದೇಶಕ ಗುರುಪ್ರಸಾದ್ ಯಾಕೆ ಇಂತಹ ನಿರ್ಧಾರಕ್ಕೆ ಬಂದರು ಎಂಬ ಆತಂಕದಲ್ಲಿ ಚಿತ್ರರಂಗವಿದೆ. ಗುರುಪ್ರಸಾದ್ ಬೆಂಗಳೂರಿನ ಮಾದನಾಯಕನಹಳ್ಳಿ ಸಮೀಪ ಅಪಾರ್ಟ್‌ಮೆಂಟ್ ಒಂದರಲ್ಲಿ ವಾಸವಿದ್ದರು ಎನ್ನಲಾಗಿದೆ. ಕಳೆದ ಕೆಲವು ತಿಂಗಳಿನಿಂದ ನಿರಂತರವಾಗಿ ಸಾಲದ ಸುಳಿಗೆ ಸಿಲುಕಿಗೆ ಅಪಾರ್ಟ್‌ಮೆಂಟ್‌ಗಳನ್ನು ಬದಲಾಯಿಸಿದ್ದರು. ಅಲ್ಲೂ ಸಾಲಗಾರರ



ಕಾಟ ತಪ್ಪಲಿಲ್ಲ ಎಂದು ಹೇಳಲಾಗುತ್ತಿದೆ.

ಗುರುಪ್ರಸಾದ್ ಅವರ ವೃತ್ತಿ ಜೀವನ ಕೂಡ ಚೆನ್ನಾಗಿರಲಿಲ್ಲ, ಅದರಲ್ಲೂ ನವರಸ ನಾಯಕ ಜಗ್ಗೇಶ್ ಅವರಿಗೆ ನಿರ್ದೇಶಿಸಿದ ‘ರಂಗನಾಯಕ’ ಸಿನಿಮಾ ಕೂಡ ಸೋತಿತ್ತು. ಈ ಹಿನ್ನೆಲೆಯಲ್ಲಿ ಗುರುಪ್ರಸಾದ್‌ಗೆ ಸಿನಿಮಾಗಳಲ್ಲಿ ಅವಕಾಶ ಇರಲಿಲ್ಲ, ಅಲ್ಲದೇ ಸಿನಿಮಾ ಸೋತಿದ್ದರ ಜೊತೆಗೆ ಸಾಲ ಕೂಡ ಮಾಡಿಕೊಂಡಿದ್ದರು ಎನ್ನಲಾಗಿದೆ. ಇವರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾರಣ ಸಾಲವೇ ಇರಬಹುದು ಎಂದು ಊಹಿಸಲಾಗಿದೆ.

ಇನ್ನೊಂದು ಕಡೆ ಸಾಲ ಹಾಗೂ ಸೋಲಿನ ಸುಳಿಗೆ ಸಿಲುಕಿದ್ದ ಗುರುಪ್ರಸಾದ ಇತ್ತೀಚೆಗೆ ಕುಡಿತಕ್ಕೆ ದಾಸರಾಗಿದ್ದರು ಎನ್ನಲಾಗಿದೆ. ಹಾಗೇ ಅವರ ವೈವಾಹಿಕ ಜೀವನ ಕೂಡ ಚೆನ್ನಾಗಿರಲಿಲ್ಲ ಎನ್ನಲಾಗಿದೆ, ಮೊದಲನೇ ಮದುವೆ ಮುರಿದು ಬಿದ್ದಿತ್ತು. ಇತ್ತೀಚೆಗೆ ಎರಡನೇ ಮದುವೆ ಕೂಡ ಆಗಿದ್ದರು. ಎರಡನೇ ಮದುವೆ ಆದ ಬಳಿಕವೂ ದಾಂಪತ್ಯದಲ್ಲಿ ಒಡಕು ಮೂಡಿತ್ತು ಎಂದು ಹೇಳಲಾಗುತ್ತಿದೆ.



**ಗುರುಪ್ರಸಾದ್ ಪತ್ನಿ ಸುಮಿತ್ರಾ ಪೊಲೀಸ್ ಠಾಣೆಗೆ ದೂರು**

ನಿರ್ದೇಶಕ ಗುರುಪ್ರಸಾದ್ ಅವರ ಪತ್ನಿ ಸುಮಿತ್ರಾ ಅವರು ಗಂಡನ ಸಾವಿನ ಬಗ್ಗೆ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸಾವಿಗೆ ಕಾರಣವೇನೆಂದು ತನಿಖೆ ಮಾಡಲು ಮನವಿ ಮಾಡಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲೂಕಿನ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವ ಅವರು, ಮದುವೆಯಾದ ಹಿನ್ನೆಲೆ, ತಮ್ಮ ಕೊನೆಯ ಭೇಟಿ ಮತ್ತು ಸಂಪರ್ಕ ಮಾಡಿದ್ದ ವಿವರನ್ನೂ ದಾಖಲಿಸಿದ್ದಾರೆ. ನನ್ನ ಯಜಮಾನರಿಗೆ ಸಾಲ ಮಾಡಿಕೊಳ್ಳಬೇಡಿ ಎಂದು ಹೇಳಿದ್ದೆ. ಆದರೂ ಸಾಲ ಮಾಡಿಕೊಂಡಿದ್ದಾರೆ. ಮುಂದುವರೆದು ನನ್ನ ಗಂಡನ ಆತ್ಮಹತ್ಯೆಗೆ ಶರಣಾಗಿರುವುದರಲ್ಲಿ ಯಾವುದೇ ಅನುಮಾನವಿಲ್ಲ, ಆದರೆ, ಸಾವಿಗೆ ಕಾರಣ ಏನೆಂದು ತನಿಖೆ ಮಾಡಬೇಕು ಎಂದು ದೂರಿನಲ್ಲು ಉಲ್ಲೇಖ ಮಾಡಿದ್ದಾರೆ.

ನಾನು ಕಳೆದ 4 ವರ್ಷದ ಹಿಂದೆ 2020 ರಲ್ಲಿ ನಿರ್ದೇಶಕ ಗುರುಪ್ರಸಾದ್ ಅವರನ್ನು ಮದುವೆಯಾಗಿದ್ದೆ. ನನಗೆ ಒಂದು ಹೆಣ್ಣು ಮಗುವಿದೆ. ಈ ಹಿಂದೆ ಗುರುಪ್ರಸಾದ್ ಅವರಿಗೆ ಆರತಿ ಎಂಬುವವರ ಜೊತೆಗೆ ಮದುವೆಯಾಗಿತ್ತು. ಸದರಿ ಅವರೊಂದಿಗಿನ ಮದುವೆ ವಿಚ್ಚೇದನವಾಗಿರುತ್ತದೆ. ಅವರು ಚಲನಚಿತ್ರ ನಿರ್ದೇಶಕರಗಿದ್ದರಿಂದ ನಾನು ಮದುವೆಯಾದೆ. ನಾಲ್ಕು ವರ್ಷ ಜೊತೆಗೆ ಇದ್ದೆವು. ಸಣ್ಣ ಪುಟ್ಟ ವಿಚಾರಗಳಿಂದ ಜಗಳ ಆಗಿ 6 ತಿಂಗಳಿಂದ ದೂರವಾಗಿದ್ದೆವು. ನನಗೆ ಆರೋಗ್ಯ ಸರಿ ಇರಲಿಲ್ಲ, ಅ ಕಾರಣದಿಂದಾಗಿ ನಮ್ಮ ಯಜಮಾನರು (ಗುರುಪ್ರಸಾದ್) ನನ್ನ ತಾಯಿಯ ಮನೆಯಲ್ಲಿ ಇರಲು ಹೇಳಿದ್ದರು.

ನಾವು ಕಳೆದ 6 ತಿಂಗಳ ಹಿಂದೆ ಹುಸ್ಕೂರಿನ ನ್ಯೂ ಅವೆನ್ ಅಪಾರ್ಟ್ಮೆಂಟ್ ಗೆ ಬಂದಿದ್ದೆವು. ಟವರ್ ನಂ 27ರ ನಲ್ಲಿರುವ ಮನೆ ನಂ 11 ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ವಾಸವಿದ್ದೆವು. ನನಗೆ ಹುಷಾರಿಲ್ಲದ ಕಾರಣ ಯಜಮಾನರು ನನ್ನನ್ನ ತಾಯಿಯ ಮನೆಯಲ್ಲಿ ಇರಲು ಹೇಳಿ ಕಳಿಸಿಕೊಟ್ಟಿದ್ದರು. ನಾವು ಲೋಕಸಭಾ ಚುನಾವಣೆಯಲ್ಲಿ ಕೊನೆಯ ಬಾರಿ ಸಿಕ್ಕಿದ್ದೆವು. ನಮ್ಮ ಯಜಮಾನರನ್ನ ಚಲನಚಿತ್ರದ ಕೆಲಸದಲ್ಲಿ ಬ್ಯುಸಿಯಾಗಿದ್ದರಿಂದ ದೂರವಾಣಿ ಮೂಲಕ ಸಂಪರ್ಕದಲ್ಲಿದ್ದೆವು. ದಿನಾಂಕ 25-10-2024 ರಂದು ನನ್ನ ಯಜಮಾನರನ್ನು ಸಂಪರ್ಕ ಮಾಡಲು ಪ್ರಯತ್ನಿಸಿದ್ದು ಅವರು ಕರೆಯನ್ನು ಸ್ವೀಕರಿಸಲಿಲ್ಲ, ಅವರು ಕರೆಯನ್ನು ಸ್ವೀಕರಿಸದಿದ್ದಾಗ ಬ್ಯುಸಿ ಇದ್ದಾರೆ ಎಂದು ಸುಮ್ನೆ ಅದೆ.

ಇದಾದ ನಂತರ ಇಂದು ದಿನಾಂಕ 3-11-2024 ರಂದು ಬೆಳಗ್ಗೆ ಒಂದು ಗಂಟೆಗೆ ಅಪಾರ್ಟ್‌ಮೆಂಟ್ ನಿವಾಸಿ ಜಯರಾವ್ ಕರೆ ಮಾಡಿ ತಿಳಿಸಿದರು. ನಿಮ್ಮ ಮನೆಯ ಬಾಗಿಲ ಬಳಿ ದುರ್ವಾಸನೆ ಬರುತ್ತಾ ಇದೆ, ಮನೆಯ ಬಾಗಿಲ ಬಳಿ ಬಾಗಿಲು ತಟ್ಟಿದ್ದರು ಬಾಗಿಲು ತೆಗೆಯುತ್ತಿಲ್ಲ, ನಾನು ಗಾಬರಿಯಿಂದ ನಮ್ಮ ಕುಟುಂಬದವರಯ ಬಂದು ನೋಡಿದಾಗ ಮನೆಯ ಬಾಗಿಲು ಹಾಕಿತ್ತು. ಕಿಟಕಿಯಲ್ಲಿ ಬಗ್ಗಿ ನೋಡಿದರೆ ನಮ್ಮ ಯಜಮಾನರು ಆತ್ಮಹತ್ಯೆಗೆ ಶರಣಾಗಿದ್ದರು. ಪಕ್ಕ ಮನೆಯವರ ಸಹಾಯದಿಂದ ಹಾಗೂ ಪೋಲೀಸರ ನೆರವಿನೊಂದಿಗೆ ಬಾಗಿಲನ್ನು ಹೊಡೆದು ಒಳಗೆ ನೋಡಿದ್ದೇವೆ.

ನನ್ನ ಗಂಡ ಗುರುಪ್ರಸಾದ್ ನೇಣಿಗೆ ಶರಣಾಗಿದ್ದರು. ಸಿನಿಮಾ ವಿಚಾರದಲ್ಲಿ ಸಾಲ ಮಾಡಿಕೊಂಡಿದ್ದರು. ಈ ವಿಚಾರ ತಿಳಿಸಿದ್ದು ನಾನು ನಮ್ಮ ಯಜಮಾನರಿಗೆ ಸಾಲವನ್ನು ತೀರಿಸೋಣ ಎಂದು ಧೈರ್ಯ ಹೇಳುತ್ತಿದ್ದೆ. ಆದರೂ ನನ್ನ ಮಾತನ್ನು ಲೆಕ್ಕಿಸದೆ ನನ್ನ ಗಂಡ ಸಾಲದ ಬಾದೆಯಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು. ಜೀವನದಲ್ಲಿ ಜಿಗುಪ್ಸೆಗೊಂಡು 3-4 ದಿನಗಳ ಹಿಂದೆ ಯಾವುದೋ ಸಮಯದಲ್ಲಿ ಮನೆಯ ಬಾಗಿಲನ್ನು



ಒಳಗಡೆಯಿಂದ ಲಾಕ್ ಮಾಡಿಕೊಂಡು ನೂಲಿನ ಹಗ್ಗದಿಂದ ನೇಣಿಗೆ ಶರಣಾಗಿದ್ದಾರೆ. ಮಹಡಿಯ ಕಬ್ಬಿಣದ ಕೊಕ್ಕೆಗೆ ಕಟ್ಟಿಕೊಂಡು ಕುಣಿಕೆ ಮಾಡಿ ಕತ್ತನ್ನು ಜೇರಿಕೊಂಡು ಆತ್ಮಹತ್ಯೆ ಶರಣಾಗಿದ್ದಾರೆ. ನನ್ನ ಗಂಡನ ಸಾವಿನಲ್ಲಿ ಅನುಮಾನ ಇಲ್ಲ, ತಾವು ಸ್ಥಳಕ್ಕೆ ಬಂದು ಮುಂದಿನ ಕಾನೂನು ಕ್ರಮ ಕೈಗೊಳ್ಳಿ, ನೇಣು ಹಾಕೊಂಡಿರುವ ಬಗ್ಗೆ ನಿಖರವಾದ ಕಾರಣ ತನಿಖೆ ಮಾಡಬೇಕೆಂದು ದೂರು ನೀಡುತ್ತಿದ್ದೇನೆ ಎಂದು ಸುಮಿತ್ರಾ ಅವರು ಉಲ್ಲೇಖ ಮಾಡಿದ್ದಾರೆ.


## ವರದಿಗಾರರು ಬೇಕಾಗಿದ್ದಾರೆ

‘‘ಪೊಲೀಸ್ ನ್ಯೂಸ್’’ ಪತ್ರಿಕೆಯ ಕೇಂದ್ರ ಕಛೇರಿ ಬೆಂಗಳೂರಿನಲ್ಲಿ ವರದಿಗಾರರಾಗಿ ಕೆಲಸ ಮಾಡಲು ಇಚ್ಛಿಸುವವರು ತಮ್ಮ ಭಾವಚಿತ್ರ ಸಮೇತ ತಮ್ಮ ಬಗ್ಗೆ ವಿವರಿಸಿ ಮತ್ತು ಒಂದು ಸುದ್ದಿಯನ್ನು ಬರೆದು ಕಳುಹಿಸಿ ಕೊಡಿ.

**ವಿವರ ಕಳುಹಿಸುವ ವಿಧಾನ :**


8884452699

policenewsreporter@gmail.com

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ, ಬೆಂಗಳೂರು-560 079

080-23588510

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 03.11.2024



# 'ಸಾರಾಯಿ ಶಾಂತಮ್ಮ' ಹಾಡಿಗೆ ರಾಗಿಣಿ ಮಸ್ತ್ ಡ್ಯಾನ್ಸ್!

ಬಿಚ್ಚುಗತ್ತಿ ಸಿನಿಮಾ ಮೂಲಕ ಬಣ್ಣದ ಲೋಕಕ್ಕೆ ಎಂಟ್ರಿ ಕೊಟ್ಟಿರುವ ರಾಜವರ್ಧನ್ ಇತ್ತೀಚೆಗಷ್ಟೇ ತಮ್ಮ ಮೂರನೇ ಸಿನಿಮಾ ಗಜರಾಮ ರಿಲೀಸ್ ಗೆ ಸಜ್ಜಾಗುತ್ತಿದ್ದಾರೆ.

ಟೈಟಲ್ ಝಲಕ್ ಮೂಲಕ ಕುತೂಹಲ ಹೆಚ್ಚಿಸಿರುವ 'ಗಜರಾಮ' ಸಿನಿಮಾದ ಸ್ಪೆಷಲ್ ಸಾಂಗ್ ರಿಲೀಸ್ ಆಗಿದೆ. ಮೇಕಿಂಗ್ ಹಂತದಲ್ಲಿ ಟಾಕ್ ಕ್ರಿಯೇಟ್ ಮಾಡಿದ್ದ ಸಾರಾಯಿ ಶಾಂತಮ್ಮ ಹಾಡು ಈಗ ಆನಂದ್ ಆಡಿಯೋ ಯೂಟ್ಯೂಬ್‌ನಲ್ಲಿ ಅನಾವರಣಗೊಂಡಿದೆ. ಇತ್ತೀಚೆಗೆ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಸಾರಾಯಿ ಶಾಂತಮ್ಮ ಸಾಂಗ್ ರಿಲೀಸ್ ಆಗಿದೆ. ಸುನೀಲ್ ಕುಮಾರ್ ವಿ. ನಿರ್ದೇಶನದ ಸಿನಿಮಾ ಡಿಸೆಂಬರ್ 27ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

ಹಾಡು ಬಿಡುಗಡೆ ಬಳಿಕ ನಟ ರಾಜವರ್ಧನ್ ಮಾತನಾಡಿ, ಈ ಹಾಡಿಗಾಗಿ ತುಂಬಾ ಕಾಯುತ್ತಿದ್ದೆವು. ವಿಡಿಯೋ ಸಾಂಗ್ ತುಂಬಾ ಚೆನ್ನಾಗಿ ಮೂಡಿಬಂದಿದೆ. ಗಜರಾಮ ಸಿನಿಮಾ ಒಂದು ಕಡೆಯಾದರೆ, ಈ ಸಾಂಗ್ ಒಂದು ಕಡೆ. ಈ ಹಾಡಿಗೆ ಸಾಕಷ್ಟು ಖರ್ಚಾಗಿದೆ. ಸಾಮಾನ್ಯವಾಗಿ ಈ ರೀತಿಯ ಹಾಡನ್ನು ಮಾಡಲು ಕಷ್ಟ ಆಗುತ್ತದೆ. ಚಿನ್ಮಯ್ ಸರ್ ಒಳ್ಳೆ ಲಿರಿಕ್ಸ್ ಬರೆದುಕೊಟ್ಟರು. ಧನು ಮಾಸ್ಟರ್ ಅದ್ಭುತ ಕೊರಿಯೋಗ್ರಫಿ ಮಾಡಿದ್ದಾರೆ. ಮನೋಮೂರ್ತಿ ಅವರ ಸಂಗೀತದಲ್ಲಿ ಮಂಗ್ಲಿ ಮತ್ತು ಕುನಲ್ ಗಾಂಜಾವಾಲಾ ಹಿನ್ನೆಲೆ ಗಾಯನವಿದೆ. ನಟಿ ರಾಗಿಣಿ ದ್ವಿವೇದಿ ಮಾತನಾಡಿ, ತುಂಬಾ ಖುಷಿಯಾಗುತ್ತಿದೆ. ಒಂದೊಳ್ಳೆ ತಂಡದ ಜೊತೆ ಕೆಲಸ ಮಾಡಿರುವ ಸಂತಸ ಇದೆ. ಹಾಡಿನಲ್ಲಿ ರಾಜ್‌ವರ್ಧನ್ ತುಂಬಾ ಚೆನ್ನಾಗಿ ಕಾಣಿಸಿಕೊಂಡಿದ್ದಾರೆ. ಮನೋಮೂರ್ತಿ ಸರ್ ಇಷ್ಟು ಒಳ್ಳೆಯ ಮ್ಯೂಸಿಕ್ ಕೊಡುತ್ತಾರೆ ಎಂದುಕೊಂಡಿರಲಿಲ್ಲ. ಈ ಹಾಡು ಕೇಳಿ ಎಲ್ಲರಿಗೂ ಒಂದೊಳ್ಳೆ ಪಾಸಿಟಿವ್ ವೈಬ್ಸ್ ಬಂದಿದೆ ಎಂದುಕೊಳ್ಳುತ್ತೇನೆ. ಸಿನಿಮಾ ಮಾಡೋದು ತುಂಬಾ ಕಷ್ಟ, ಬಹಳ ತಾಳ್ಮೆಯಿಂದ, ಸಿನಿಮಾ ಮಾಡುವುದು ಒಂದು ಚಾಲೆಂಜ್ ಎಂದರು.

ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿರುವ ರಾಜವರ್ಧನ್ ಅವರಿಗೆ ಜೋಡಿಯಾಗಿ ತಪಸ್ವಿನಿ ಬಣ್ಣ ಹಚ್ಚಿದ್ದಾರೆ. ಪೊಲೀಸ್ ಪಾತ್ರದಲ್ಲಿ ದೀಪಕ್ ನಟಿಸಿದ್ದಾರೆ. ಕಬೀರ್ ಸಿಂಗ್ ಖಳನಾಯಕನ ಪಾತ್ರ ನಿರ್ವಹಿಸಿದ್ದಾರೆ. ಈ ಮಾಸ್ ಎಂಟರ್ಟೈನರ್‌ಗೆ ಕೆ.ಎಸ್. ಚಂದ್ರಶೇಖರ್ ಅವರ ಛಾಯಾಗ್ರಹಣ ಮತ್ತು ಜ್ಞಾನೇಶ್ ಬಿ. ಮಠದ್ ಸಂಕಲನವಿದೆ. ಲೈಫ್‌ಲೈನ್ ಫಿಲ್ಮ್ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ನರಸಿಂಹಮೂರ್ತಿ ಅವರು ಮಲ್ಲಿಕಾರ್ಜುನ ಕಾಶಿ ಮತ್ತು ಕ್ಸೇವಿಯರ್ ಫರ್ನಾಂಡಿಸ್ ಅವರೊಂದಿಗೆ ಗಜರಾಮವನ್ನು ನಿರ್ಮಿಸುತ್ತಿದ್ದಾರೆ. ☯

# 'ಕರಾವಳಿ'ಗೆ ರಮೇಶ್ ಇಂದಿರಾ ಎಂಟ್ರಿ


ಸಪ್ತ ಸಾಗರದಾಚೆ ಎಲ್ಲೋ ಚಿತ್ರದಲ್ಲಿ ಖಳನಾಯಕನ ಪಾತ್ರದ ಮೂಲಕ ಪ್ರೇಕ್ಷಕರ ಗಮನ ಸೆಳೆದಿದ್ದ ರಮೇಶ್ ಇಂದಿರಾ ಅವರು ಇದೀಗ ಪ್ರಜ್ವಲ್ ದೇವರಾಜ್ ಅಭಿನಯದ ಗುರುದತ್ತ ಗಾಣಿಗ ನಿರ್ದೇಶನದ ಕರಾವಳಿ ಸಿನಿಮಾದಲ್ಲಿ ಖಡಕ್ ಪಾತ್ರದಲ್ಲಿ ನಟಿಸಿದ್ದಾರೆ.

ಚಿತ್ರದಲ್ಲಿ ರಮೇಶ್ ಇಂದಿರಾ ಅವರು ವಿಲನ್ ಪಾತ್ರದಲ್ಲಿ ನಟಿಸಿದ್ದು, ದೀಪಾವಳಿ ಹಬ್ಬದಂದು ಚಿತ್ರ ತಂಡ ಸಿನಿಮಾದ ಪೋಸ್ಟರ್‌ನ್ನು ಬಿಡುಗಡೆ ಮಾಡಿದೆ.

ಪೋಸ್ಟರ್‌ನಲ್ಲಿ ರಮೇಶ್ ಇಂದಿರಾ ಅವರು, ಉದ್ದನೆಯ ಹಳೆ ಮರ್ಸಿಡೀಸ್ ಬೆಂಜ್ ಕಾರಿನ ಮೇಲೆ ಪಂಚೆ ತೊಟ್ಟು ಬರಿಮೈಯಲ್ಲಿ, ಹೆಗಲಿಗೆ ಟವೆಲ್ ಒಂದನ್ನು ಹಾಕಿಕೊಂಡು ಕೂತು, ಕೈಯಲ್ಲಿ ಉದ್ದನೆಯ ಸಿಂಗಲ್ ಶಾಟ್ ಬಂದೂಕು ಹಿಡಿದಿರುವ ಖಡಕ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದು, ಚಿತ್ರದ ಈ ಪೋಸ್ಟರ್ ಎಲ್ಲರ ಗಮನ ಸೆಳೆಯುತ್ತಿದೆ.

ಚಿತ್ರದಲ್ಲಿ ನಟ ಪ್ರಜ್ವಲ್ ದೇವರಾಜ್ ಅವರು ವಿಭಿನ್ನ ಪಾತ್ರದ ಮೂಲಕ ಪ್ರೇಕ್ಷಕರ ಮುಂದೆ ಬರುತ್ತಿದ್ದು, ಯಕ್ಷಗಾನ ಕಂಬಳ, ಮಹಿಷಾಸುರ ಹೀಗೆ ವೆರೈಟಿ ಗೆಟಪ್‌ನಲ್ಲಿ ಪ್ರಜ್ವಲ್ ಕಾಣಿಸಿಕೊಂಡಿದ್ದಾರೆ. ಹಾಗಾಗಿ ಈ ಸಿನಿಮಾದಲ್ಲಿ ಪ್ರಜ್ವಲ್ ಯಕ್ಷಗಾನ ಕಲಾವಿದನಾ ಅಥವಾ ಕಂಬಳ ಕೊಡಿಸುವವನಾ? ಡೈನಮಿಕ್ ಪ್ರಿನ್ಸ್ ಪಾತ್ರ ಯಾವುದು ಎನ್ನುವ ಕುತೂಹಲ ಹೆಚ್ಚಾಗಿದೆ.

'ಕರಾವಳಿ' ಈಗಾಗಲೇ 60ರಷ್ಟು ಚಿತ್ರೀಕರಣ ಮುಗಿಸಿದೆ. ಸಿನಿಮಾದಲ್ಲಿ ಪ್ರಜ್ವಲ್ ಗೆ ನಾಯಕಿಯಾಗಿ ನಟಿ ಸಂಪದಾ ಕಾಣಿಸಿಕೊಂಡಿದ್ದಾರೆ. ಬಹುತೇಕ ಸಿನಿಮಾ ಕರಾವಳಿಯ ಸುತ್ತಮುತ್ತನೇ ಚಿತ್ರೀಕರಣಗೊಂಡಿದೆ. ಈ ಸಿನಿಮಾಗೆ ಗುರುದತ್ ಗಾಣಿಗ ನಿರ್ದೇಶನದ ಜೊತೆಗೆ ಅವರದೇ ಗಾಣಿಗ ಫಿಲಮ್ಸ್ ಹಾಗೂ ವಿಕೆ ಫಿಲಂ ಅಸೋಸಿಯೇಷನ್‌ನಲ್ಲಿ ನಿರ್ಮಾಣವಾಗುತ್ತಿದೆ. ಕರಾವಳಿ ಮನುಷ್ಯ ಹಾಗೂ ಪ್ರಾಣಿ ಮಧ್ಯೆ ನಡೆಯುವ ಸಂಘರ್ಷದ ಕಥೆ. ಪಕ್ಕಾ ಹಳ್ಳಿ ಬ್ಯಾಕ್ ಡ್ರಾಪ್‌ನಲ್ಲಿ ಸಿನಿಮಾ ಮೂಡಿ ಬರಲಿದೆ. ಈ ಚಿತ್ರಕ್ಕೆ ಸಚಿನ್ ಬಸ್ರೂರು ಸಂಗೀತ ಸಂಯೋಜನೆ ಮಾಡಿದ್ದಾರೆ. ☯








# 'ಗುಡ್'ನ್ಯೂಸ್ ಕೊಟ್ಟ ಸಿಂಹಪ್ರಿಯಾ



ನಟ ವಸಿಷ್ಠ ಸಿಂಹ ಮತ್ತು ಹರಿಪ್ರಿಯಾ ದಂಪತಿ ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವ ದಿನದಂದು ಗುಡ್ ನ್ಯೂಸ್ ಕೊಟ್ಟಿದ್ದಾರೆ. ಶೀಘ್ರದಲ್ಲೇ ತಂದೆ-ತಾಯಿಯಾಗುತ್ತಿರುವ ಸಿಹಿಸುದ್ದಿಯನ್ನು ಈ ಜೋಡಿ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದೆ. ಮಾಲ್ಡೀವ್ಸ್‌ನಲ್ಲಿ ವಿಶೇಷ ಫೋಟೋಶೂಟ್ ಮಾಡಿಸಿರುವ ಸಿಂಹಪ್ರಿಯಾ ದಂಪತಿ, ಮೊದಲ ಮಗುವಿನ ನಿರೀಕ್ಷೆಯಲ್ಲಿರುವುದಾಗಿ ಬಹಿರಂಗಪಡಿಸಿದೆ. ಫೋಟೋಗಳಲ್ಲಿ ಹರಿಪ್ರಿಯಾ ಬೇಬಿ ಬಂಪ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಇನ್ನೂ ನಟ ವಸಿಷ್ಠ ಸಿಂಹ ಅವರು ಬೇಬಿ ಬಂಪ್ ಹಿಡಿದು ಕ್ಯಾಮೆರಾಗೆ ಪೋಸ್ ಕೊಟ್ಟಿದ್ದಾರೆ.

ಈ ಫೋಟೋಗಳನ್ನು ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿರುವ ನಟಿ ಹರಿಪ್ರಿಯಾ ಅವರು, ಈ ಶುಭ ದಿನದಂದು ನಿಮ್ಮೆಲ್ಲರೊಡನೆ ಶುಭ ಸುದ್ದಿಯೊಂದನ್ನು ಹಂಚಿಕೊಳ್ಳುವಾಸೆ ನಮ್ಮದು. ನಿಮ್ಮಲ್ಲಿ ಬಹುತೇಕರು ಊಹಿಸಿದ್ದು ಸರಿಯೇ. ಹೌದು, ನಾವು ನಮ್ಮ 'ಕುಡಿ'ಗಾಗಿ ಎದುರು ನೋಡುತ್ತಿದ್ದೇವೆ. ನಿಮ್ಮೆಲ್ಲರ ಹಾರೈಕೆ, ಆಶೀರ್ವಾದಗಳ ನಿರೀಕ್ಷೆಯಲ್ಲಿ ಎಂದು ಬರೆದಿದ್ದಾರೆ.

ನಟಿ ಹರಿಪ್ರಿಯಾ ಅವರು ಇತ್ತೀಚೆಗೆ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ವಿಡಿಯೋವೊಂದನ್ನು ಶೇರ್ ಮಾಡಿಕೊಂಡಿದ್ದರು. ವಿಡಿಯೋದಲ್ಲಿ ನಟಿ ಗರ್ಭಿಣಿ ಹಾಗೇ ಕಾಣಿಸಿಕೊಂಡಿದ್ದರು. ಬಳಿಕ ಅಭಿಮಾನಿಗಳು ಸಾಕಷ್ಟು ಪ್ರಶ್ನೆಗಳ ಸುರಿಮಳೆ ಸುರಿಸಿದ್ದರು. ಇದೀಗ ಅಭಿಮಾನಿಗಳ ಊಹೆ ನಿಜವಾಗಿದೆ. ☯

Vol. 40 No. 22 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com